ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 31 ಶನಿವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 254 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com   ಜಾಹೀರಾತು: ad@mysurumithra.com

ಗೆಜ್ಜೆಹೆಜ್ಜೆ ನೃತ್ಯಗಿರಿ –25 ಕೃತಿ ಬಿಡುಗಡೆ



ಮೈಸೂರು, ಡಿ.30(ಎಸ್‌ಪಿಎನ್)– ನೃತ್ಯಗಿರಿ ಸಂಸ್ಥೆಯ ಬೆಳ್ಳಿಹಬ್ಬದ ಅಂಗವಾಗಿ ಲೇಖಕಿ ಡಾ.ದೀಪಾ ಫಡ್ಕೆ ಸಂಪಾದಕತ್ವದ 'ಗೆಜ್ಜೆಹೆಜ್ಜೆ ನೃತ್ಯಗಿರಿ–25' ಕೃತಿಯನ್ನು ಲೇಖಕ ದಿವಾಕರ ಹೆಗಡೆ ಶುಕ್ರವಾರ ಬಿಡುಗಡೆಗೊಳಿಸಿದರು.

ಮೈಸೂರು ಆದಿಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತಿ ಸಭಾಂಗಣದಲ್ಲಿ ನೃತ್ಯಗಿರಿ ಬೆಳ್ಳಿಹಬ್ಬ ವರ್ಷಾಚರಣೆಯ ಅಂಗವಾಗಿ ಏರ್ಪಡಿಸಿದ್ದ ಸಮಾರಂಭದಲ್ಲಿ ಕೃತಿ ಬಿಡುಗಡೆಗೊಳಿಸಿ ಅವರು, ಮಾತನಾಡಿದರು.

'ಕಲಾ–ಶಿವ–ನಟರಾಜ', 'ರಾಸಲೀಲೆ', 'ನಾನು–ನೀನು–ಆನು–ತಾನು', 'ವಾಗ್ಗೇಯನಿಧಿ ಶ್ರೀ ಜಯಚಾಮರಾಜೇಂದ್ರ ಒಡೆಯರ್', 'ಸಂಸ್ಕೃತ ನಾಟಕಗಳಲ್ಲಿ ನಾಟ್ಯ, ನೃತ್ಯ, ಒಂದು ಸಮೀಕ್ಷೆ', 'ಕನ್ನಡ ಕವಿಗಳ ಜವನಿಕೆ ಮತ್ತು ಪುಷ್ಪಾಂಜಲಿಯ ಚಿತ್ರಣ', 'ಶಾಸ್ತ್ರೀಯ ನೃತ್ಯ–ಸಮಕಾಲೀನ ಸವಾಲುಗಳು', 'ನೀಲಾಂಜನೆಯ ನಾಟ್ಯ', 'ಹರಿಹರನ ರಗಳೆಗಳಲ್ಲಿ ವಾದ್ಯವೈಭವ', 'ಪ್ರಣಯತರಂಗಾರಂಗ', 'ಕಾಳಿದಾಸನ ಮಾಳವಿಕಾಗ್ನಿಮಿತ್ರ', ನಾಟಕದಲ್ಲಿ ನಾಟ್ಯಪ್ರಸಂಗ, 'ಬೆಡಗಿನ ಭರತನಾಟ್ಯದ ಸೊಬಗಿನ ಶೈಲಿಗಳು', ಸೇರಿದಂತೆ ಒಟ್ಟು 18 ಪ್ರಬಂಧಗಳಿವೆ. ಈ ಕೃತಿಯ ಪ್ರಬಂಧಗಳನ್ನು ಅನೇಕ ಗಣ್ಯ ಸಾಹಿತಿಗಳು ಬರೆದಿದ್ದು, ಲೇಖಕಿ ದೀಪಾ ಫಡ್ಕೆ ಸಂಪಾದಕತ್ವದ 'ಗೆಜ್ಜೆಹೆಜ್ಜೆ ನೃತ್ಯಗಿರಿ–25' ಕೃತಿಯಲ್ಲಿ ವಿವಿಧ ಕಲಾ ಪ್ರಕಾರವನ್ನು ಓದುಗರಿಗೆ ಪರಿಚಯಿಸುತ್ತಿದೆ ಎಂದರು.

ಗಾನಭಾರತೀ ಮಹಾಪೋಷಕ ಹಾಗೂ ಶಸ್ತ್ರ ತಜ್ಞ ಡಾ.ಸಿ.ಜಿ.ನರಸಿಂಹನ್ ಮಾತನಾಡಿ, ಪ್ರತಿಯೊಬ್ಬ ಸಾಧಕನಿಗೂ ಗುರಿ ಸಾಧಿಸಲು ಛಲ ಇರಬೇಕು. ಆ ಸಾಧನೆಯ ಮಾರ್ಗವನ್ನು ಕಂಡುಕೊಳ್ಳಲು ಯಾವುದೇ ಕಠಿಣ ಸನ್ನಿವೇಶ ಬಂದರೂ ಲೆಕ್ಕಿಸದೇ ತನ್ನ ಹಾದಿಯಲ್ಲಿ ಗುರಿ ಮುಟ್ಟಿ, ಜನರ ಮೆಚ್ಚುಗೆ ಗಳಿಸಬೇಕು. ಈ ಕೆಲಸವನ್ನು ಖ್ಯಾತ ನೃತ್ಯಪಟು ಡಾ.ಕೃಪಾ ಫಡ್ಕೆ ಸಾಧಿಸಿ, ಈ ವೇದಿಕೆಯಲ್ಲಿ ಸಾಕ್ಷಿಯಾಗಿದ್ದಾರೆ. ಅವರು 25 ವರ್ಷಗಳ ಹಿಂದೆ ಮೈಸೂರಿಗೆ ಆಗಮಿಸಿ, ನೃತ್ಯಗಿರಿ ಸಂಸ್ಥೆ ಮೂಲಕ ದೇಶ–ವಿದೇಶಗಳಲ್ಲಿ ನೃತ್ಯ ಪ್ರದರ್ಶನ ನೀಡಿ, ಜನರ ವಿಶ್ವಾಸ ಗಳಿಸಿರುವುದು ಹೆಮ್ಮೆಯ ವಿಷಯ ಎಂದರು.

ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು' ದಾಸರ ಗೀತೆಯಂತೆ, ಕೃಪಾ ಫಡ್ಕೆ ಅವರು, ಕಳೆದ 25 ವರ್ಷಗಳ ಹಿಂದೆ ನೃತ್ಯಗಿರಿ ಸಂಸ್ಥೆ ಸ್ಥಾಪಿಸಿ, ಮಕ್ಕಳಿಗೆ ನೃತ್ಯ ಹೇಳಿಕೊಟ್ಟು ಸಾವಿರಾರು ಶಿಷ್ಯಕೋಟಿಯನ್ನು ಸಂಪಾದಿಸಿದ್ದಾರೆ. ಸಾಂಸ್ಕೃತಿಕ ನಗರಿ ಮೈಸೂರಿಗೆ ಅವರ ಕಲಾ ಸೇವೆಯೂ ಸೇರಿಕೊಂಡಿದೆ. ಅಲ್ಲದೆ, ನೃತ್ಯಗಿರಿ ಸಂಸ್ಥೆ ಈಗ ಆಚರಿಸಿಕೊಳ್ಳುತ್ತಿರುವ ಬೆಳ್ಳಿಹಬ್ಬದ ಜೊತೆಗೆ ಸುವರ್ಣ ಮಹೋತ್ಸವವನ್ನು ಆಚರಿಸಲಿ ಎಂದು ಶುಭ ಹಾರೈಸಿದರು.

ಮಂಡ್ಯದ ಸಾಹಿತಿ ಡಾ.ಪ್ರದೀಪ್ ಕುಮಾರ್ ಹೆಬ್ರಿ ಅವರು, ಗೆಜ್ಜೆಹೆಜ್ಜೆ ನೃತ್ಯಗಿರಿ–25' ಕೃತಿ ಕುರಿತು ಸ್ವರಚಿತ ಕವಿತೆ ವಾಚನ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಕಾರ್ಯಕ್ರಮ ಕುರಿತು ಮಾತನಾಡಿದರು.

ವೇದಿಕೆ ಕಾರ್ಯಕ್ರಮದ ನಂತರ ನೃತ್ಯಗಿರಿ ವಿದ್ಯಾರ್ಥಿಗಳು ಭರತನಾಟ್ಯ ಕಾರ್ಯಕ್ರಮ ನಡೆಸಿಕೊಟ್ಟರು. ಪಕ್ಕ ವಾದ್ಯದಲ್ಲಿ ನಟುವಾಂಗ ಸಮೀಕ್ಷಾ ಮನುಕುಮಾರ್, ಮೃದಂಗ ವಿಕ್ರಂ ಭಾರದ್ವಾಜ್, ಗಾಯನ ಪೂಜಾ ಸುಗಮ್, ಕೊಳಲು ವಿದ್ವಾನ್ ಎ.ಪಿ.ಕೃಷ್ಣ ಪ್ರಸಾದ್ ಸಾಥ್ ನೀಡಿದರು. ವೇದಿಕೆಯಲ್ಲಿ ವಿದುಷಿ ಮಧುಸೂದನ್, ಡಾ.ಕೃಪಾ ಫಡ್ಕೆ, ಲೇಖಕಿ ದೀಪಾ ಫಡ್ಕೆ ಉಪಸ್ಥಿತರಿದ್ದರು.

ನಾಳೆ ಪ್ರತಿಭಾ ಪುರಸ್ಕಾರ, ಗಾಣಸಿರಿ ಧ್ವನಿಸುರಳಿ ಬಿಡುಗಡೆ

ಮೈಸೂರು, ಡಿ.30(ಆರ್‌ಕೆಬಿ)– ಮೈಸೂರು, ಮಂಡ್ಯ, ಚಾಮರಾಜನಗರ ಗಾಣಿಗ ಮಹಾಸಭಾ ವತಿಯಿಂದ ಕರ್ನಾಟಕ ರಾಜ್ಯ ಗಾಣಿಗ ಗೆಳೆಯರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಜ.1ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಚಿಕ್ಕಮ್ಮ ನಿಕೇತನ ಕಲ್ಯಾಣ ಮಂಟಪದಲ್ಲಿ ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ 2021–22ರ ಪ್ರತಿಭಾ ಪುರಸ್ಕಾರ ಮತ್ತು ಗಾಣಸಿರಿ ಧ್ವನಿಸುರಳಿ ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ ಎಂದು ಗಾಣಿಗ ಮಹಾಸಭಾ ಅಧ್ಯಕ್ಷ ಡಾ.ಕೆ.ವಿಜಯಕುಮಾರ್ ತಿಳಿಸಿದ್ದಾರೆ.

ಮಾಜಿ ಸಂಸದ ಆರ್.ಧ್ರುವನಾರಾಯಣ್ ಉದ್ಘಾಟನೆ ನೆರವೇರಿಸುವರು. ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡುವರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಅನಂತು, ಮಾಜಿ ಎಂಎಲ್‌ಸಿ ಆರ್.ಧರ್ಮಸೇನಾ ಇನ್ನಿತರು ಅತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದ್ದಾರೆ.

Promotional Feature

ಕೆ.ಆರ್. ಕ್ಷೇತ್ರದಲ್ಲಿ ಯುವ ನಾಯಕತ್ವಕ್ಕೆ ಎನ್.ಎಂ. ನವೀನ್‌ಕುಮಾರ್ ಮುನ್ನುಡಿ...


ಕೃಷ್ಣರಾಜ ಕ್ಷೇತ್ರದ ಜನ ಉದಯೋನ್ಮುಖ ನಾಯಕನ ನಿರೀಕ್ಷೆಯಲ್ಲಿದ್ದರೆ, ನವೀನ್‌ಕುಮಾರ್ 'ಬ್ರಹ್ಮಾಸ್ತ್ರ'

ಬ್ರಾಹ್ಮಣ ಸಮುದಾಯದ ಮತದಾರರು ಅತೀ ಹೆಚ್ಚಾಗಿರುವ ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಮಾಜಿ ಅಧ್ಯಕ್ಷ ಕೆ.ಆರ್. ಮೋಹನ್‌ಕುಮಾರ್ ಅವರ ಪುತ್ರ ಎನ್.ಎಂ.ನವೀನ್‌ಕುಮಾರ್ ಕಾಂಗ್ರೆಸ್‌ನ ಉದಯೋನ್ಮುಖ ನಾಯಕರಾಗಿ ರೂಪುಗೊಂಡಿದ್ದು, ಕೆ.ಆರ್. ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೇ ತಮ್ಮ ತಂದೆ ಮೋಹನ್‌ಕುಮಾರ್ ಅವರ ಪ್ರಭಾವದಿಂದ ಕ್ಷೇತ್ರದಾದ್ಯಂತ ಸಮಾಜ ಸೇವಾ ಕಾರ್ಯಗಳನ್ನು ನಡೆಸುತ್ತಾ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬ್ರಾಹ್ಮಣ ಸಮುದಾಯದಲ್ಲಿ ಈ ಕ್ಷೇತ್ರದಲ್ಲಿ ಶಾಸಕ ಎಸ್.ಎ. ರಾಮದಾಸ್ ಮತ್ತು ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಅವರುಗಳು ರಾಜಕೀಯ ನಾಯಕರಾಗಿ ರೂಪುಗೊಂಡಿದ್ದು, ಮತ್ತೋರ್ವ ಯುವ ಪ್ರತಿಭೆ ರಾಜಕೀಯ ಕ್ಷೇತ್ರದಲ್ಲಿ ನಾಯಕನಾಗಿ ಹೊರಹೊಮ್ಮಬೇಕೆಂಬ ಅಭಿಲಾಷೆಯನ್ನು ಈ ಸಮಾಜ ಹೊಂದಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಅದಕ್ಕೆ ತಕ್ಕಂತೆ ನವೀನ್‌ಕುಮಾರ್ ಬ್ರಾಹ್ಮಣ ಸಂಘ–ಸಂಸ್ಥೆಗಳು ಹಾಗೂ ಹಿರಿಯರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು, ಅವರ ಗಮನ ಸೆಳೆಯುತ್ತಿದ್ದಾರೆ.

ಸಂಘಟನಾ ಚತುರರಾಗಿರುವ ಇವರು ಕಾಂಗ್ರೆಸ್ ಪಕ್ಷದ ವತಿಯಿಂದ ನಡೆದ ಅನೇಕ ಹೋರಾಟಗಳಲ್ಲಿ ಭಾಗಿಯಾಗಿದ್ದಲ್ಲದೇ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ಈ ಕ್ಷೇತ್ರದಿಂದ 8 ಸಾವಿರಕ್ಕೂ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಿಸುವ ಮೂಲಕ ಮೈಸೂರು ನಗರದಲ್ಲೇ ಅತೀ ಹೆಚ್ಚು ಸದಸ್ಯರನ್ನು ನೋಂದಾಯಿಸಿದ ಹೆಗ್ಗಳಿಕೆಗೆ ಪಾತ್ರರಾಗಿ ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅಲ್ಲದೇ ಕ್ಷೇತ್ರದ ಪ್ರತಿ ವಾರ್ಡ್‌ನಲ್ಲೂ ಜಾತ್ಯಾತೀತವಾಗಿ ಯುವಕರನ್ನು ಸಂಘಟಿಸುವ ಕಾರ್ಯವನ್ನು ಯಶಸ್ವಿಯಾಗಿ ಮಾಡುತ್ತಾ ಬಂದಿದ್ದಾರೆ.

ಎಐಸಿಸಿ ನಾಯಕ ರಾಹುಲ್ ಗಾಂಧಿ ನಡೆಸಿದ ಭಾರತ ಐಕ್ಯತಾ ಯಾತ್ರೆಗೆ ಕೆ.ಆರ್. ಕ್ಷೇತ್ರದಿಂದ ಜನರನ್ನು ಸಂಘಟಿಸಿ ಪ್ರಚಾರ ವಾಹನ ಸಿದ್ಧತೆ, ಭಿತ್ತಿಪತ್ರ ವಿತರಣೆ, ಫ್ಲೆಕ್ಸ್ ಅಳವಡಿಕೆ



ಮುಂತಾದವುಗಳನ್ನು ಮಾಡುವ ಮೂಲಕ ಗಮನ ಸೆಳೆದಿದ್ದಾರೆ. ಭಾರತ ಐಕ್ಯತಾ ಯಾತ್ರೆಯಲ್ಲಿ ರಾಹುಲ್ ಗಾಂಧಿಯವರೊಂದಿಗೆ ಹೆಜ್ಜೆ ಹಾಕುವ ಮೂಲಕ ಗಮನ ಸೆಳೆದಿದ್ದಾರೆ.

ಕೋವಿಡ್ ಸಂಕಷ್ಟ ಕಾಲದಲ್ಲಿ ಕೆ.ಆರ್.ಕ್ಷೇತ್ರದ ಸಾವಿರಾರು ಅಶಕ್ತರಿಗೆ ಪಡಿತರ ಕಿಟ್ ವಿತರಣೆ, ಆಹಾರ ವಿತರಣೆ ಹಾಗೂ ವೈದ್ಯಕೀಯ ಸೌಲಭ್ಯ ಒದಗಿಸುವ ಮೂಲಕ ನೆರವಿಗೆ ನಿಂತಿದ್ದಲ್ಲದೇ, ಹಲವಾರು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಸಹಾಯ ಹಸ್ತ ಚಾಚುತ್ತಿದ್ದಾರೆ.

ಸಿದ್ದರಾಮಯ್ಯ ಪುತ್ರ ಶಾಸಕ ಡಾ. ಯತೀಂದ್ರ ಅವರ ಒಡನಾಡಿಯಾಗಿರುವ ಇವರು, ಹಲವಾರು ಹೋರಾಟಗಳಲ್ಲಿ ಅವರೊಂದಿಗೆ ಕೈಜೋಡಿಸಿದ್ದಾರೆ. ಯತೀಂದ್ರ ಅವರ ಮಾರ್ಗದರ್ಶನದಂತೆ ಕೆ.ಆರ್. ಕ್ಷೇತ್ರದಲ್ಲಿ ಪಕ್ಷವನ್ನು ಸದೃಢವಾಗಿ ಸಂಘಟಿಸುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ.

ಮೈಸೂರಿನ ಮರಿಮಲ್ಲಪ್ಪ ಕಾಲೇಜಿನಲ್ಲಿ ಬಿಬಿಎಂ ಪದವಿ ಪಡೆದ ನಂತರ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ನಿರ್ವಹಣೆ ಮತ್ತು ಸಾರ್ವಜನಿಕ ನೀತಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಇವರು, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರ ವ್ಯಾಸಂಗ ಮಾಡಿದ್ದಾರೆ. ಉನ್ನತ ಶಿಕ್ಷಣ ಪಡೆದಿರುವ ನವೀನ್‌ಕುಮಾರ್ ಅದನ್ನು ಸಾರ್ವಜನಿಕ ಸೇವೆಗಾಗಿ ಬಳಸಲು ನಿರ್ಧರಿಸಿದ್ದು, ತಾನು ಶಾಸಕನಾಗಿ ಆಯ್ಕೆಯಾದರೆ ಕ್ಷೇತ್ರದ ಜನರ ಆರ್ಥಿಕ ಸ್ವಾವಲಂಬನೆ ಹೆಚ್ಚಿಸುವ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ರೂಪಿಸುವುದಾಗಿ ಹೇಳುತ್ತಾರೆ. ಕ್ಷೇತ್ರದಲ್ಲಿ ತಮ್ಮ ಪರ ಒಲವು ಹೊಂದಿರುವ ಯುವ ಪಡೆ ಕಾರ್ಯನಿರ್ವಹಿಸುತ್ತಿದ್ದು, ತಾವು ಅವರ ಸಹಕಾರದೊಂದಿಗೆ ಯಾವುದೇ ಅಧಿಕಾರ ಇಲ್ಲದಿದ್ದರೂ ಜನಸೇವೆಯಲ್ಲಿ ತೊಡಗಿದ್ದಾರೆ.

ಕೆ.ಆರ್.ಕ್ಷೇತ್ರ ಹೆಚ್ಚಿನ ಬ್ರಾಹ್ಮಣ ಮತದಾರರನ್ನು ಹೊಂದಿದ್ದು, ಕಾಂಗ್ರೆಸ್ ಪಕ್ಷಕ್ಕೆ ಬ್ರಾಹ್ಮಣ ಅಭ್ಯರ್ಥಿಯೇ ಬ್ರಹ್ಮಾಸ್ತ್ರ ಎಂದು ಅಭಿಪ್ರಾಯಪಟ್ಟಿರುವ ಕ್ಷೇತ್ರದ ಮತದಾರರು, ಹೊಸದಾಗಿ ಯುವಕರಿಗೆ ನಾಯಕತ್ವ ನೀಡುವ ನಿಟ್ಟಿನಲ್ಲಿ ಚಿಂತನೆ ನಡೆಸುತ್ತಿದ್ದು, ಕಾಂಗ್ರೆಸ್ ಪಕ್ಷದಿಂದ ವಿದ್ಯಾವಂತ ಯುವ ಮುಖಂಡ ನವೀನ್‌ಕುಮಾರ್ ಅವರಿಗೆ ಟಿಕೇಟ್ ನೀಡಿದರೆ ತಮ್ಮ ಕ್ಷೇತ್ರಕ್ಕೆ ಹೊಸ ಚಿಂತನೆಗಳುಳ್ಳ ಯುವ ನಾಯಕ ದೊರೆಯಬಹುದು ಎಂದು ಹೇಳುತ್ತಿದ್ದಾರೆ. ಕಾಂಗ್ರೆಸ್ ಪಕ್ಷವು ಯುವನಾಯಕನಾಗಿರುವ ದೂರದೃಷ್ಟಿ ಹೊಂದಿರುವ ಇವರಿಗೆ ಅವಕಾಶ ನೀಡಿದರೆ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಕಟ್ಟಿಟ್ಟ ಬುತ್ತಿ ಎಂಬ ಮಾತುಗಳು ಕ್ಷೇತ್ರದಲ್ಲಿ ವ್ಯಾಪಕವಾಗಿ ಕೇಳಿಬರುತ್ತಿವೆ.




ಮರಿಮಲ್ಲಪ್ಪ ಕಾಲೇಜಿನಲ್ಲಿ ಬಿಬಿಎಂ ಪದವಿ ಪಡೆದ ನಂತರ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ನಿರ್ವಹಣೆ ಮತ್ತು ಸಾರ್ವಜನಿಕ ನೀತಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದದ್ದಲ್ಲದೇ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರ ವ್ಯಾಸಂಗ ಮಾಡಿರುವ ನವೀನ್‌ಕುಮಾರ್ ಕೆ.ಆರ್. ಕ್ಷೇತ್ರದಿಂದ ಸ್ಪರ್ಧಿಸಬೇಕೆಂಬ ಆಕಾಂಕ್ಷೆ ಹೊಂದಿರುವವರಲ್ಲಿ ಅತೀ ಹೆಚ್ಚು ವ್ಯಾಸಂಗ ಮಾಡಿದವರಾಗಿದ್ದಾರೆ. ಅಲ್ಲದೇ, ಲಂಡನ್‌ನಲ್ಲಿ ಇವರು ಆಯ್ಕೆ ಮಾಡಿಕೊಂಡ ವಿಷಯಗಳೂ ಕೂಡ ಸಾರ್ವಜನಿಕರ ಹಿತಾಸಕ್ತಿಗೆ ಪೂರಕವಾಗಿದೆ.





ಕೃಷ್ಣರಾಜ ಕ್ಷೇತ್ರದಲ್ಲಿ ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇತರ ಸಮುದಾಯಗಳ ಜನರು ಕೂಡ ಈ ಕ್ಷೇತ್ರದಲ್ಲಿದ್ದು, ಬಹುಪಾಲು ಜನರು ಜಾತ್ಯಾತೀತವಾಗಿ, ಆರ್ಥಿಕವಾಗಿ ಹಿಂದುಳಿದಿದ್ದಾರೆ. ಇವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕು, ಎಲ್ಲರೂ ಆರ್ಥಿಕ ಸಬಲತೆ ಹೊಂದಬೇಕು ಹಾಗೂ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಹೆಚ್ಚೆಚ್ಚು ನಡೆಯಬೇಕು ಎಂಬುದು ನನ್ನ ಅಭಿಲಾಷೆಯಾಗಿದ್ದು, ಶಿಕ್ಷಣದಿಂದ ಪಡೆದಿರುವ ಅನುಭವ ಹಾಗೂ ತಂದೆ ಮೋಹನ್‌ಕುಮಾರ್ ಅವರು ಮುಡಾ ಅಧ್ಯಕ್ಷರಾಗಿ, ಒಣಭೂಮಿ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಕೈಗೊಂಡಿದ್ದ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿದ ಅನುಭವದಿಂದ ಕ್ಷೇತ್ರದ ಅಭಿವೃದ್ಧಿಗೆ ಹಾಗೂ ಇಲ್ಲಿನ ಜನರ ಆರ್ಥಿಕ ಸಬಲತೆಗಾಗಿ ನನ್ನದೇ ಆದ ದೃಷ್ಟಿಕೋನ ಹೊಂದಿದ್ದೇನೆ. ಕಾಂಗ್ರೆಸ್ ಟಿಕೆಟ್ ದೊರೆತರೆ ಗೆಲ್ಲುವ ವಿಶ್ವಾಸವೂ ಇದೆ.



– ಎನ್.ಎಂ.ನವೀನ್‌ಕುಮಾರ್, ಕಾಂಗ್ರೆಸ್ ಯುವ ಮುಖಂಡ

ಸಿದ್ದರಾಮಯ್ಯರ ಪುತ್ರ ಡಾ. ಯತೀಂದ್ರ ಅವರ ಒಡನಾಡಿಯಾಗಿರುವ ನವೀನ್ ಕುಮಾರ್ ಅವರು ಅನೇಕ ವಿಷಯಗಳಲ್ಲಿ ಯತೀಂದ್ರ ಅವರೊಂದಿಗೆ ಕೈಜೋಡಿಸಿದ್ದಾರೆ. ರಾಜಕೀಯವಾಗಿಯೂ ಅವರೊಡಗೂಡಿ ಹೋರಾಟಗಳಲ್ಲಿ ಭಾಗಿಯಾಗಿದ್ದಾರೆ. ಸಾಮಾಜಿಕ ಕಳಕಳಿಯುಳ್ಳ ಇಂತಹ ವಿದ್ಯಾವಂತ ಯುವಕರು ವಿಧಾನಸಭೆ ಪ್ರವೇಶಿಸಿದರೆ ಸೂಕ್ತ ಎಂಬ ಅಭಿಪ್ರಾಯ ಯುವಕರಿಂದ ಕೇಳಿಬರುತ್ತಿದೆ.





ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಡಿಸೆಂಬರ್ 31 ಶನಿವಾರ 2022 | ₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

43

ಸಂಪುಟ: 43 | ಸಂಚಿಕೆ: 254 | ಪುಟಗಳು: 12
ಸುದ್ದಿ ಮತ್ತು ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com



22ನೇ ವರ್ಷದ ಪುಣ್ಯಸ್ಮರಣೆ



"ನಿಮ್ಮ ದಯೆಯೆ ನಮಗೆ ಶ್ರೀರಕ್ಷೆ"



ನೀವು ನಮ್ಮನ್ನಗಲಿ ಇಂದಿಗೆ 22 ವರ್ಷಗಳು
ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀ ಪಿ.ಶಿವಪ್ಪರವರು

ನಿಧನ: 31.12.2001

ಸಂಸ್ಥಾಪಕ ಅಧ್ಯಕ್ಷರು, ಆರ್ಯ ಈಡಿಗರ ಸಂಘ, ಕೊಣನೂರು,
ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ

ದುಃಖತಪ್ತರು:

ಪತ್ನಿ ರತ್ನಮ್ಮ, ಮಗ ಶ್ರೀಕಾಂತ್.ಎಸ್, ಸೊಸೆ ಸರಸ್ವತಿ.ಜೆ
ಮಾಲೀಕರು, (ಎಸ್.ಆರ್.ವೈನ್ಸ್, ಜಯಪುರ &
ಎಸ್.ಡಿ.ವೈನ್ಸ್ ತಳೂರು ಸರ್ಕಲ್)
ಮಗಳು ಅಳಿಯಂದಿರಾದ ವನಿತಾದಿನೇಶ್ ಮತ್ತು
ಮಾಲತಿಸುನೀಲ್, ಮೊಮ್ಮಕ್ಕಳಾದ ಶಿವಿನಯ್, ನೂತನ,
ಅನ್ವಿತಾ, ಧೀಮಂತ್, ಕುಂಜಲ್ ಹಾಗೂ ಎಸ್.ಆರ್.ವೈನ್ಸ್
ಸಹಪಾಠಿ ಮಿತ್ರರು, ಜಯಪುರ, ಮೈಸೂರು

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಎಲ್ಲಿಗೆ ಹೊಂಟ್ರಿ ಮಟ ಮಟ ಮಧ್ಯಾಹ್ನ ಬಿಸಿಲಿನಲ್ಲಿ...!

ಗಂಡ : ಮಾಳಗಿ ಮೇಲೆ ಹೋಗಿ ಗುಬ್ಬಿಗಳಿಗೆ ನೀರು ಇಟ್ಟು ಬರ್ತಿನಿ, ಪಾಪ ಬಹಳ ಬಿಸಿಲು ಐತೇ

ಹೆಂಡತಿ : ಬರ್ರಿ... ನಿಮ್ಮ ಎಲ್ಲಾ ಗುಬ್ಬಿಗಳು ತವರು ಮನೆಗೆ ಹೋಗಿದಾವ...!

ಮೈಸೂರು ಮಿತ್ರ

ಶನಿವಾರ, 31 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕೃತಿ ಕೆಟ್ಟದಿದ್ದು, ಮನಸ್ಸು ಸದಾ ಕೆಡುಕು ಬಯಸುತ್ತಿದ್ದು, ಸಜ್ಜನರಂತೆ ಮುಖವಾಡ ಧರಿಸುವವರ ಜನರ ಬಗ್ಗೆ ಎಚ್ಚರದಿಂದಿರಬೇಕು. –ದ.ರಾ. ಬೇಂದ್ರೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹತ್ತೋಕೆ ಮೊದಲು ಕುದುರೆ ನೋಡು, ಬಿತ್ತೋಕೆ ಮೊದಲು ಹೊಲ ನೋಡು

ನಿಮ್ಮ ಪತ್ರಗಳು

ವೀರ ಮಾತೆಗೆ ನಮೋ ನಮಃ

ಮಾನ್ಯರೆ,



ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರ ತಾಯಿ, ಶ್ರೀಮತಿ ಹೀರಾ ಬೆನ್ ತಮ್ಮ 100ನೇ ವಯಸ್ಸಿನಲ್ಲಿ ವಯೋಸಹಜ ಕಾರಣ ಗಳಿಂದಾಗಿ ನಿಧನ ಹೊಂದಿರುವುದು ನೋವಿನ ಸಂಗತಿ. ಜೂನ್ 18 1923 ರಂದು ಗುಜರಾತ್ ರಾಜ್ಯದ ಮೆಹ್ಸಾನ ಜಿಲ್ಲೆಯ ವಾದ್ ನಗರದಲ್ಲಿ ಜನಿಸಿದ ಹೀರಾ ಬೆನ್ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಐವರು ಗಂಡು ಮಕ್ಕಳು ಹಾಗೂ ಓರ್ವ ಮಗಳಿಗೆ ಜನ್ಮ ನೀಡಿದ ವೀರ ಮಾತೆ. ಹೀರಾ ಬೆನ್ ಅವರ ಪತಿ ಲೇಟ್ ದಾಮೋದರ ದಾಸ್ ಅವರು ಚಹ ಮಾರುತ್ತಿದ್ದರು ಎಂದು ಹೇಳಲಾಗುತ್ತದೆ. ಅವರ ಜೊತೆ ಹೀರಾ ಬೆನ್ ಅವರ ಮದುವೆ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ನೆರವೇರಿತು.

ಅತ್ಯಂತ ಸರಳ ಹಾಗೂ ಸಾತ್ವಿಕ ಜೀವನವನ್ನು ನಡೆಸುತ್ತಿದ್ದ ಹೀರಾ ಬೆನ್, ದೈವೀಕತೆಯ ಪ್ರತಿಬಿಂಬವಾಗಿದ್ದರು. ನರೇಂದ್ರ ಮೋದಿಯವರು ಪ್ರಥಮ ಬಾರಿಗೆ ಗುಜರಾತಿನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಲಂಚ ಸ್ವೀಕಾರ ಮಾಡಬಾರದೆಂದು ಮಗನಿಗೆ ತಾಕೀತು ಮಾಡಿದ್ದರು. ತಾಯಿಯ ಮಾತುಗಳನ್ನು ಅಕ್ಷರಶಃ ಪಾಲಿಸಿದ ನರೇಂದ್ರ ಮೋದಿಯವರು, ತಮ್ಮ ಪ್ರಾಮಾಣಿಕ ಹಾಗೂ ಕಳಂಕರಹಿತ ಸಾರ್ವಜನಿಕ ಜೀವನದಲ್ಲಿ ಯಶಸ್ಸಿನ ಮೆಟ್ಟಿಲುಗಳನ್ನು ಒಂದರ ಮೇಲೆ ಒಂದರಂತೆ ಹತ್ತಿದರು. ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿ ದಾಖಲೆ ರೀತಿಯಲ್ಲಿ ನಾಲ್ಕು ಬಾರಿ ಅಧಿಕಾರ ನಡೆಸಿರುವ ಮೋದಿಯವರು, ಆ ರಾಜ್ಯವನ್ನು ಒಂದು ಮಾದರಿ ರಾಜ್ಯವನ್ನಾಗಿ ರೂಪಿಸಿದರು. 2014 ರಿಂದ (ಮೇ ತಿಂಗಳ 26) ದೇಶದ ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು, ಹಲವಾರು ಸಾಧನೆಗಳನ್ನು ಮಾಡಿ, ರಾಮ ಮಂದಿರ ನಿರ್ಮಾಣದಂತಹ ಕ್ಲಿಷ್ಟಕರವಾದ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಿ ಜಾಗತಿಕ ಮನ್ನಣೆ ಗಳಿಸಿದ್ದಾರೆ. ಅವರು ದೇಶದಲ್ಲಿ ಕೋವಿಡ್ ಸೋಂಕಿನ ನಿಯಂತ್ರಣಕ್ಕೆ ತೆಗೆದುಕೊಂಡಂತಹ ಕ್ರಮಗಳು ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಅದೇ ರೀತಿ, ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ " ವಿಶೇಷ ಸ್ಥಾನಮಾನವನ್ನು ರದ್ದು ಪಡಿಸುವ ಮೂಲಕ, ಆ ರಾಜ್ಯದಲ್ಲಿ ಅಭಿವೃದ್ಧಿಯ ಶಕೆಗೆ ನಾಂದಿ ಹಾಡಿದರು.

ತಮ್ಮ ತಾಯಿಯ ಬಗ್ಗೆ ಅಪಾರವಾದ ಪ್ರೀತಿ, ಕಾಳಜಿ ಮತ್ತು ಗೌರವವನ್ನು ಹೊಂದಿದ್ದ ಮೋದಿಯವರು, ತಮ್ಮ ಅತ್ಯಂತ ಒತ್ತಡದ ಕಾರ್ಯಗೌರವಗಳ ಮಧ್ಯೆಯೂ ಸಹ ಬಿಡುವು ಮಾಡಿಕೊಂಡು ತಮ್ಮ ಮಾತೃ ದೇವತೆಯ ಆರೋಗ್ಯ ವಿಚಾರಿಸಿಕೊಂಡು ಬರುತ್ತಿದ್ದರು. ತಾವು ತಮ್ಮ ತಾಯಿಯಲ್ಲೇ ತ್ರಿಮೂರ್ತಿಗಳನ್ನು ನೋಡುತ್ತಿರುವುದಾಗಿ ಹೇಳುತ್ತಿದ್ದ ನರೇಂದ್ರ ಮೋದಿಯವರು, ತಮ್ಮ ತಾಯಿಯೇ ತಮ್ಮ ಬದುಕಿನ ಆಧಾರ ಸ್ಥಂಭ ಎಂದು ಹೇಳುತ್ತಿದ್ದರು. ಈ ವರ್ಷದ ಜೂನ್ ತಿಂಗಳ 18 ರಂದು 100ನೇ ವರ್ಷಕ್ಕೆ ಕಾಲಿಟ್ಟಿದ್ದ ಶ್ರೀಮತಿ ಹೀರಾ ಬೆನ್ ಕಳೆದ ನಾಲ್ಕು ದಿನಗಳ ಹಿಂದೆ ಅಸೌಖ್ಯಗೊಂಡು ಗುಜರಾತಿನ ಅಹಮದಾಬಾದ್‌ನ ಆಸ್ಪತ್ರೆಯೊಂದರಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಹೊಸ ವರ್ಷಾಚರಣೆ ಸುರಕ್ಷಿತವಾಗಿರಲಿ

ಮಾನ್ಯರೆ,

ಹೊಸ ವರ್ಷದ ಆಚರಣೆಯನ್ನು ಮಾಡಲು ಪ್ರತಿ ನಗರದಲ್ಲಿನ ಎಲ್ಲಾ ತರಹದ ಜನರು ವಯಸ್ಸಿನ ಅಂತರವಿಲ್ಲದೆ ಸಂಭ್ರಮಿಸುವ ಸಲುವಾಗಿ ಗುಂಪು ಗುಂಪಾಗಿ ಸೇರಿ ಎಲ್ಲರೂ ಕುಣಿದು ಕುಪ್ಪಳಿಸಿ, ಹಾಡುಗಳನ್ನು ಹಾಡಿ, ಕುಡಿದು ಮೈಮರೆತು ವಾಹನಗಳನ್ನು ಚಾಲಾಯಿಸುವುದರಿಂದ ಬೇರೆ ವಾಹನಗಳಿಗೆ ಅಪಘಾತವಾಗುವ ಸಂಭವವಿರುತ್ತದೆ. ಇದರಿಂದ ಕುಡಿತ ಮಿತವಾಗಿರಲಿ ಹಾಗೂ ವಾಹನವನ್ನು ಜಾಗೃತೆಯಿಂದ ಚಲಾಯಿಸಿ ನಿಮ್ಮ ಅಮೂಲ್ಯವಾದ ಜೀವವನ್ನು ರಕ್ಷಿಸಿಕೊಳ್ಳಿ. ಈಗಾಗಲೇ ಕಳೆದ ವರ್ಷಗಳಲ್ಲಿ ನಾವೆಲ್ಲರೂ ಕೊರೊನಾ ಎಂಬ ಮಹಾಮಾರಿಯಿಂದ ಆರ್ಥಿಕ ಹೊಡೆತ, ಆರೋಗ್ಯದಲ್ಲಿ ಸಮಸ್ಯೆ, ಸಾವು–ನೋವುಗಳನ್ನು ಅನುಭವಿಸಿದ್ದೇವೆ. ಅದನ್ನು ಮನದಲ್ಲಿ ಇಟ್ಟುಕೊಂಡು ನಾವೆಲ್ಲರೂ ಸುರಕ್ಷತೆಯಿಂದ ಕೊರೊನಾ ನಿಯಮಾವಳಿಗಳನ್ನು ಚಾಚೂ ತಪ್ಪದೇ ಪಾಲಿಸುವ ಮೂಲಕ 2023ರ ವರ್ಷವು ಆರೋಗ್ಯಕರ ವರ್ಷವಾಗಿರಲೆಂದು ಸಂಕಲ್ಪ ಮಾಡುತ್ತ ಹಾಗೂ ಆದಷ್ಟು ತಮ್ಮ ತಮ್ಮ ಮನೆಯಲ್ಲಿಯೇ ವರ್ಷಾಚರಣೆಯನ್ನು ಆಚರಿಸುವುದು ಇನ್ನೂ ಉತ್ತಮವಾಗಿರುತ್ತದೆ. ಈ ರೀತಿ ಸಂಭ್ರಮಾಚರಣೆಯನ್ನು ಮಾಡುವುದರ ಮೂಲಕ ಎಲ್ಲರಿಗೂ ಶುಭವನ್ನು ಕೋರೋಣ.

–ಛಾಯ.ವಿ, ಮಹಾರಾಜ ಕಾಲೇಜು, ಮೈಸೂರು.

ಎರಡು ರಾಜ್ಯಗಳ ಜನರು ಜಗಳ ಬಿಟ್ಟು ಭವ್ಯ ಭಾರತ ಕಟ್ಟೋಣ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಮಹಾರಾಷ್ಟ್ರ–ಕರ್ನಾಟಕ ಗಡಿ ವಿಚಾರದಲ್ಲಿ ಬೆಳಗಾಂ ಹಾಗೂ ಮಹಾರಾಷ್ಟ್ರ ಗಡಿ ಪ್ರದೇಶದಲ್ಲಿ ಗಲಾಟೆ ನಡೆಯುತ್ತಿದೆ. ಹಲವಾರು ಲಾರಿಗಳು ಮಹಾರಾಷ್ಟ್ರ ಹಾಗೂ ಕರ್ನಾಟಕದ ಬಸ್ಸುಗಳಿಗೆ ಹಾನಿ ಆಗಿದೆ. ಮಹಾರಾಷ್ಟ್ರ ಹಾಗೂ ಕರ್ನಾಟಕ ಇಡೀ ಭಾರತ ದೇಶದ ರಾಜ್ಯಗಳು. ಭಾಷಾವಾರು ಪ್ರಾಂತ್ಯವಾಗಿ ಹಲವಾರು ವರುಷಗಳಾದರೂ ಈ ಗಡಿ ಸಮಸ್ಯೆ ರಾಜಕಾರಣಿಗಳಿಂದ ಜೀವಂತವಾಗಿದೆ.

ಚೀನಾ, ಭಾರತ ಯುದ್ಧದಲ್ಲಿ ಸಾವಿರಾರು ಅಡಿ ಭಾರತ ದೇಶದ ಭೂ ಭಾಗವನ್ನು ಚೀನಾ ಅತಿಕ್ರಮಿಸಿ ತನ್ನ ಭೂಭಾಗದೊಳಗೆ ಸೇರಿಸಿಕೊಂಡಿದೆ. ಅದೇ ರೀತಿ ಪಾಕಿಸ್ತಾನ ಕಾಶ್ಮೀರ ಕಣಿವೆಯ ಹಲವಾರು ಭೂ ಭಾಗವನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದೆ. ಇದರ ಬಗ್ಗೆ ಯಾರೂ ಚಕಾರ ಎತ್ತಿಲ್ಲ. ನಮ್ಮ ಅಖಂಡ ಭಾರತದೊಳಗಿನ ಭೂ ಭಾಗಕ್ಕೆ ನಾವು ಜಗಳವಾಡುತ್ತಿದ್ದೇವೆ. ಇದು ದೇಶಭಕ್ತಿಯೇ. ಎರಡೂ ಕಡೆಯ ರಾಜಕಾರಣಿಗಳು ತಮ್ಮ ಭೂ ಭಾಗದ ಜನರನ್ನು ಸಾಂತ್ವನಗೊಳಿಸಬೇಕು. ಅದಲ್ಲದೆ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಬಿಜೆಪಿ ಆಡಳಿತವಿದೆ. ನಮಗೆ ಕಿತ್ತೂರು ಚೆನ್ನಮ್ಮ ಹೇಗೋ ಮಹಾರಾಷ್ಟ್ರಕ್ಕೆ ಛತ್ರಪತಿ ಶಿವಾಜಿ ಮಹಾರಾಜರು ಸ್ಫೂರ್ತಿ. ಇನ್ನಾದರೂ ಈ ಜಗಳವನ್ನು ಎರಡು ರಾಜ್ಯಗಳ ಜನರು ಬಿಟ್ಟು ಭವ್ಯ ಭಾರತದ ಬಗ್ಗೆ ಹೋರಾಟ ಮಾಡೋಣ.

– ಶ್ರೀಪಾದ, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಗಡಿಯಲ್ಲಿ ಮತ್ತೆ ಕ್ಯಾತೆ ತೆಗೆದ ಚೀನಾ

ಚೀನಾ, ಗಡಿಯಲ್ಲಿ ಮತ್ತೆ ಕ್ಯಾತೆ ತೆಗೆದಿದೆ. 2020ರ ಜೂನ್‌ನಲ್ಲಿ ಪೂರ್ವ ಲಡಾಕ್‌ನ ಗಲ್ವಾನ್ ಕಣಿವೆಯಲ್ಲಿ ಉಂಟಾದ ಗಡಿ ಬಿಕ್ಕಟ್ಟು ಇನ್ನೂ ಪರಿಹಾರವಾಗಿಲ್ಲ. ಈ ಬಾರಿ ಅರುಣಾಚಲ ಪ್ರದೇಶದ ತವಾಂಗ್‌ನಲ್ಲಿ ಘರ್ಷಣೆ ಗಿಳಿದಿದೆ. ಡಿಸೆಂಬರ್ 9 ರಂದು ತವಾಂಗ್ ಸೆಕ್ಟರ್‌ನ ಯಾಂಗ್ಟ್ಸೆ ಪ್ರದೇಶದಲ್ಲಿ ವಾಸ್ತವಿಕ ನಿಯಂತ್ರಣ ರೇಖೆಯನ್ನು (ಎಲ್‌ಎಸಿ) ಬದಲಾಯಿಸಲು ಚೀನಿ ಪಡೆಗಳು ಯತ್ನಿಸಿದವು. ಮುಂಜಾನೆ ಮುನ್ನೂರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದ ಚೀನಿ ಸೈನಿಕರು ಗಾಡಿಯೊಳಗೆ ನುಗ್ಗಲು ಯತ್ನಿಸುತ್ತಿರುವುದನ್ನು ಗಸ್ತು ತಿರುಗುತ್ತಿದ್ದ ಭಾರತೀಯ ಯೋಧರು ತಡೆದು ಅಟ್ಟಾಡಿಸಿ ಹಿಮ್ಮೆಟ್ಟಿಸಿದರು.



ಭಾರತ–ಚೀನಾ ಗಡಿ ಚಿತ್ರಣ

ಎರಡೂ ದೇಶಗಳ ನಡುವೆ 3488 ಕಿ.ಮೀ. ಉದ್ದದ ಗಡಿಯಿದೆ. ದೇಶದ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಮೂಲಕ ಹಾದು ಹೋಗುತ್ತದೆ. ಈ ಗಡಿಗಳಲ್ಲಿ ಕಳೆದ ಹದಿನೈದು ವರ್ಷಗಳಲ್ಲಿ 1600ಕ್ಕೂ ಹೆಚ್ಚು ಬಾರಿ ಚೀನಾ ಅತಿಕ್ರಮ ಪ್ರವೇಶ ಮಾಡುವ ಮೂಲಕ ನಿರಂತರವಾಗಿ ಉದ್ವಿಗ್ನತೆ ಸೃಷ್ಟಿಸುತ್ತಲೇ ಇದೆ.

ಸರ್ದಾರ್ ಪಟೇಲ್‌ರ ಪತ್ರ ನಿರ್ಲಕ್ಷಿಸಿದ್ದ ನೆಹರು

ಪ್ರಸ್ತುತ ಗಡಿಬಿಕ್ಕಟ್ಟಿಗೆ ಸಂಬಂಧಿಸಿದಂತೆ ಒಂದು ಐತಿಹಾಸಿಕ ಸತ್ಯವನ್ನು ಇಲ್ಲಿ ಸ್ಮರಿಸಬಹುದಾಗಿದೆ. ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭ ಭಾಯ್ ಪಟೇಲರು ಆ ದಿನಗಳಲ್ಲಿ ಅನಾರೋಗ್ಯದಿಂದ ಮುಂಬೈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ದೇಶದ ಗಡಿಗಳ ಸುರಕ್ಷೆ ಬಗ್ಗೆ ನಿರ್ಲಕ್ಷ ತಾಳಿದ್ದ ನೆಹರು ಸ್ವಭಾವದ ಬಗ್ಗೆ ಆತಂಕ ಹಾಗೂ ಭವಿಷ್ಯದಲ್ಲಿ ಚೀನಾ ಆಕ್ರಮಣದ ಬಗ್ಗೆ ಮನಗಂಡಿದ್ದ ಪಟೇಲರು ಆಸ್ಪತ್ರೆಯಲ್ಲಿ ತಾವು ವಿಶ್ರಮಿಸಿದ ಹಾಸಿಗೆಯಿಂದಲೇ ದಿ. 7.11.1950 ರಂದು ಚೀನಾದ ಟಿಬೆಟ್ ಮೇಲೆ ಸಂಭಾವ್ಯ ಆಕ್ರಮಣ ಮಾಡುವ ಕುರಿತು ಪತ್ರ ಬರೆದು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ್ದರು. ಪಟೇಲರು ಭವಿಷ್ಯ ಹೇಳಿದಂತಿದ್ದ ಈ ಪತ್ರದಲ್ಲಿ "ಟಿಬೆಟ್ ನಮ್ಮ ಮೇಲೆ ವಿಶ್ವಾಸ ಇರಿಸಿದೆ. ಅವರು ನಮ್ಮನ್ನು ಮಾರ್ಗದರ್ಶಕರೆಂದು ಸ್ವೀಕರಿಸಿದ್ದಾರೆ. ಆದರೆ ನಾವು ಅವರನ್ನು (ಟಿಬೆಟ್) ಚೀನಾದ ರಾಜತಾಂತ್ರಿಕ ಮೋಸದ ಜಾಲ ಮತ್ತು ದುರ್ವಿಚಾರಗಳಿಂದ ಹೊರತರುವಲ್ಲಿ ವಿಫಲರಾಗಿದ್ದೇವೆ. ನಮ್ಮ ದೇಶದ ಉತ್ತರ, ಉತ್ತರ–ಪೂರ್ವದಲ್ಲಿ ಚೀನಾ ಮಹತ್ವಾಕಾಂಕ್ಷೆ ಹಾಗೂ ಲಕ್ಷ್ಯವನ್ನು ಹೊಂದಿದ್ದು, ನಮ್ಮೊಂದಿಗೆ ಸ್ನೇಹದಿಂದಿದ್ದಾರೆಂದು ಭಾವಿಸಬಾರದು. ಚೀನಾದಿಂದ ಸಂಭಾವ್ಯ ಅಪಾಯವರಿತು ಮಿಲಿಟರಿ ಸಿದ್ಧತೆ ಹಾಗೂ ನಿಯೋಜನೆ ಮಾಡಬೇಕಾಗಿದೆ ಎಂದು ಸ್ಪಷ್ಟವಾಗಿ ತಿಳಿಸಿದ್ದರು. ಈ ಸಂದರ್ಭದಲ್ಲಿ ಚೀನಿ ಪಡೆಗಳು ಟಿಬೆಟ್ ವಶಪಡಿಸಿಕೊಂಡಿದ್ದರು. ಟಿಬೆಟ್‌ನ ಚೀನಿಕರಣ ಭರದಿಂದ ಸಾಗಿತ್ತು. ವಿರೋಧಿಸುತ್ತಿದ್ದವರ ಹತ್ಯೆಗೈಯ್ಯಲಾಗುತ್ತಿತ್ತು. ಮಾವೋ ನೇತೃತ್ವದಲ್ಲಿ ಹೊಸದಾಗಿ ಅಧಿಕಾರಕ್ಕೇರಿದ ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ ಕಮ್ಯೂನಿಸ್ಟ್ ಸರ್ಕಾರದ ಮೇಲಿನ ಕುರುಡು ಮೋಹದಿಂದ ನೆಹರೂ ಮತ್ತವರ ಗುಂಪಿನವರ ಬುದ್ಧಿ ಮಂಕಾಗಿತ್ತು. ಇವರು ಮಾವೋರ ಕರಾಳ ಮುಖ ಅರಿಯುವಲ್ಲಿ ವಿಫಲರಾದರು. ನೆಹರು ಅವರು ಟಿಬೆಟ್‌ನಲ್ಲಿ ಅನಾಚಾರವೆಸಗುತ್ತಿದ್ದ ಚೀನಿ ಯೋಧರಿಗಾಗಿ ಸಾವಿರಾರು ಟನ್ ಅಕ್ಕಿ ಪೂರೈಸಿದರು. ಆ ನಂತರ ಟಿಬೆಟ್ ಚೀನಾದ ಭಾಗವೆಂದು ಮಾನ್ಯತೆ ನೀಡಿದ್ದು, ನೆಹರು ಮಾಡಿದ್ದ ಐತಿಹಾಸಿಕ ಪ್ರಮಾದವಾಗಿತ್ತು. ಐತಿಹಾಸಿಕ ತಪ್ಪುಗಳ ಪರಿಣಾಮ ಮುಂದಿನ ಅನೇಕ ಪೀಳಿಗೆಗಳು ಅನುಭವಿಸಬೇಕಾಗುತ್ತದೆ. ಚೀನಿ ಆಕ್ರಮಣ ದವರೆಗೆ ಬಫರ್ ಸ್ಟೇಟ್ ಆಗಿದ್ದ ಟಿಬೆಟ್‌ನ ಗಡಿಗಳು ಶತ್ರು ರಾಷ್ಟ್ರ ಚೀನಾದ ಗಡಿಗಳಾಗಿ ಪರಿವರ್ತಿತವಾಗಿದ್ದವು. ಟಿಬೆಟ್ ಸ್ವತಂತ್ರವಾಗಿದ್ದರೆ ಭಾರತದ ಗಡಿಗಳು ಸುರಕ್ಷಿತವಾಗಿರುತ್ತಿದ್ದವು. ನೆಹರು ಮಾಡಿದ ತಪ್ಪಿನಿಂದಾಗಿ ಚೀನಾದಂತಹ ಧೂರ್ತ ಶತ್ರುವನ್ನು ನಮ್ಮ ಗಡಿಯಲ್ಲಿ ತಂದು ನಿಲ್ಲಿಸಿತ್ತು.

> “ನೆಹರು ಅವರು ಟಿಬೆಟ್‌ನಲ್ಲಿ ಅನಾಚಾರ ವೆಸಗುತ್ತಿದ್ದ ಚೀನಿ ಯೋಧರಿಗಾಗಿ ಸಾವಿರಾರು ಟನ್ ಅಕ್ಕಿ ಪೂರೈಸಿದರು. ಆ ನಂತರ ಟಿಬೆಟ್ ಚೀನಾದ ಭಾಗವೆಂದು ಮಾನ್ಯತೆ ನೀಡಿದ್ದು, ನೆಹರು ಮಾಡಿದ್ದ ಐತಿಹಾಸಿಕ ಪ್ರಮಾದವಾಗಿತ್ತು. ಐತಿಹಾಸಿಕ ತಪ್ಪುಗಳ ಪರಿಣಾಮ ಮುಂದಿನ ಅನೇಕ ಪೀಳಿಗೆಗಳು ಅನುಭವಿಸ ಬೇಕಾಗುತ್ತದೆ. ಚೀನಿ ಆಕ್ರಮಣದವರೆಗೆ ಬಫರ್ ಸ್ಟೇಟ್ ಆಗಿದ್ದ ಟಿಬೆಟ್‌ನ ಗಡಿಗಳು ಶತ್ರು ರಾಷ್ಟ್ರ ಚೀನಾದ ಗಡಿಗಳಾಗಿ ಪರಿವರ್ತಿತವಾಗಿದ್ದವು. ಟಿಬೆಟ್ ಸ್ವತಂತ್ರ ವಾಗಿದ್ದರೆ ಭಾರತದ ಗಡಿಗಳು ಸುರಕ್ಷಿತವಾಗಿರುತ್ತಿದ್ದವು. ನೆಹರು ಮಾಡಿದ ತಪ್ಪಿನಿಂದಾಗಿ ಚೀನಾದಂತಹ ಧೂರ್ತ ಶತ್ರುವನ್ನು ನಮ್ಮ ಗಡಿಯಲ್ಲಿ ತಂದು ನಿಲ್ಲಿಸಿತ್ತು.

ನೆಹರು ಮಾಡಿದ ಇನ್ನೊಂದು ಎಡವಟ್ಟು

1950ರಲ್ಲಿ ವಿಶ್ವ ಸಂಸ್ಥೆಯ ಪ್ರಬಲ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯನಾಗುವ ಅವಕಾಶ ಬಂದಿತ್ತು. ಆಗ ಅಮೇರಿಕ ಸಹಿತ ಜಗತ್ತಿನ ಪ್ರಮುಖ ರಾಷ್ಟ್ರಗಳು ಈ ಸ್ಥಾನ ಮಾವೋ ನೇತೃತ್ವದ ಕಮ್ಯೂನಿಸ್ಟ್ ಚೀನಾಕ್ಕೆ ಸಿಗದಂತೆ ಮಾಡಲು ಇನ್ನಿಲ್ಲದ ಯತ್ನ ನಡೆಸಿದರು. ಆದರೆ ಚೀನಾ ಮೋಹದಲ್ಲಿ ಮೂರ್ಖರಾಗಿದ್ದ ನೆಹರು ದೇಶದ ಹಿತಾಸಕ್ತಿ ಬದಿಗೊತ್ತಿ ಈ ಸ್ಥಾನವನ್ನು ಚೀನಾಕ್ಕೆ ನೀಡಿದರು. ಅಂದು ನೆಹರು ಮಾಡಿದ ಈ ಘನಾಂದಾರಿ ಕೆಲಸಕ್ಕೆ ಭಾರತ ಇಂದಿಗೂ ಸಮಸ್ಯೆ ಎದುರಿಸುತ್ತಿದೆ. ಆನಂತರ ಇದುವರೆಗೆ ಚೀನಾವು ವಿಶ್ವಸಂಸ್ಥೆಯಲ್ಲಿ ಎಲ್ಲ ಸಂದರ್ಭಗಳಲ್ಲಿ ಭಾರತದ ವಿರುದ್ಧವಾಗಿಯೇ ಮತ ಚಲಾಯಿಸುತ್ತಿದೆ. ತನಗಿರುವ ವಿಟೋ ಅಧಿಕಾರ ಚಲಾಯಿಸಿ ಹಲವು ದಶಕಗಳಿಂದ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯದಂತೆ ಭದ್ರತಾ ಮಂಡಳಿಯ ಸದಸ್ಯರ ಸಂಖ್ಯೆ ಹೆಚ್ಚಿಸಲು ತಡೆಯೊಡ್ಡುತ್ತಿದೆ.

ಅಕ್ಸಾಯ್ ಚಿನ್ ಕಳೆದುಕೊಂಡ ಭಾರತ

ಟಿಬೆಟ್ ಅನ್ನು ಚೀನಾ ಆಕ್ರಮಿಸಿದ ನಂತರವೂ ನೆಹರೂ ಸರ್ತಕರಾಗಲಿಲ್ಲ. ಪಟೇಲರ ಪತ್ರವನ್ನು ನಿರ್ಲಕ್ಷಿಸಿದರು. ಜಗತ್ತಿನಲ್ಲಿ ತಾನೋರ್ವ ಶಾಂತಿಧೂತನೆಂದು ಪ್ರತಿಬಿಂಬಿಸುವ ಭರದಲ್ಲಿ ದೇಶದ ಹಿತಾಸಕ್ತಿ ಬಲಿಕೊಟ್ಟರು. ಚೀನಾದೊಂದಿಗೆ ಇರುವ ಸಂಬಂಧ ಇನ್ನಷ್ಟು ಗಟ್ಟಿಗೊಳಿಸಲು ಮಾವೋರೊಂದಿಗೆ ನೆಹರುರವರು ಪಂಚಶೀಲ ಒಪ್ಪಂದ ಮಾಡಿಕೊಂಡು ಚೀನಿ–ಹಿಂದಿ ಭಾಯಿ ಭಾಯಿ ಎಂದು ಜಗತ್ತಿಗೆ ಸಾರಿದರು. ಆದರೆ ನೆಹರೂ ಅವರಿಗೆ ಅವರು ಮಾಡಿಕೊಂಡ ಒಪ್ಪಂದ ಕುರಿ–ಹುಲಿಯೊಂದಿಗೆ ಮಾಡಿಕೊಂಡ ಶಾಂತಿ ಒಪ್ಪಂದದಂತೆ ಎಂದು ಅವರ ಬುದ್ಧಿಗೆ ಹೊಳೆಯಲೇ ಇಲ್ಲ. ದೇಶದ ಗಡಿಗಳನ್ನು ನಿರ್ಲಕ್ಷಿಸಿದರು. ಸೇನೆಗೆ ಅವಶ್ಯಕವಾದ ಯಾವುದನ್ನೂ ಪೂರೈಸಲಿಲ್ಲ. ಪಟೇಲರ ಭವಿಷ್ಯವಾಣಿ 1962ರಲ್ಲಿ ಸತ್ಯವಾಗಿತ್ತು. ಚೀನಾ ಪೂರ್ಣ ಸಿದ್ಧತೆಯೊಂದಿಗೆ ಅಕ್ಸಾಯ್‌ಚಿನ್ ಪ್ರದೇಶದಲ್ಲಿ ಆಕ್ರಮಣ ಆರಂಭಿಸಿತು. ಎಲ್ಲ ರೀತಿಯ ಪ್ರತಿಕೂಲ ಪರಿಸ್ಥಿತಿಯಲ್ಲಿ ನಮ್ಮ ಯೋಧರು ಸರ್ವಸನ್ನದ್ಧ ಚೀನಿ ಸೇನೆ ಎದುರಿಸಿದರು. ಈ ಯುದ್ಧದಲ್ಲಿ ಭಾರತದ ನಾಲ್ಕು ಸಾವಿರ ಯೋಧರು ವೀರಮರಣವನ್ನಪ್ಪಿದರು. ಭಾರತದ ಅಕ್ಸಾಯ್ ಚಿನ್ ಸೆಕ್ಟರ್‌ನ 38 ಸಾವಿರ ಚ.ಕಿ.ಮೀ. ಭೂ ಭಾಗವನ್ನು ಚೀನಾ ಆಕ್ರಮಿಸಿಕೊಂಡಿತು. ನೆಹರೂ ಹಾಗೂ ರಕ್ಷಣಾ ಮಂತ್ರಿ ಕೃಷ್ಣ ಮೆನನ್‌ರ ಬೇಜವಾಬ್ದಾರಿಯಿಂದ ಭಾರತಕ್ಕೆ ಅಪಮಾನಕಾರಿ ಸೋಲಾಗಿತ್ತು. ಹಿಂದೂಗಳ ಪವಿತ್ರ ಸ್ಥಾನಗಳಾದ ಕೈಲಾಸ ಪರ್ವತ, ಮಾನಸ ಸರೋವರಗಳು ಚೀನಾ ಪಾಲಾಗಿದ್ದವು. ಯುದ್ಧಾ ನಂತರ ಈ ಬಗ್ಗೆ ಸಂಸತ್ತಿನಲ್ಲಿ ಪ್ರಶ್ನಿಸಿದಾಗ ನೆಹರು ಅವರು ಚೀನಾ ಆಕ್ರಮಿಸಿರುವುದು ಒಂದು ಹುಲ್ಲು ಬೆಳೆಯದ ನಿಷ್ಪ್ರಯೋಜಕ ಪ್ರದೇಶವೆಂದು ಉದ್ಧಟತನದ ಉತ್ತರ ನೀಡಿದ್ದರು. ಪ್ರಸ್ತುತ ಚೀನಿ ಅತಿಕ್ರಮಣದ ಬಗ್ಗೆ ಭಾರೀ ದೇಶಭಕ್ತರಂತೆ ಅಬ್ಬರಿಸುತ್ತಿರುವ ನೆಹರು ಮರಿ ಮಗ ಹಾಗೂ ಕಾಂಗ್ರೆಸಿಗರು 1962ರ ಯುದ್ಧದ ಬಗ್ಗೆ ದೇಶದ ಜನತೆಗೆ ಮೊದಲು ಉತ್ತರಿಸಬೇಕಾಗಿದೆ.

ಭಾರತ–ಚೀನಾ ವಿವಾದಿತ ಪ್ರದೇಶಗಳು

ಭಾರತ–ಚೀನಾ ಗಡಿಯನ್ನು ಹದಿನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದ್ದು ಎಲ್ಲಾ ಭಾಗಗಳಲ್ಲಿ ಗಡಿ ಗುರುತಿಸುವಿಕೆ ಆಗಿಲ್ಲ. ಎರಡೂ ದೇಶಗಳ ಮಧ್ಯೆ ವಾಸ್ತವಿಕ ನಿಯಂತ್ರಣ ರೇಖೆ ಇದ್ದ ಅಕ್ಸಾಯ್‌ಚಿನ್ ಪ್ರದೇಶವನ್ನು ಚೀನಾ ವಶಪಡಿಸಿಕೊಂಡಿದೆ. ಅರುಣಾಚಲ ಪ್ರದೇಶ 90 ಸಾವಿರ ಚ.ಕಿ.ಮೀ., ಉತ್ತರ ಖಂಡದ 10 ಸಾವಿರ ಚ.ಕಿ.ಮೀ. ಪ್ರದೇಶಗಳ ಮೇಲೂ ಹಕ್ಕು ಸ್ಥಾಪಿಸಲು ಚೀನಾ ಯತ್ನಿಸುತ್ತಿದೆ.

ತವಾಂಗ್ ತಕರಾರು

1950 ರಲ್ಲಿ ಟಿಬೆಟ್ ದೇಶವು ಚೀನಾ ವಶವಾದ ನಂತರ ಅರುಣಾಚಲ ಪ್ರದೇಶದ ಭಾಗವಾದ ತವಾಂಗ್ ಮೇಲೆ ಭಾರತ ಹಕ್ಕು ಸಾಧಿಸಿತು. ಮ್ಯಾಕ್ ಮೋಹನ್ ರೇಖೆ ನಿಗದಿಯಾದಾಗ ಚೀನಾದ ಭಾಗವಾಗಿ ಟಿಬೆಟ್ ಇರದ ಕಾರಣ ಹಳೆಯ ಒಪ್ಪಂದ ಅಧಿಕೃತ ಎಂದು ಭಾರತ ವಾದಿಸಿದರೆ, ಟಿಬೆಟ್ ವಶವಾಗಿರುವ ಕಾರಣ ಅದರ ಭಾಗವಾದ ತವಾಂಗ್ ಕೂಡಾ ತನಗೆ ಸೇರಿದ್ದೆಂದು ಚೀನಾ ವಾದಿಸುತ್ತಿದೆ.

ಅರುಣಾಚಲ ಪ್ರದೇಶವನ್ನು ಭಾರತ–ಚೀನಾ ಗಂಭೀರವಾಗಿ ಪರಿಗಣಿಸುತ್ತಿವೆ. ಎರಡೂ ದೇಶಗಳ ನಡುವಿನ ಗಡಿ ಬಿಕ್ಕಟ್ಟಿನಲ್ಲಿ ಲಡಾಕ್‌ನ ಗುಲ್ವಾನ್ ಘಾಟಿ, ಪ್ಯಾಂಗೊಂಗ್ ತ್ಸೆ ಸರೋವರ, ಗೊಗ್ರಾ ಮತ್ತು ಹಾಟ್‌ಸ್ಪ್ರಿಂಗ್‌ಗಳು, ಅರುಣಾಚಲದ ತವಾಂಗ್‌ನ ಯಾಂಗ್ಟ್ಸೆ ಸೇರಿದಂತೆ 25 ವಿವಾದಾತ್ಮಕ ಪ್ರದೇಶಗಳು ಘರ್ಷಣೆಯ ಸ್ಥಾನಗಳಾಗಿವೆ. ಇವುಗಳಲ್ಲಿ ತವಾಂಗ್ ಪ್ರಮುಖ ವಿವಾದಿತ ಪ್ರದೇಶವಾಗಿದೆ. ತವಾಂಗ್ 6ನೇ ದಲೈಲಾಮಾರ ಜನ್ಮ ಸ್ಥಳವಾಗಿದ್ದು ಟಿಬೆಟ್ ಬೌದ್ಧರ ಪ್ರಮುಖ ಯಾತ್ರಾ ಸ್ಥಳವಾಗಿದೆ. 14ನೇ ದಲೈಲಾಮಾ 1959 ರಲ್ಲಿ ಟಿಬೆಟ್‌ನಿಂದ ಭಾರತಕ್ಕೆ ಬಂದು ತವಾಂಗ್‌ನಲ್ಲಿಯೇ ಆಶ್ರಯ ಪಡೆದರು. ಈ ಹಿನ್ನೆಲೆಯಲ್ಲಿ ತವಾಂಗ್ ಟಿಬೇಟಿಯನ್ನರ ಸ್ವಾತಂತ್ರ್ಯ ಹೋರಾಟಕ್ಕೆ ಕೇಂದ್ರವಾಗಬಹುದೆಂಬ ಆತಂಕ ಚೀನಿ ನಾಯಕರಿಗಿದೆ. ಈ ಕಾರಣದಿಂದ ತವಾಂಗ್‌ನಲ್ಲಿ ಚೀನಾ ತನ್ನ ಅಸ್ತಿತ್ವ ಸ್ಥಾಪಿಸಲು ಹವಣಿಸುತ್ತಿದೆ.

ವಿಶ್ವಶಾಂತಿಗೆ ಅಪಾಯ–ಚೀನಿ ವಿಸ್ತಾರ ವಾದ

ಚೀನಿ ವಿಸ್ತಾರವಾದವು ವಿಶ್ವಶಾಂತಿಗೆ ಅಪಾಯಕಾರಿಯಾಗಿದೆ. ಚೀನಾ ಇದುವರೆಗೆ ಅನ್ಯ ದೇಶಗಳ 41 ಲಕ್ಷ ಚ.ಕಿ.ಮೀ. ಭೂಮಿಯನ್ನು ಬಲಾತ್ಕಾರದಿಂದ ವಶಪಡಿಸಿಕೊಂಡಿದೆ. 1949ರಲ್ಲಿ ಕಮ್ಯೂನಿಸ್ಟ್ ಶಾಸನ ಬರುವುದರೊಂದಿಗೆ ಚೀನಾ ಭೂ ಕಬಳಿಕೆ ತೀವ್ರಗೊಳಿಸಿತು. 1934ರಿಂದ 1949ರ ಅವಧಿಯಲ್ಲಿ ತುರ್ಕಿ ಸ್ಥಾನದ 16.55 ಚ.ಕಿ.ಮೀ. 1945 ರಲ್ಲಿ ಮಂಗೋಲಿಯಾದ 11.83 ಚ.ಕಿ.ಮೀ., 1950ರಲ್ಲಿ ಟಿಬೆಟ್‌ನ 12.3 ಲಕ್ಷ ಚ.ಕಿ.ಮೀ. ಭೂಮಿ ಆಕ್ರಮಿಸಿತು. 1997ರಲ್ಲಿ ಹಾಂಗ್‌ಕಾಂಗ್, 1999ರಲ್ಲಿ ಪೋರ್ಚುಗಲ್‌ನಿಂದ ಮಕಾವು ದ್ವೀಪ ಪಡೆಯಿತು. ಇವು ಚೀನಾದ ಒಟ್ಟು ವಿಸ್ತೀರ್ಣದ ಶೇ. 43 ರಷ್ಟಿದೆ. ಇದು ಚೀನಾದ ಭೂದಾಹದ ಪರಿಮಾಣ ಸೂಚಿಸುತ್ತದೆ. ರಷ್ಯಾದೊಂದಿಗೆ 52 ಸಾವಿರ ಚ.ಕಿ.ಮೀ. ಭೂಮಿಗೆ ಸಂಬಂಧಿಸಿ ವಿವಾದವಿದೆ. ಪ್ರಸ್ತುತ ಚೀನಾ ತನ್ನ ಸುತ್ತಲಿನ 23 ದೇಶಗಳೊಂದಿಗೆ ಭೂ ಸಾಗರ ಗಡಿ ವಿವಾದ ಹೊಂದಿದೆ. ಚೀನಾದ ವಿಸ್ತರಣಾವಾದ ನಿಯಂತ್ರಿಸಲು ಚೀನಾವನ್ನು ಎಲ್ಲ ಕ್ಷೇತ್ರಗಳಲ್ಲಿ ಬಹಿಷ್ಕರಿಸಬೇಕಾಗಿದೆ. ಚೀನಾದಂತೆ ಜಗತ್ತಿನ ದೇಶಗಳು ತಮ್ಮ ಅಧಿಕೃತ ಭೂಪಟಗಳಲ್ಲಿ ಚೀನಾ ವಶಪಡಿಸಿದ ಪ್ರದೇಶಗಳನ್ನು ಚೀನಾ ಆಕ್ರಮಿತ ಪ್ರದೇಶಗಳೆಂದು ತೋರಿಸುವುದು. ಭಾರತವು ಟಿಬೆಟ್, ಹಾಂಗ್‌ಕಾಂಗ್‌ಗಳಿಗೆ ಸ್ವತಂತ್ರ ದೇಶವೆಂದು ಮಾನ್ಯತೆ ನೀಡಿ ಸ್ವಾತಂತ್ರ್ಯ ಹೋರಾಟಕ್ಕೆ ಬಹಿರಂಗವಾಗಿ ಬೆಂಬಲಿಸುವುದು ಸೂಕ್ತವಾಗಿದೆ.

ಭಾರತಕ್ಕೆ ಸಂಬಂಧಿಸಿದಂತೆ ಸರಕಾರವು ಗಡಿ ಸುರಕ್ಷೆ ಬಲಪಡಿಸುವುದರೊಂದಿಗೆ ಚೀನಿ ಪರ ಶಕ್ತಿಗಳನ್ನು ಗುರುತಿಸಿ ಮಟ್ಟ ಹಾಕಬೇಕಾಗಿದೆ. 2017 ರಲ್ಲಿ ಡೊಕ್ಲಾಂ ಸಮಸ್ಯೆ ಉದ್ಭವಿಸಿದಾಗ ರಾಹುಲ್ ಗಾಂಧಿಯವರು ಚೀನಾ ದೂತವಾಸಕ್ಕೆ ಕದ್ದು ಮುಚ್ಚಿ ಭೇಟಿ ನೀಡುತ್ತಿದ್ದರು. 2020ರಲ್ಲಿ ಕಾಂಗ್ರೆಸ್ ಪಕ್ಷವು ಚೀನಿ ಕಮ್ಯೂನಿಸ್ಟ್ ಪಕ್ಷದೊಡನೆ 2008ರಲ್ಲಿ ಮಾಡಿಕೊಂಡ ನಿಗೂಢ ಒಪ್ಪಂದದ ಬಗ್ಗೆ ದೇಶ ಮಾಹಿತಿ ಕೇಳುತ್ತಿದ್ದಂತೆ ಗಲ್ವಾನ್‌ನಲ್ಲಿ ಚೀನಾ ಅತಿಕ್ರಮಣ ನಡೆಸಿತು. ಪ್ರಸ್ತುತ ಕೇಂದ್ರ ಸರಕಾರವು 2008ರಲ್ಲಿ ಕಾಂಗ್ರೆಸ್ ಪಕ್ಷ ಚೀನಾದಿಂದ ದೇಣಿಗೆ ಪಡೆದ ಬಗ್ಗೆ ವಿವರಣೆ ಕೇಳುತ್ತಿದ್ದಂತೆ ತವಾಂಗ್‌ನಲ್ಲಿ ಚೀನಾ ಅತಿಕ್ರಮಣ ನಡೆಸಿತು. ಪ್ರತಿ ಬಾರಿ ಕಾಂಗ್ರೆಸ್‌ನ ಪ್ರಥಮ ಪರಿವಾರದ ವಿರುದ್ಧ ವಿವಾದಾತ್ಮಕ ವಿಷಯಗಳು ಬಹಿರಂಗಗೊಂಡಾಗಲೆಲ್ಲಾ ಚೀನಾ ಗಡಿಯಲ್ಲಿ ಉದ್ವಿಗ್ನತೆ ಸೃಷ್ಟಿಸಿರುವುದು ಕಾಕತಾಳೀಯವೋ ಅಥವಾ ಗಾಂಧಿ ಪರಿವಾರದ ಚೀನಿ ಪರ ಮುಖವಾಡ ಕಳಚದಂತೆ ಚೀನಾ ರಕ್ಷಿಸುತ್ತಿದೆಯೋ, ಈ ಬಗ್ಗೆ ತನಿಖೆಯಾಗಬೇಕಾಗಿದೆ. ಈ ವಿಚಾರದಲ್ಲಿ ಇತ್ತೀಚೆಗೆ ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿಯವರು ಸ್ಪಷ್ಟವಾಗಿ "ಈಗ ದೇಶದಲ್ಲಿರುವುದು ಇಟಲಿ ಕಾಂಗ್ರೆಸ್. ಈ ನಾಯಿಗಳು ಚೀನಾ ಪರ ಏಕೆ ಬೊಗಳುತ್ತವೆ, ಬರೀ ಬಾಲ ಅಲ್ಲಾಡಿಸುತ್ತವೆ. ಈ ನಾಯಿಗಳು ಭಾರತದ ವಿರುದ್ಧ ಬೊಗಳುತ್ತಿವೆ ಅಷ್ಟೆ ಎಂದು ಹೇಳಿರುವುದು ಸಮಂಜಸವೆನಿಸುತ್ತದೆ. ಭಾರತ ಸರ್ಕಾರವು ದೇಶದೊಳಗಿರುವ ಚೀನಿ ಪರ ಶಕ್ತಿಗಳನ್ನು ನಿರ್ನಾಮ ಮಾಡಿದಲ್ಲಿ ಚೀನಾವನ್ನು ಬಹುಪಾಲು ನಿಯಂತ್ರಿಸಬಹುದು.

ಸಾರ್ಥಕ್ಯದ ಕ್ಷಣ ಇದೇ ಅಲ್ಲವೆ...



ಆ ಅಮ್ಮನ ಮಗನ ನೂರಾರು ವೀಡಿಯೋಗಳನ್ನು ನೋಡುತ್ತ ನೋಡುತ್ತಾ ಹತ್ತಾರು ವರ್ಷಗಳೇ ಕಳೆದಿರಬೇಕು.

ಸರಿಯಾಗಿ ತಿಂತಾ ಇದ್ದೀಯೇನೋ; ಹೀಗೆ ಮುದ್ದಿಸುತ್ತಲೇ ಮುಖ, ಹಣೆ, ನೆತ್ತಿ ಮುಟ್ಟಿ ನೋಡುವ ಅಮ್ಮ. ಅದಕ್ಕೆ ಮಗನ ಮುಗುಳ್ನಗೆ. ಅದೇನೋ ತಿನಿಸು ಬಾಯಿಗಿಡುತ್ತಾಳೆ. ಅದೇನೇನೋ ಮಟಗುಟ್ಟುತ್ತಾ, ಬೊಚ್ಚು ನಗೆ ನಗುತ್ತಾ ಮೈ ಸವರುತ್ತಾಳೆ. ಆ ಮಗನೋ ಚಿಕ್ಕ ಮುಗುಳ್ನಗೆಯಿಂದ ದಿಟ್ಟಿಸುತ್ತಾನೆ. ಹೆಚ್ಚು ಮಾತಾಡಲಾರ. ಅದು ಆಕೆಗೆ ಕೇಳಿಸಿದಂತೆಯೂ ಇಲ್ಲ. ಬೊಚ್ಚು ಬಾಯಿ ಮತ್ತೆ ಏನೇನನ್ನೋ ಉದ್ದಕ್ಕೆ ಹೇಳುತ್ತಾ ಹೋಗುತ್ತದೆ. ಖಯಾಲ್ ರಖ್ ನಾ ಇಂಗಿತ ಮಗನಿಗೂ ಅರ್ಥವಾಗುತ್ತದೆ.

ಆತನ ದೃಷ್ಟಿಯಲ್ಲಿ ತಾತ್ಸಾರವಿಲ್ಲ. ಅದೇನೋ ಮುದುಕಿ ಬಡ್ಕೊಳ್ತಾ ಇದೆ ಎಂಬ ಉದಾಸೀನತೆಯೂ ಇಲ್ಲ. ಅದೇನು ನಿನ್ನ ಬಡಬಡಿಕೆ, ಒದರಿಬಿಡು ಹೋಗ್ಬೇಕು ಎಂಬ ಧಾವಂತವೂ ಇಲ್ಲ. ಅಸಹಾಯಕ ಅಮ್ಮನನ್ನು ಮಗ ದಿಟ್ಟಿಸುವ ಪರಿ ಅದು. ಅದರಲ್ಲಿ ದುಃಖವಿಲ್ಲ. ವಿಷಾದವೂ ಇಲ್ಲ.

ಅದೊಂದು ಬಗೆಯ ಅಕ್ಕರೆ. ಮಡುಗಟ್ಟಿದ ಅಕ್ಕರೆ. ಹೆಚ್ಚು ಮಾತಾಡದಿದ್ದರೇನು. ಆ ತಾಯಿಗೆ ಎಲ್ಲವೂ ಅರ್ಥವಾಗುತ್ತದೆ. ಮೋದಿ ಹೊರಡುವಾಗ ಬಹಳಷ್ಟು ಎಲ್ಲವನ್ನೂ ಪೂರ್ಣ ಮಾತಾಡಿದೆವೆಂಬ ಸಂತೃಪ್ತ ಭಾವ ಇಬ್ಬರಲ್ಲೂ. ಬಾಂಧವ್ಯ ಬೆಸೆದ ಅನುಭೂತಿ. ಎಲ್ಲಕ್ಕಿಂತ ಹೆಚ್ಚು ಕಾಡುವ ದೃಶ್ಯವೆಂದರೆ, ಅಮ್ಮನ ಪಾದಗಳನ್ನು ಶ್ರದ್ಧೆಯಿಂದ ಮಗ ಪಾಂಗಿತವಾಗಿ ತೊಳೆಯುವ ರೀತಿ. ಅದು ಕೇವಲ ಶುಷ್ಕ ಆಚರಣೆಯಲ್ಲ. ನಿಜವಾದ ಭಾವ ಸ್ಫುರಣೆ. ಪಾದಗಳೆರಡನ್ನೂ ಪೂರ್ಣವಾಗಿ ಹಸ್ತದಿಂದ ಸ್ಪರ್ಶಿಸುತ್ತಾನೆ. ಟವೆಲಿನಿಂದ ಶುಭ್ರವಾಗಿ ಒರೆಸುತ್ತಾನೆ. ಇದ್ಯಾಕಪ್ಪಾ ಕನ್ನಡಕ ತೆಗೆದನಲ್ಲಾ ಎಂದರೆ. ಪಾದ ತೊಳೆದ ತಟ್ಟೆಯಲ್ಲಿರುವ ನೀರನ್ನು ಬೆರಳಲ್ಲಿ ಮುಟ್ಟಿ ಕಣ್ಣಿಗೆ ಒತ್ತಿಕೊಳ್ಳುತ್ತಾನೆ. ಸಾರ್ಥಕ್ಯದ ಕ್ಷಣವೆಂದರೆ ಅದೇ ಇರಬೇಕು. ಅಲ್ಲವೇ.

ಅಮ್ಮನ ಆಶೀರ್ವಾದ ಬೇಡುವುದೆಂದರೆ ಅದರ ಕ್ರಮಬದ್ಧತೆ ಹೀಗೆಲ್ಲಾ ಇರುತ್ತದಾ. ನಮ್ಮ ಹಿರಿಯರು ನಡೆಸಿಕೊಂಡು ಬಂದಿರುವ ಗೌರವಾಚರಣೆಗಳಲ್ಲಿ ಇಷ್ಟೆಲ್ಲಾ ಉನ್ನತ ಅಂಶಗಳು ಒಳಗೊಂಡಿವೆಯಾ.

ಇವೆಲ್ಲವೂ ಈ ಆರ್ಡಿನರಿ ಚಾಯ್‌ವಾಲಾ ಸಪ್ಲೈಯರ್‌ಗೆ ಹೇಗೆ ಗೊತ್ತಾಯಿತೋ. ಆತ ಏನನ್ನೇ ಮಾಡಲಿ; ಅದರ ಲ್ಲಿನ ಶ್ರದ್ಧೆ, ತಾದಾತ್ಮ್ಯ, ಭಕ್ತಿ ಎದ್ದು ಕಾಣುತ್ತವೆ. ಒಂದೇ ಒಂದು ನಡವಳಿಕೆಯೂ ತೋರಿಕೆಯದಲ್ಲ. ಬೇಕಾಬಿಟ್ಟಿ ಬೂಟಾಟಿಕೆಯಲ್ಲ. ಅಮ್ಮನ ಆಶೀರ್ವಾದ ಪಡೆವುದೆಂದರೆ, ಪವಿತ್ರ ಪೂಜೆ ಆತನಿಗೆ. ಅವರ ಯಾವುದೇ ವಿಚಾರ ತೆಗೆದುಕೊಳ್ಳಲಿ. ಪ್ರತಿ ನಡೆನುಡಿಯೂ ಮೇಲ್ಪಂಕ್ತಿಯದು. ಅನುಕರಣೀಯವಾದದ್ದು. ಹೋಲಿಸಿಕೊಳ್ಳದೆ ನಿರ್ವಾಹವಿಲ್ಲ. ವಿಚಾರವ್ಯಾಧಿಗಳ ಜೊತೆಗೆ ಸೇರಿಕೊಂಡು ಪ್ರತಿಯೊಂದು ಆಚರಣೆಯನ್ನೂ ಟೀಕಿಸುತ್ತಾ ಅವಹೇಳನ ಮಾಡುತ್ತಾ ಧಿಕ್ಕರಿಸುತ್ತಾ ಬಂದವನು ನಾನು. ನಮ್ಮ ಪರಂಪರೆಯಿಂದ ಬಂದಿರುವ ಎಂತೆಂತಹ ಉತ್ಕೃಷ್ಟ ಸಂಗತಿ ಗಳನ್ನು ಕಳೆದುಕೊಂಡು ಬಿಟ್ಟೆ ಎಂದು ಈಗನ್ನಿಸುತ್ತದೆ. ಒಂದೇ ಒಂದು ಬಾರಿಯೂ ತಂದೆ– ತಾಯಿಗಳ ಪಾದಗಳನ್ನು ಸ್ಪರ್ಶಿಸಲಿಲ್ಲ. ಅದೆಲ್ಲ ಮೂಢನಂಬಿಕೆ. ಬೂಟಾಟಿಕೆ ಎಂದು ತಿರಸ್ಕರಿಸಿ ಬಿಟ್ಟೆ.

ಮಕ್ಕಳ ತಲೆಯನ್ನು ಮುಟ್ಟಿ ಪ್ರಾಂಜಲವಾಗಿ ಆಶೀರ್ವದಿಸುವ ನಿರ್ಮಲ ಮನಸ್ಸು ಹೆತ್ತವರಿಗಲ್ಲದೆ ಮತ್ತಾರಿಗಿದ್ದೀತು. ಈ ದೃಷ್ಟಿಯಿಂದ ಮೋದಿ ಪುಣ್ಯ ಪುರುಷರು. ತಾಯಿ ಇಲ್ಲವಾದರೇನು, ಆಕೆಯ ಪೂರ್ಣ ಆಶೀರ್ವಾದ ಅವರನ್ನು ಕೊನೆತನಕ ಪೊರೆಯಬಲ್ಲದು.

–ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ, ಮೈಸೂರು

ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಬೇಡ

ಅಮಿತ್ ಷಾಗೆ ಹಳೇ ಮೈಸೂರು ಭಾಗದ ಮುಖಂಡರ ಮನವಿ

ಬೆಂಗಳೂರು, ಡಿ. 30– ಹಳೇ ಮೈಸೂರು ಭಾಗದಲ್ಲಿ ಈ ಬಾರಿ ಭಾರತೀಯ ಜನತಾ ಪಕ್ಷ ಅಧಿಕ ಸ್ಥಾನಗಳನ್ನು ಗೆಲ್ಲುವುದರೊಂದಿಗೆ ಸ್ಪಷ್ಟ ಬಹುಮತ ಗಳಿಸಿ, ಮತ್ತೆ ರಾಜ್ಯದಲ್ಲಿ ಅಧಿಕಾರ ಹಿಡಿಯುವ ಸಂಬಂಧ ರಣತಂತ್ರ ರೂಪಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ ಇಂದು ಹಳೇ ಮೈಸೂರು ಭಾಗದ ಸಚಿವರು, ಶಾಸಕರು, ನಿಗಮ ಮಂಡಳಿ ಅಧ್ಯಕ್ಷರು ಹಾಗೂ ಮುಖಂಡರೊಂದಿಗೆ ಮಹತ್ವದ ಚರ್ಚೆ ನಡೆಸಿದರು.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ರಾತ್ರಿ ನಡೆದ ಸಭೆಯಲ್ಲಿ ಆಯಾಯ ಜಿಲ್ಲೆಯ ಸಚಿವರು, ಶಾಸಕರು ಹಾಗೂ ಮುಖಂಡರಿಂದ ಅಭಿಪ್ರಾಯ ಸಂಗ್ರಹಿಸಿದರು. ಈ ವೇಳೆ ಬಹುತೇಕ ಎಲ್ಲಾ ಜಿಲ್ಲೆಗಳ ಮುಖಂಡರು ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಾರದು. ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ಸಮಾನ ಅಂತರವನ್ನು ಕಾಯ್ದುಕೊಳ್ಳಬೇಕು, ಎಲ್ಲಿಯೂ ಜನರಿಗೆ ಅನುಮಾನ ಬರುವಂತೆ ನಿರ್ಣಯಗಳನ್ನು ಕೈಗೊಳ್ಳಬಾರದು ಎಂದು ಅಮಿತ್ ಷಾ ಅವರಲ್ಲಿ ಮನವಿ ಮಾಡಿದರು.

ಚುನಾವಣೆಯ ಸಂದರ್ಭದಲ್ಲಿ ಅಪಪ್ರಚಾರ ಮಾಡುವುದು ಸಾಮಾನ್ಯವಾಗಿದೆ. ಎಲ್ಲಾ ವರ್ಗವನ್ನು ಪರಿಗಣನೆಗೆ ತೆಗೆದುಕೊಂಡು ಚುನಾವಣೆ ಎದುರಿಸಿದರೆ ಬಿಜೆಪಿ ಬಹುಮತ ಗಳಿಸುವುದು ಕಷ್ಟಸಾಧ್ಯವೇನಲ್ಲ. ಆದ್ದರಿಂದ ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಬೇಡ, ಮಾಜಿ ಪ್ರಧಾನಿ ದೇವೇಗೌಡರ ಅಭಿಪ್ರಾಯಗಳಿಗೆ ಮನ್ನಣೆ ನೀಡುವುದರಿಂದ ಅನುಮಾನಗಳಿಗೆ ಆಸ್ಪದ ನೀಡಿದಂತಾಗುತ್ತದೆ. ಹಾಗಾಗಿ ಎಲ್ಲಾ ಪಕ್ಷದೊಂದಿಗೆ ಸಮಾನ ಅಂತರವನ್ನು ಕಾಯ್ದುಕೊಳ್ಳುವಂತೆ ತಿಳಿಸಿದರು. ಅಂತಿಮವಾಗಿ ಅಮಿತ್ ಷಾ ಈ ವಿಷಯದಲ್ಲಿ ನಿಮಗೆ ಅನುಮಾನ ಬೇಡ. ನಾವು ಸ್ವತಂತ್ರವಾಗಿಯೇ ಚುನಾವಣೆಗೆ ಹೋಗೋಣ. ಈ ಬಾರಿ ಸ್ಪಷ್ಟ ಬಹುಮತ ಗಳಿಸಿ ಅಧಿಕಾರ ಹಿಡಿಯುವುದು ಶತಸಿದ್ಧ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ.

ಸಭೆಯಲ್ಲಿ ಕೋಲಾರ, ಬೆಂಗಳೂರು, ಮಂಡ್ಯ, ಚಿಕ್ಕಮಗಳೂರು, ಮೈಸೂರು, ಕೊಡಗು, ಚಾಮರಾಜನಗರ, ಹಾಸನ ಜಿಲ್ಲೆಗಳ ಮುಖಂಡರು ಪಾಲ್ಗೊಂಡಿದ್ದರು. ಮೈಸೂರಿಂದ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕರಾದ ಎಸ್.ಎ. ರಾಮದಾಸ್, ನಾಗೇಂದ್ರ, ಹರ್ಷವರ್ಧನ್, ಎನ್. ಮಹೇಶ್, ನಿರಂಜನ್‌ಕುಮಾರ್, ಮೈಲಾಕ್ ಅಧ್ಯಕ್ಷ ಆರ್. ರಘು ಕೌಟಿಲ್ಯ, ಮುಖಂಡ ಮೈವಿ. ರವಿಶಂಕರ್, ಮಾಜಿ ಸಚಿವ ವಿಜಯಶಂಕರ್, ಮಾಜಿ ಶಾಸಕ ಮಲ್ಲಿಕಾರ್ಜುನಪ್ಪ, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ. ಶಿವಣ್ಣ ಇತರರು ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 31 ಶನಿವಾರ 2022

ಸಂಪುಟ: 43 | ಸಂಚಿಕೆ: 254 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮಗನಾಗಿ ಮಮತೆಯ ಮಾತೆಯ ಅಂತಿಮ ವಿಧಿವಿಧಾನ ನೆರವೇರಿಸಿದ ಪ್ರಧಾನಿ ಮೋದಿ

● ಅಮ್ಮನ ಅಂತಿಮ ಯಾತ್ರೆಗೆ ಹೆಗಲು ಕೊಟ್ಟರು ● ಅಗ್ನಿಸ್ಪರ್ಶದ ನಂತರ ಯಥಾ ಕಾರ್ಯಪ್ರವೃತ್ತ

ಅಹಮದಾಬಾದ್, ಡಿ.30–'ನಾಡಿಗೆ ದೊರೆಯಾದರೂ ಹೆತ್ತ ತಾಯಿಗೆ ಕಂದನೇ' ಎನ್ನುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಕರುಳಬಳ್ಳಿಯ ಅಂತಿಮ ಯಾತ್ರೆಯಲ್ಲಿ ಕಂಡುಬಂದರು.

ದೇವರಂತೆ ಆರಾಧಿಸುತ್ತಿದ್ದ ತಾಯಿ ಇನ್ನಿಲ್ಲವಾದರೆಂಬ ಸುದ್ದಿ ತಿಳಿದು ಅಹಮದಾಬಾದ್‌ಗೆ ದೌಡಾಯಿಸಿದ ಅವರು ಸುಮಾರು ಮೂರೂವರೆ ಗಂಟೆಗಳ ಕಾಲ ಎಲ್ಲವನ್ನೂ ಮರೆತು ಪಾರ್ಥಿವ ಶರೀರದ ಬಳಿಯೇ ಇದ್ದರು. ಮೋದಿಯವರ ತಾಯಿ ಶತಾಯುಷಿ ಹೀರಾಬೆನ್ ಅವರು ಶುಕ್ರವಾರ ಮುಂಜಾನೆ 3.39ರಲ್ಲಿ ಇಹಲೋಕ ತ್ಯಜಿಸಿದರು. ಅವರ ಪಾರ್ಥಿವ ಶರೀರವನ್ನು ಅಹಮದಾಬಾದ್‌ನ ಯು.ಎನ್.ಮೆಹ್ತಾ ಆಸ್ಪತ್ರೆಯಿಂದ ಮೋದಿ ಸಹೋದರ ಪ್ರಹ್ಲಾದ್ ಮೋದಿಯವರ ನಿವಾಸಕ್ಕೆ ತರಲಾಯಿತು. ತಾಯಿ ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಅಹಮದಾಬಾದ್‌ಗೆ ಆಗಮಿಸಿದ ಪ್ರಧಾನಿ ಮೋದಿ ಬೆಳಗ್ಗೆ 6 ಗಂಟೆಗೆ ಆರಂಭವಾದ ಅಂತಿಮ ವಿಧಿ–ವಿಧಾನಗಳನ್ನು ಓರ್ವ ಮಗನಾಗಿ ನಿರ್ವಹಿಸಿದರು. ತಾಯಿ ಹೀರಾಬೆನ್ ಅವರ ಪಾರ್ಥಿವ ಶರೀರ ಯಾತ್ರೆಗೆ ಹೆಗಲು ಕೊಟ್ಟು ಸಾಗಿದರು. ಪಾರ್ಥಿವ ಶರೀರವನ್ನು ರುದ್ರಭೂಮಿಗೆ ಕೊಂಡೊಯ್ದು ವಾಹನದಲ್ಲೇ ತಾವೂ ಪ್ರಯಾಣಿಸಿದರು. ಅಹಮದಾಬಾದ್‌ನ ಸೆಕ್ಟರ್–30ರ ರುದ್ರಭೂಮಿಯಲ್ಲಿ ತಾಯಿ ಹೀರಾಬೆನ್ ಅವರ ಅಂತಿಮ ವಿಧಿ–ವಿಧಾನಗಳನ್ನು ಸಹೋದರರೊಡಗೂಡಿ ನೆರವೇರಿಸಿ, ಚಿತೆಗೆ ಅಗ್ನಿ ಸ್ಪರ್ಶ ಮಾಡಿದರು. ಹೀರಾಬೆನ್ ಅವರು ದೇಶದ ಪ್ರಧಾನಿಯ ತಾಯಿಯಾದರೂ, ಅವರ ಅಂತಿಮ ವಿಧಿ–ವಿಧಾನಗಳು ಸರಳವಾಗಿ ಕೇವಲ ಮೂರೂವರೆ ಗಂಟೆಗಳ ಅವಧಿಯಲ್ಲಿ ಸನಾತನ ಹಿಂದೂ ಧರ್ಮದ ವಿಧಿ–ವಿಧಾನದಂತೆ ನೆರವೇರಿತು. ಮೋದಿಯವರ ತಾಯಿಯ ಅಗಲಿಕೆ ಸುದ್ದಿ ಹರಡುವಷ್ಟರಲ್ಲಿ ಅವರ ಅಂತ್ಯಕ್ರಿಯೆ ಮುಗಿದಿತ್ತು. ಅಂತಿಮ ದರ್ಶನಕ್ಕಾಗಿ ಹೆಚ್ಚಿನ ಗಣ್ಯರು ಆಗಮಿಸಲು ಪ್ರಧಾನಿ ಮೋದಿ ಆಸ್ಪದ ನೀಡಲಿಲ್ಲ. ▶ 10ನೇ ಪುಟಕ್ಕೆ



ಅಮಿತ್ ಷಾ ರಾಜ್ಯಕ್ಕೆ ಬಂದರೆ ಯಡಿಯೂರಪ್ಪ ಸಿಂಗಾಪೂರ್‌ಗೆ ಹಾರಿದರು



ಬೆಂಗಳೂರು, ಡಿ.30(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಚರ್ಚೆ ನಡೆಸಲು ಕೇಂದ್ರ ಗೃಹ ಸಚಿವ ಅಮಿತ್ ಷಾ ಕರೆದಿರುವ ರಾಜ್ಯ ಬಿಜೆಪಿ ಮುಖಂಡರ ಸಭೆಯಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ದೂರ ಉಳಿದಿದ್ದಾರೆ. ನಿನ್ನೆ ತಡರಾತ್ರಿ ನಗರಕ್ಕೆ ಆಗಮಿಸುತ್ತಿದ್ದಂತೆ ಅಮಿತ್ ಷಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಅವರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿದರು.

ಚುನಾವಣಾ ಉದ್ದೇಶಕ್ಕಾಗಿ ಎರಡು ದಿನಗಳ ಕಾಲ ರಾಜ್ಯದಲ್ಲಿರುವ ಷಾ ರಾಜ್ಯ ಮುಖಂಡರೊಟ್ಟಿಗೆ ನಿರಂತರ ಸಭೆಗಳನ್ನು ನಿಗದಿಪಡಿಸಿದ್ದಾರೆ. ಈ ಎಲ್ಲಾ ಸಭೆಗಳಿಗೂ ಯಡಿಯೂರಪ್ಪ ಅವರಿಗೆ ಆಹ್ವಾನವಿದೆ. ಅಮಿತ್ ಷಾ ರಾಜ್ಯ ಪ್ರವಾಸ ಕೈಗೊಳ್ಳುವ ಮಾಹಿತಿ ಮೂರು ವಾರಕ್ಕೂ ಮೊದಲೇ ಮಾಜಿ ಮುಖ್ಯಮಂತ್ರಿಯವರಿಗೂ ತಿಳಿದಿತ್ತು.

ರಾಷ್ಟ್ರೀಯ ನಾಯಕರು ಹಾಗೂ ಮುಖ್ಯಮಂತ್ರಿಗಳು ತಮ್ಮನ್ನು ಕಡೆಗಾಣಿಸುತ್ತಿದ್ದಾರೆ ಎಂದು ಕುಪಿತಗೊಂಡಿರುವ ಯಡಿಯೂರಪ್ಪ ಇತ್ತೀಚೆಗೆ ಜನ ಸಂಕಲ್ಪ ಯಾತ್ರೆಗಳಿಂದಲೂ ದೂರ ಉಳಿದಿದ್ದರು. ತಮ್ಮ ಪುತ್ರ ವಿಜಯೇಂದ್ರನಿಗೆ ಸರ್ಕಾರದಲ್ಲಾಗಲೀ, ಪಕ್ಷದಲ್ಲಿ ಉನ್ನತ ಸ್ಥಾನಮಾನಗಳನ್ನು ನೀಡಲಿಲ್ಲ ಎಂಬ ಬೇಸರ ಅವರಿಗಿದೆ. ಮುಖ್ಯಮಂತ್ರಿ ಸ್ಥಾನ ತೊರೆದ ನಂತರ ಚುನಾವಣಾ ರಾಜಕೀಯ ▶ 9ನೇ ಪುಟಕ್ಕೆ

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕರ್ನಾಟಕ ದೆಹಲಿ ನಾಯಕರಿಗೆ ATM

ಜೆಡಿಎಸ್ ಅಧಿಕಾರಕ್ಕೆ ಬಂದರೆ ಒಂದು ಕುಟುಂಬಕ್ಕೆ ATM

● ಕೇಂದ್ರ ಗೃಹ ಸಚಿವ ಅಮಿತ್ ಷಾ ಮಂಡ್ಯದಲ್ಲಿ ವಾಗ್ದಾಳಿ ● ಕಾಂಗ್ರೆಸ್ ಭ್ರಷ್ಟಾಚಾರಿ; ಜೆಡಿಎಸ್ ಕುಟುಂಬ ಪಕ್ಷ ● ಬಿಜೆಪಿ ಗೆಲ್ಲಿಸಿ ಡಬಲ್ ಇಂಜಿನ್ ಸರ್ಕಾರ ತಂದರೆ ಅಭಿವೃದ್ಧಿಗೆ ನಾಂದಿ

ಮಂಡ್ಯ, ಡಿ.30–ಕಾಂಗ್ರೆಸ್ ಭ್ರಷ್ಟಾಚಾರಿ ಪಕ್ಷ, ಜೆಡಿಎಸ್ ಒಂದು ಕುಟುಂಬ ಪಕ್ಷವಾಗಿದ್ದು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕರ್ನಾಟಕ ದೆಹಲಿ ನಾಯಕರಿಗೆ ಎಟಿಎಂ ಆಗುತ್ತದೆ ಜೆಡಿಎಸ್ ಬಂದರೆ ಒಂದು ಕುಟುಂಬದ ಎಟಿಎಂ ಆಗುತ್ತದೆ ಎಂದ ಕೇಂದ್ರ ಗೃಹ ಸಚಿವ ಅಮಿತ್ ಷಾ, ರಾಜ್ಯದಲ್ಲಿ ಕುಟುಂಬ ರಾಜಕಾರಣ ಹಾಗೂ ಭ್ರಷ್ಟಾಚಾರ ಮುಕ್ತಗೊಳಿಸಲು ಮೋದಿ ನೇತೃತ್ವದ ಡಬ್ಬಲ್ ಎಂಜಿನ್ ಸರ್ಕಾರ ಇನ್ನೂ ಐದು ವರ್ಷ ಕರ್ನಾಟಕದಲ್ಲಿ ಆಡಳಿತ ನಡೆಸಬೇಕಾದ ಅನಿವಾರ್ಯತೆ ಇದೆ ಎಂದರು.



ಮಂಡ್ಯ ವಿಶ್ವವಿದ್ಯಾನಿಲಯದ (ಬಾಯ್ಸ್ ಕಾಲೇಜ್) ಆವರಣದಲ್ಲಿ ಇಂದು ನಡೆದ ಬಿಜೆಪಿ ಜನ ಸಂಕಲ್ಪ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಈ ಭಾಗದ ಜನರ ಆಶೀರ್ವಾದದಿಂದ ರಾಜ್ಯದಲ್ಲಿ ಆಡಳಿತ ನಡೆಸಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಜಾತಿವಾದಿಗಳು ಮಾತ್ರವಲ್ಲದೇ ಭ್ರಷ್ಟಾಚಾರದಲ್ಲಿ ತೊಡಗಿದ್ದವು. ಜೊತೆಗೆ ಈ ಪಕ್ಷಗಳು ಕ್ರಿಮಿನಲ್‌ಗಳನ್ನು ಪೋಷಿಸುವ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡಿದ್ದವು. ಈ ಪಕ್ಷಗಳು ಅಧಿಕಾರದಲ್ಲಿದ್ದಾಗ ದಲಿತರು ಹಾಗೂ ಆದಿವಾಸಿಗಳಿಗೆ ಅನ್ಯಾಯ ಮಾಡಿವೆ ಎಂದರು.

ಆದರೆ ಬಿಜೆಪಿ ದಲಿತರು ಹಾಗೂ ಆದಿವಾಸಿಗಳ ಪರವಾಗಿದ್ದು, ದಲಿತರಾದ ರಮಾನಾಥ ಕೋವಿಂದ್, ಆದಿವಾಸಿ ಮಹಿಳೆಯಾದ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿಗಳನ್ನಾಗಿ ಮಾಡಿದೆ. ದಲಿತರಿಗೆ ಮತ್ತು ಆದಿವಾಸಿಗಳಿಗೆ ರಾಷ್ಟ್ರದ ಅತ್ಯುನ್ನತ ಅಧಿಕಾರ ನೀಡಿದ ದೇಶದ ಏಕೈಕ ಪಕ್ಷ ಬಿಜೆಪಿ ಎಂದರು. 2018ರಲ್ಲಿ ನಾನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷನಾಗಿದ್ದಾಗ ಮಂಡ್ಯದಲ್ಲೇ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದ್ದೆ ಎಂದ ಅವರು, ಈಗಲೂ ಕೂಡ ಮಂಡ್ಯದಿಂದಲೇ ಚುನಾವಣಾ ಪ್ರಚಾರ ಆರಂಭಿಸಿದ್ದೇನೆ ಎಂದರು. 2019ರಲ್ಲಿ ನರೇಂದ್ರ ಮೋದಿಯವರು 2ನೇ ಬಾರಿಗೆ ಪ್ರಧಾನಿಯಾಗಲು ಕರ್ನಾಟಕದ ಕೊಡುಗೆ ಅಪಾರವಾಗಿದ್ದು, ನೀವು ಶೇ.52ರಷ್ಟು ಮತ ನೀಡಿ, 26 ಸಂಸದರನ್ನು ಗೆಲ್ಲಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು ಎಂದರು. ಈ ಬಾರಿ ಚುನಾವಣೆಯಲ್ಲಿ ▶ 9ನೇ ಪುಟಕ್ಕೆ

'ಮೈಸೂರು ಮಿತ್ರ'ನ 2023ನೇ ಸಾಲಿನ **ವರ್ಣರಂಜಿತ ಕ್ಯಾಲೆಂಡರ್**ನ್ನು ಜನವರಿ 1 ಭಾನುವಾರದಂದು ನೀಡಲಾಗುವುದು. ನಿಮ್ಮ ಪ್ರತಿ ಕಾಯ್ದಿರಿಸಿ... –ಸಂ.

ಅಮಿತ್ ಷಾ ಮಂಡ್ಯ ಜನರಿಗೆ ಮಂಕುಬೂದಿ ಎರಚಲು ವಿಫಲ ಯತ್ನ



ಬೆಂಗಳೂರು, ಡಿ.30– ಮಂಡ್ಯದಲ್ಲಿಂದು 2023ರ ರಾಜ್ಯ ವಿಧಾನಸಭಾ ಚುನಾವಣೆಗೆ ರಣಕಹಳೆ ಊದಿದ ಬಿಜೆಪಿ ಚಾಣಕ್ಯ ಖ್ಯಾತಿಯ ಅಮಿತ್ ಷಾ, ಮಕ್ಮಲ್ ಟೋಪಿ ಹಾಕಲು ವ್ಯರ್ಥ ಯತ್ನ ಮಾಡುತ್ತಿದ್ದು, ಅವರ ಅತಿಯಾದ ಉತ್ಸಾಹ ಒಳ್ಳೆಯದಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಕುಮಾರಸ್ವಾಮಿ, ಪಂಚರತ್ನ ರಥಯಾತ್ರೆಯ ಯಶಸ್ಸು ಷಾ ಕಣ್ಣಿಗೂ ಬಿದ್ದಿರಬಹುದು, ಇಲ್ಲವೇ ಯಾರಾದರೂ ಭಟ್ಟಂಗಿಗಳು ಅವರ ಕಿವಿ ಊದಿರಬಹುದು. ಅದಕ್ಕೆ ಮಂಡ್ಯಕ್ಕೆ ಬಂದು, ಎಟಿಎಂ ಬಗ್ಗೆ ಮಾತನಾಡಿದ್ದಾರೆ. ಭೂತದ ಬಾಯಲ್ಲಿ ಭಗವದ್ಗೀತೆ ಎಂದರೆ ಹೀಗೆಯೇ. ಸುಳ್ಳು ಹೇಳುವುದಕ್ಕೆ ಸಂಕೋಚ ಬೇಡವೇ ಕರ್ನಾಟಕ ಮಾತ್ರವಲ್ಲ, ಇಡೀ ಭಾರತವೇ ಭಾರತೀಯ ಜನತಾ ಪಕ್ಷದ ಎಟಿಎಂ ಆಗಿದೆ. ಇದು ಸುಳ್ಳಾ ಎಂದು ಪ್ರಶ್ನಿಸಿದ್ದಾರೆ. ಅಮಿತ್ ಶಾ ಮಂಡ್ಯ ಜನರಿಗೆ ಮಂಕುಬೂದಿ ಎರಚಲು ವಿಫಲ ಯತ್ನ ನಡೆಸಿದ್ದಾರೆ ಎಂದು ಕಿಡಿಕಾರಿದ್ದಾರೆ.

ಭೀಕರ ರಸ್ತೆ ಅಪಘಾತದಲ್ಲಿ ಕ್ರಿಕೆಟರ್ ರಿಷಬ್ ಪಂತ್‌ಗೆ ಗಂಭೀರ ಗಾಯ

ಡಿವೈಡರ್‌ಗೆ ಡಿಕ್ಕಿ ಹೊಡೆದು ಹೊತ್ತಿ ಉರಿದ ಕಾರು





ನವದೆಹಲಿ: ಭಾರತ ತಂಡದ ವಿಕೆಟ್‌ಕೀಪರ್, ಬ್ಯಾಟ್ಸ್‌ಮನ್ ರಿಷಭ್ ಪಂತ್ ಅವರು ಕಾರು ಅಪಘಾತದಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ದೆಹಲಿ ಹಾಗೂ ಡೆಹ್ರಾಡೂನ್ ರಾಷ್ಟ್ರೀಯ ಹೆದ್ದಾರಿಯಲ್ಲಿನ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ರಿಷಭ್ ಪಂತ್ ಅವರ ತಲೆ ಹಾಗೂ ಕಾಲುಗಳಿಗೆ ಗಾಯವಾಗಿದೆ. ಹಾಗಾಗಿ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ರಿಷಭ್ ಪಂತ್ ದೆಹಲಿಯಿಂದ ಉತ್ತರಾಖಂಡಕ್ಕೆ ಮರಳುತ್ತಿದ್ದ ವೇಳೆ ಹಮ್ಮಾದ್‌ಪುರ್ ಝಾಲ್ ಸಮೀಪ ಈ ದುರ್ಘಟನೆ ನಡೆದಿದೆ. ಅವರು ಮರ್ಸಿಡಿಸ್ ಕಾರು ಚಲಾಯಿಸುತ್ತಿದ್ದರು. ಕಾರು ವೇಗವಾಗಿದ್ದ ಕಾರಣ ನಿಯಂತ್ರಣಕ್ಕೆ ಸಿಗದೆ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದ್ದು, ಇದರ ಪರಿಣಾಮ ▶ 9ನೇ ಪುಟಕ್ಕೆ

ಹೊಸ ವರ್ಷಾಚರಣೆ ಹುಮ್ಮಸ್ಸಿಗೆ ಕೊರೊನಾದಿಂದಾಗಿ ಎಡರು–ತೊಡರು

● ನಗರಗಳ ನಿರ್ಬಂಧದಿಂದ ರೋಸಿ ಬಯಲು, ತೋಟದ ಮನೆಗಳ ಮೊರೆ ಹೋಗುತ್ತಿರುವ ಯುವ ಸಮೂಹ ● ಮೋಜುಮಸ್ತಿಗೆ ಮೈಸೂರಲ್ಲಿ ಬ್ರೇಕ್ ಬಿದ್ದರೂ ಸಂಭ್ರಮಕ್ಕೆ ಅಡ್ಡಿ ಇಲ್ಲ

ಮೈಸೂರು, ಡಿ.30(ಎಸ್‌ಬಿಡಿ)– ಕೊರೊನಾ ಮಾರ್ಗಸೂಚಿ ಪಾಲನೆಯೊಂದಿಗೆ ಹೊಸ ವರ್ಷ ಸ್ವಾಗತಿಸಲು ಮೈಸೂರು ಸಜ್ಜಾಗುತ್ತಿದೆ.

ಕೊರೊನೋತ್ತರ ಚೇತರಿಕೆ ವರ್ಷವಾದ 2022 ಸರಿದು 2023ಕ್ಕೆ ಕಾಲಿಡುವ ಸಂದರ್ಭವನ್ನು ಸಂಭ್ರಮ ಸಡಗರದಿಂದ ಬರಮಾಡಿಕೊಳ್ಳಲು ಮೈಸೂರಿನ ಜನತೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಚೀನಾ, ಯುಎಸ್‌ಎ ಇನ್ನಿತರ ದೇಶಗಳಲ್ಲಿ ಕೊರೊನಾ ರೂಪಾಂತರಿ ಬಿಎಫ್.7 ಸೋಂಕು ವ್ಯಾಪಿಸಿರುವ ಹಿನ್ನೆಲೆಯಲ್ಲಿ ಭಾರತದಲ್ಲೂ ಮುಂಜಾಗ್ರತಾ ಕ್ರಮ ವಹಿಸಲಾಗಿದೆ. ಈ ಸಂಬಂಧ ಕೆಲ ದಿನಗಳ ಹಿಂದೆ ರಾಜ್ಯ ಸರ್ಕಾರವೂ ಹಲವು ಮಾರ್ಗಸೂಚಿ ಅನುಸರಿಸುವಂತೆ ಸೂಚಿಸಿದೆ. ಪರಿಣಾಮ ಈ ಬಾರಿ ಹೋಟೆಲ್, ಕ್ಲಬ್‌ಗಳಲ್ಲಿ ಅದ್ಧೂರಿ ಕಾರ್ಯಕ್ರಮಗಳಿಗೆ ಬ್ರೇಕ್ ಬಿದ್ದಿದ್ದು, ಸ್ನೇಹಿತರು–ಸಂಬಂಧಿಕರಿಗೆ ಸೀಮಿತವಾದ ಪಾರ್ಟಿ ಆಯೋಜನೆಗೆ ಭರದ ಸಿದ್ಧತೆ ನಡೆದಿದೆ.

ಅರಮನೆಯಲ್ಲಿ ಸಡಗರ: ಅಂಬಾವಿಲಾಸ ಅರಮನೆ ಅಂಗಳದಲ್ಲಿ ವಿದ್ಯುತ್ ದೀಪದ ಹೊಂಬೆಳಕು, ವಾದ್ಯ ಸಂಗೀತ ಹಾಗೂ ಪಟಾಕಿಯ ಚಿತ್ತಾರ ಮೂಡಿಸುವ ಮೂಲಕ ಹೊಸ ವರ್ಷವನ್ನು ಸ್ವಾಗತಿಸಲು ಅರಮನೆ ಮಂಡಳಿ ಸಜ್ಜಾಗಿದೆ. ನಾಳೆ(ಡಿ.31) ಸಂಜೆ 7ರಿಂದ ರಾತ್ರಿ 9 ಗಂಟೆವರೆಗೆ ಅರಮನೆ ▶ 9ನೇ ಪುಟಕ್ಕೆ

ಇಂದು ರಾತ್ರಿ ಚಾಮುಂಡಿಬೆಟ್ಟಕ್ಕೆ ಪ್ರವೇಶ ನಿಷೇಧ



ಪುರಾಣ ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿರುವ ಚಾಮುಂಡಿ ಬೆಟ್ಟವು ಮೀಸಲು ಅರಣ್ಯ ಪ್ರದೇಶವಾಗಿರುವ ಕಾರಣ ಹೊಸ ವರ್ಷ ಸಂಭ್ರಮ ಆಚರಣೆಗೆ ರಾತ್ರಿ ಸಮಯದಲ್ಲಿ ಬಂದು ಮದ್ಯಪಾನ ಮಾಡಿ ವಾಹನ ಚಲಾಯಿಸುವಾಗ ಸಂಭವಿಸುವ ಅಪಘಾತಗಳನ್ನು ತಪ್ಪಿಸುವ ಉದ್ದೇಶದಿಂದ ಡಿ.31 ರಂದು ರಾತ್ರಿ 9 ಗಂಟೆಯಿಂದ ಜನವರಿ 1ರ ಬೆಳಗ್ಗೆ 5 ಗಂಟೆಯವರೆಗೆ ಚಾಮುಂಡಿಬೆಟ್ಟದ ನಿವಾಸಿಗಳನ್ನು ಹೊರತುಪಡಿಸಿ ಸೆಕ್ಷನ್ 144 ಪ್ರಕಾರ ಸಾರ್ವಜನಿಕರು ಹಾಗೂ ವಾಹನಗಳ ಪ್ರವೇಶವನ್ನು ಚಾಮುಂಡಿಬೆಟ್ಟಕ್ಕೆ ನಿರ್ಬಂಧಿಸಿ ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ನಿಷೇಧಾಜ್ಞೆ ಜಾರಿಗೊಳಿಸಿರುತ್ತಾರೆ.



"ಸರ್ಕಾರ ಸಲಹೆ ಮಾದರಿಯಲ್ಲಿ ನೀಡಿರುವ ಕೊರೊನಾ ಮಾರ್ಗಸೂಚಿಯನ್ನು ಎಲ್ಲರೂ ಪಾಲಿಸಬೇಕು. 60 ವರ್ಷ ಮೇಲ್ಪಟ್ಟವರು, ಗರ್ಭಿಣಿಯರು ಅನಿವಾರ್ಯವಿದ್ದರೆ ಮಾತ್ರ ಹೊರ ಬರಬೇಕು. ಆ ವೇಳೆ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಬೂಸ್ಟರ್ ಡೋಸ್ ಪಡೆದವರು ಮಾಸ್ಕ್ ಧರಿಸುವ ಅಗತ್ಯವಿಲ್ಲ ಎಂಬ ಧೋರಣೆ ಸರಿಯಲ್ಲ. ಬೂಸ್ಟರ್ ಡೋಸ್ ಪಡೆದವರಿಗೆ ಇನ್ಫೆಕ್ಟ್ ಆಗದಿದ್ದರೂ ಅಂತಹವರಿಂದ ಬೇರೆಯವರಿಗೆ ಸೋಂಕು ಹರಡಬಹುದು. ಹಾಗಾಗಿ ಸಾಮಾಜಿಕ ಜವಾಬ್ದಾರಿಯಿಂದ ಸ್ವಯಂ ಪ್ರೇರಣೆಯಿಂದ ಎಲ್ಲರೂ ನಡೆದುಕೊಳ್ಳಬೇಕಿದೆ.

– ಡಾ.ಕೆ.ವಿ.ರಾಜೇಂದ್ರ, ಮೈಸೂರು ಜಿಲ್ಲಾಧಿಕಾರಿ

ಗ್ರಾಮಕ್ಕೆ ದಿಢೀರ್ ನುಗ್ಗಿದ ಕಾಡಾನೆಗೆ ರೈತ ಮಹಿಳೆ ಬಲಿ

● ಇಬ್ಬರು ಯುವಕರಿಗೆ ಗಾಯ ● ಕೆಲವೇ ಗಂಟೆಯಲ್ಲಿ ಪುಂಡಾನೆ ಸೆರೆ ● ಹುಣಸೂರು ತಾಲೂಕು ಬಿಳಿಕೆರೆ ಬಳಿ ದುರಂತ



ಬಿಳಿಕೆರೆ (ಹುಣಸೂರು ತಾಲೂಕು), ಡಿ. 30(ಎಂಟಿವೈ)– ಶುಕ್ರವಾರ ಬೆಳ್ಳಂಬೆಳಗ್ಗೆ ಹುಣಸೂರು ತಾಲೂಕು ಬಿಳಿಕೆರೆ ಬಳಿಯ ಚಿಕ್ಕಬೀಚನಹಳ್ಳಿ ಗ್ರಾಮಕ್ಕೆ ನುಗ್ಗಿದ ಒಂಟಿ ಸಲಗ ರೈತ ಮಹಿಳೆಯನ್ನು ಕೊಂದು, ಇಬ್ಬರು ಯುವಕರನ್ನು ಗಾಯಗೊಳಿಸುವ ಮೂಲಕ ಪುಂಡಾಟ ಮೆರೆದು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿತು. ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ ಕೆಲವೇ ಗಂಟೆಗಳಲ್ಲಿ ಪುಂಡಾನೆಯನ್ನು ಸೆರೆ ಹಿಡಿದು ಗ್ರಾಮಸ್ಥರ ಆತಂಕವನ್ನು ದೂರ ಮಾಡಿದ್ದಾರೆ. ಚಿಕ್ಕಬೀಚನಹಳ್ಳಿ ಗ್ರಾಮದ ಸಿದ್ದೇಗೌಡ ಎಂಬುವರ ಪತ್ನಿ ಚಿಕ್ಕಮ್ಮ(55) ಕಾಡಾನೆ ದಾಳಿಯಿಂದ ಮೃತಪಟ್ಟವರಾಗಿದ್ದು, ಬಿಳಿಕೆರೆ ಗ್ರಾಮದ ರವಿ ಮತ್ತು ದೊಡ್ಡಬೀಚನಹಳ್ಳಿಯ ರಂಜನ್ ಅಲಿಯಾಸ್ ರಂಜು ಕಾಡಾನೆ ದಾಳಿಗೆ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ಇಂದು ಬೆಳಗ್ಗೆ 7 ಗಂಟೆ ಸುಮಾರಿನಲ್ಲಿ ಚಿಕ್ಕಬೀಚನಹಳ್ಳಿ ಗ್ರಾಮದ ಹೊರವಲಯದ ರಸ್ತೆಯಲ್ಲಿ ಹುರುಳಿಸತ್ತೆಯನ್ನು ಒಕ್ಕಣೆ ಮಾಡಲು ಸಿದ್ದೇಗೌಡ ಮತ್ತು ಅವರ ಪತ್ನಿ ರಸ್ತೆಯಲ್ಲಿ ಹಾಸುತ್ತಿದ್ದಾಗ ಪೊದೆಯ ಮರೆಯಿಂದ ಒಂಟಿಸಲಗ ಪ್ರತ್ಯಕ್ಷವಾಗಿದ್ದು, ಅದನ್ನು ಕಂಡ ಸಿದ್ದೇಗೌಡರು ಎದ್ದು ▶ 10ನೇ ಪುಟಕ್ಕೆ

"ರೈತ ಮಹಿಳೆಯನ್ನು ಕೊಂದು ಇಬ್ಬರು ಯುವಕರ ಮೇಲೆ ದಾಳಿ ನಡೆಸಿ ಗಾಯಗೊಳಿಸಿದ ಪುಂಡಾನೆ 2019ರಲ್ಲಿ ನುಗು ಅರಣ್ಯ ವಲಯದಲ್ಲಿ ಇಬ್ಬರನ್ನು ಕೊಂದು ಹಾಕಿತ್ತು. ಆ ಸಂದರ್ಭದಲ್ಲಿ ಆನೆಯನ್ನು ಸೆರೆ ಹಿಡಿಯದೇ ಕಾಡಿಗೆ ಅಟ್ಟಲಾಗಿತ್ತು. ವಕ್ರದಂತ ಹೊಂದಿರುವ ಈ ಕಾಡಾನೆ, ಪದೇ ಪದೆ ಪುಂಡಾಟ ನಡೆಸುತ್ತಿದ್ದರಿಂದ ಇದೀಗ ಅದನ್ನು ಸೆರೆಹಿಡಿದು ದುಬಾರೆ ಸಾಕಾನೆ ಶಿಬಿರಕ್ಕೆ ಕೊಂಡೊಯ್ಯಲಾಗಿದೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮೃತ ಮಹಿಳೆ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಬೆಸ್ಕಾಂ, ಮೆಸ್ಕಾಂ ವ್ಯಾಪ್ತಿ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ 35 ರಿಂದ 37 ಪೈಸೆ ವಿದ್ಯುತ್ ದರ ಕಡಿತ

● ಉಳಿದವು ನಷ್ಟದಲ್ಲಿವೆ ಎಂಬ ಕಾರಣಕ್ಕೆ ದರ ಯಥಾಸ್ಥಿತಿ ● ಚೆಸ್ಕಾಂ ಸಹ ನಷ್ಟದಲ್ಲಿದೆಯಂತೆ



ಬೆಂಗಳೂರು, ಡಿ.30(ಕೆಎಂಶಿ)– ಪ್ರತಿ ಯೂನಿಟ್‌ಗೆ 35 ರಿಂದ 37 ಪೈಸೆ ವಿದ್ಯುತ್ ದರ ಇಳಿಕೆ ಮಾಡಿರುವ ಸರ್ಕಾರ, ಇಳಿಕೆಯಲ್ಲೂ ರಾಜ್ಯದ ತನ್ನ ಗ್ರಾಹಕರಿಗೆ ತಾರತಮ್ಯ ಮಾಡಿದೆ.

ಬೆಂಗಳೂರು ಹಾಗೂ ಮಂಗಳೂರು ವಿದ್ಯುತ್ ಪ್ರಸರಣ ಕಂಪನಿ ಅಡಿಯಲ್ಲಿ ಬರುವ ಗ್ರಾಹಕರಿಗೆ ಮಾತ್ರ ದರ ಕಡಿತ ಅನ್ವಯವಾಗಲಿದೆ ಎಂದು ಇಂಧನ ಖಾತೆ ಸಚಿವ ಸುನಿಲ್‌ಕುಮಾರ್ ಟ್ವೀಟ್ ಮಾಡಿದ್ದಾರೆ. ಚಾಮುಂಡೇಶ್ವರಿ (ಮೈಸೂರು) ಹುಬ್ಬಳ್ಳಿ–ಧಾರವಾಡ (ಹೆಸ್ಕಾಂ) ಕಲಬುರಗಿ (ಜೆಸ್ಕಾಂ) ಪ್ರಸರಣ ಕಂಪನಿ ವ್ಯಾಪ್ತಿಯಲ್ಲಿ ಬರುವ ಗ್ರಾಹಕರಿಗೆ ಇದರ ಲಾಭ ಇರುವುದಿಲ್ಲ. ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿ ಯುನಿಟ್‌ಗೆ ಒಂದು ರೂ.ನಿಂದ ಎರಡು ರೂ ವರೆಗೆ ದರ ಇಳಿಕೆ ಮಾಡುವ ನಿರ್ಧಾರವನ್ನು ಹಿಂದೆ ಸಚಿವರು ತೆಗೆದುಕೊಂಡಿದ್ದರು. ಹೊಸ ವರ್ಷಕ್ಕೆ ಉಡುಗೊರೆಯಾಗಿ ತಮ್ಮ ಇಳಿಕೆಯ ನಿರ್ಧಾರವನ್ನು ಪ್ರಕಟಿಸಬೇಕೆಂಬ ತೀರ್ಮಾನ ಕೈಗೊಂಡಿದ್ದರು. ಆದರೆ ಸದ್ಯಕ್ಕೆ ಈ ಎರಡೂ ಕಂಪನಿಗಳ ವಿದ್ಯುತ್ ▶ 9ನೇ ಪುಟಕ್ಕೆ

ಜ.15, ಮಡಿಕೇರಿಯಲ್ಲಿ 'ಯೋಗಥಾನ್'

ಅಗತ್ಯ ಸಿದ್ಧತೆಗೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಸೂಚನೆ

ಮಡಿಕೇರಿ, ಡಿ.30– ಜಿಲ್ಲೆಯಲ್ಲಿ ಜ.15 ರಂದು ಯೋಗಥಾನ್ ಆಯೋಜಿಸಲಾಗಿದ್ದು, ಈ ಸಂಬಂಧ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಪೂರ್ವಭಾವಿ ಸಭೆ ನಡೆಯಿತು.

ತಮ್ಮ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ ದಲ್ಲಿ ಯೋಗಥಾನ್ ಆಯೋಜಿಸಲು ನಿರ್ಧರಿಸಲಾಯಿತು. ಯೋಗಥಾನ್ ಏರ್ಪಡಿಸುವ ಸಂಬಂಧ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿಗೆ ಅವರು ಸೂಚಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜಿಲ್ಲಾ ಆಯುಷ್ ಇಲಾಖೆ ಅಧಿಕಾರಿಗಳು ಯೋಗಥಾನ್ ಕಾರ್ಯಕ್ರಮ ಯಶಸ್ಸಿಗೆ ಶ್ರಮಿಸಬೇಕು. ಜೊತೆಗೆ ಸಾರ್ವಜನಿಕ ಶಿಕ್ಷಣ, ಪದವಿ ಪೂರ್ವ ಶಿಕ್ಷಣ, ಕಾಲೇಜು ಶಿಕ್ಷಣ, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಸಿಸಿ, ಎನ್‌ಎಸ್‌ಎಸ್ ಹೀಗೆ ಹಲವರನ್ನು ಒಳಗೊಂಡು ಯೋಗಥಾನ್ ಕಾರ್ಯಕ್ರಮ ಯಶಸ್ಸಿಗೆ ಅಗತ್ಯ ತಯಾರಿ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಅವರು ನಿರ್ದೇಶನ ನೀಡಿದರು.

ಯೋಗಥಾನ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರು ಹೆಸರು ನೋಂದಾಯಿಸಬೇಕು. ಯೋಗಥಾನ್‌ನಲ್ಲಿ ಪಾಲ್ಗೊಳ್ಳುವವರು ಕಾರ್ಪೆಟ್/ ಮ್ಯಾಟ್ ತರುವುದು, ಪಾಲ್ಗೊಳ್ಳುವವರಿಗೆ ವಾಹನ ಸೌಲಭ್ಯ ಕಲ್ಪಿಸಬೇಕಿದೆ. ಆ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿ ಅವರು ಸೂಚಿಸಿದರು.

ನಿವೇಶನಕ್ಕಾಗಿ ಆಗ್ರಹಿಸಿ ಬೃಹತ್ ಪ್ರತಿಭಟನೆ

ಮೊಳಗಿದ ಘೋಷಣೆ, ಮೆರವಣಿಗೆ, ಅಲ್ಲಲ್ಲಿ ರಸ್ತೆ ತಡೆ, ಆಕ್ರೋಶ



ಮಡಿಕೇರಿ, ಡಿ.30– ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಮಿಕರಾಗಿ ತೋಟಗಳ ಲೈನ್‌ಮನೆಗಳಲ್ಲಿ ಸಂಕಷ್ಟದ ಬದುಕು ಕಟ್ಟಿಕೊಂಡಿರುವ 10 ಸಾವಿರಕ್ಕೂ ಹೆಚ್ಚಿನ ಮೋಗೇರ ಸಮಾಜದ ಕುಟುಂಬಗಳಿಗೆ 'ಸೂರು' ಕಲ್ಪಿಸುವಂತೆ ಆಗ್ರಹಿಸಿ ನಗರದಲ್ಲಿ ಮೋಗೇರ ಸೇವಾ ಸಮಾಜ ಮತ್ತು ಮುದ್ದ ಕಳಲ ಯುವಕ ಸಂಘದಿಂದ ಬೃಹತ್ ಪ್ರತಿಭಟನೆ ನಡೆಯಿತು.

ನಗರದ ಫೀ.ಮಾ.ಕೆ.ಎಂ. ಕಾರ್ಯಪ್ಪ ವೃತ್ತದ ಬಳಿಯಿಂದ ಜಿಲ್ಲಾ ಮೋಗೇರ ಸೇವಾ ಸಮಾಜದ ಅಧ್ಯಕ್ಷ ಗೌತಮ್ ಶಿವಪ್ಪ ಅವರ ನೇತೃತ್ವದಲ್ಲಿ, ರಾಜ್ಯ, ಜಿಲ್ಲಾ ಮತ್ತು ತಾಲೂಕು ಸಮಿತಿಯ ಪ್ರಮುಖರ ಮುಂದಾಳತ್ವದಲ್ಲಿ ಜಿಲ್ಲೆಯ ವಿವಿಧೆಡೆಗಳಿಂದ ಆಗಮಿಸಿದ್ದ ಮೋಗೇರ ಸಮಾಜದ ನೂರಾರು ಮಂದಿ ಘೋಷಣೆಗಳನ್ನು ಕೂಗುತ್ತಾ ಗಾಂಧಿ ಮೈದಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ನಗರದ ಜನರಲ್ ತಿಮ್ಮಯ್ಯ ವೃತ್ತದ ಬಳಿ ಕೆಲಕಾಲ ರಸ್ತೆ ತಡೆ ನಡೆಸಿದ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಚುನಾವಣೆ ಸಂದರ್ಭ ವಿವಿಧ ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದ ಜನಪ್ರತಿನಿಧಿಗಳು ತಮ್ಮ ಬೇಡಿಕೆಗಳನ್ನು ಈಡೇರಿಸದೇ ಅಧಿಕಾರದಿಂದ ನಿರ್ಗಮಿಸುತ್ತಿದ್ದಾರೆ. ಶೋಷಿತ ಮೋಗೇರ ಸಮಾಜದ ನೆರವಿಗೆ ಸರ್ಕಾರಗಳು ಬರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರಲ್ಲದೇ, ಉಳ್ಳವರ ಪರ ಮಾತ್ರವೇ ಸರ್ಕಾರಗಳು ನಿಯಮಗಳನ್ನು ರೂಪಿಸುತ್ತಿವೆ ಎಂದು ಆರೋಪಿಸಿದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಮೋಗೇರ ಸೇವಾ ಸಮಾಜದ ಅಧ್ಯಕ್ಷ ಗೌತಮ್ ಶಿವಪ್ಪ, ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಮಿಕರಾಗಿ ದುಡಿಯುತ್ತಿರುವ ಮೋಗೇರ ಸಮಾಜದ ಕುಟುಂಬಗಳಿಗೆ ಸೂಕ್ತ ನಿವೇಶನ, ಮನೆಯನ್ನು ಕಲ್ಪಿಸುವಂತೆ 2 ತಿಂಗಳ ಹಿಂದೆಯೇ ಸರ್ಕಾರಕ್ಕೆ ಮತ್ತು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿತ್ತು. ಹೀಗಿದ್ದೂ ಇಲ್ಲಿಯವರೆಗೂ ಮೋಗೇರ ಸಮಾಜದ ಮೂಲಭೂತ ಸಮಸ್ಯೆಗೆ ಸೂಕ್ತ ಸ್ಪಂದನೆ ದೊರಕದ ಹಿನ್ನೆಲೆ ಪ್ರತಿಭಟನೆಗೆ ಇಳಿದಿರುವುದಾಗಿ ತಿಳಿಸಿದರು.

ಜಾಗ ಗುರ್ತಿಸಿ ವಿರೋಧ: ಜಿಲ್ಲಾ ವ್ಯಾಪ್ತಿಯಲ್ಲಿ ಸಾಕಷ್ಟು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ತೋಟಗಳನ್ನಾಗಿ ಪರಿವರ್ತಿಸಲಾಗಿದೆ. ಇಂತಹ ಜಾಗವನ್ನು ಆಯಾ ಬೆಳೆಗಾರರಿಗೆ ಗುತ್ತಿಗೆ ಆಧಾರದಲ್ಲಿ ನೀಡಲು ಸರ್ಕಾರ ನಿರ್ಧರಿಸಿರುವುದನ್ನು ತೀವ್ರವಾಗಿ ವಿರೋಧಿಸುತ್ತೇವೆ. ಯಾವೆಲ್ಲ ಒತ್ತುವರಿ ಜಾಗಗಳಿವೆ. ಅವುಗಳನ್ನು ತೆರವುಗೊಳಿಸಿ ನಿವೇಶನ ರಹಿತರಿಗೆ ಒದಗಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಚುನಾವಣೆ ಬಹಿಷ್ಕಾರ: ನಮ್ಮ ಈ ಹೋರಾಟವನ್ನು ಪರಿಗಣಿಸಿ, ಜಿಲ್ಲಾಡಳಿತ ಮತ್ತು ಸರ್ಕಾರ ನಿವೇಶನ ರಹಿತ ಮೋಗೇರ ಸಮಾಜದ ಕುಟುಂಬಗಳಿಗೆ ಸೂರು ಒದಗಿಸಬೇಕು. ಇಲ್ಲವಾದಲ್ಲಿ ಮುಂಬರುವ ಚುನಾವಣೆಯನ್ನು

ಬೇಡಿಕೆ ಈಡೇರಿಸದಿದ್ದರೆ ಚುನಾವಣಾ ಬಹಿಷ್ಕಾರದ ಎಚ್ಚರಿಕೆ

ಮೋಗೇರ ಸಮಾಜ ಬಹಿಷ್ಕರಿಸಲಿದೆ ಎಂದು ಗೌತಮ್ ಶಿವಪ್ಪ ಸ್ಪಷ್ಟಪಡಿಸಿದರು.

ಸಮಾವೇಶ: ಪ್ರತಿಭಟನಾ ಮೆರವಣಿಗೆ ಬಳಿಕ ನಗರದ ಗಾಂಧಿ ಮೈದಾನದಲ್ಲಿ ಮೋಗೇರ ಸಮಾಜದಿಂದ ಬಹಿರಂಗ ಸಮಾವೇಶ ನಡೆದು, ನಿವೇಶನ ರಹಿತರಿಗೆ ಸೂರು ಒದಗಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತವನ್ನು ಆಗ್ರಹಿಸಿ ನಿರ್ಣಯವನ್ನು ಅಂಗೀಕರಿಸಿತು. ರಾಜಾಸೀಟ್ ರಸ್ತೆಯಲ್ಲೂ ಕೆಲಕಾಲ ಧರಣಿ ನಡೆಸಿದ ಪ್ರತಿಭಟನಾಕಾರರು ಸ್ಥಳಕ್ಕೆ ಜಿಲ್ಲಾಧಿಕಾರಿ ಆಗಮಿಸಿ ಸಮಸ್ಯೆ ಆಲಿಸಬೇಕೆಂದು ಪಟ್ಟು ಹಿಡಿದ ಘಟನೆಯೂ ನಡೆಯಿತು.

ಈ ಸಂದರ್ಭದಲ್ಲಿ ಪೊಲೀಸರು ಮಧ್ಯ ಪ್ರವೇಶಿಸಿ ಧರಣಿ ಕೈಬಿಡುವಂತೆ ಮನವಿ ಮಾಡಿದರೂ ಪ್ರತಿಭಟನಾಕಾರರು ಲೆಕ್ಕಿಸಲಿಲ್ಲ. ಕೆಲ ಹೊತ್ತಿನ ನಂತರ ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿಗಳಿಗೆ ಮೋಗೇರ ಸಮಾಜದ ಪ್ರಮುಖರು ತಮ್ಮ ಬೇಡಿಕೆಗಳನ್ನು ವಿವರಿಸಿ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಮೋಗೇರ ಸಮಾಜದ ರಾಜ್ಯ ಗೌರವಾಧ್ಯಕ್ಷ ಸುಂದರ ಮೇರ, ಗೌರವ ಸಲಹೆಗಾರ ಸೀತಾರಾಮ ಕೊಂಚಾಡಿ, ರಾಜ್ಯ ಸಂಚಾಲಕ ನಂದರಾಜ್ ಸಂಕೇಶ್, ಮುದ್ದ ಕಳಲ ಯುವಕ ಸಂಘದ ಜ್ಯೋತಿ ಕುಮಾರ್, ಕೊಡಗು ಜಿಲ್ಲಾ ಮೋಗೇರ ಸೇವಾ ಸಮಾಜದ ಮಾಜಿ ಅಧ್ಯಕ್ಷ ಹಾಗೂ ಜಿ.ಪಂ. ಮಾಜಿ ಅಧ್ಯಕ್ಷ ಬಿ.ಶಿವಪ್ಪ, ಜಿಲ್ಲಾ ಮೋಗೇರ ಸೇವಾ ಸಮಾಜದ ಮಾಜಿ ಅಧ್ಯಕ್ಷ ಪಿ.ಎಂ.ರವಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸುರೇಶ್, ಮಡಿಕೇರಿ ತಾಲೂಕು ಅಧ್ಯಕ್ಷ ಪಿ.ಕೆ.ದಿನೇಶ್, ವಿರಾಜಪೇಟೆ ತಾಲೂಕು ಅಧ್ಯಕ್ಷ ರಾಮು, ಸೋಮವಾರಪೇಟೆ ತಾಲೂಕು ಅಧ್ಯಕ್ಷ ಎ.ದಿನೇಶ್, ಸುಳ್ಯ ತಾಲೂಕು ಅಧ್ಯಕ್ಷ ಕರುಣಾಕರ ಪಳ್ಳತಡ್ಕ, ಸುಳ್ಯ ತಾಲೂಕು ಸಂಚಾಲಕ ಅಚ್ಚುತ ಮಲ್ಲಿಕಾ, ರಾಜ್ಯ ಅಂಬೇಡ್ಕರ್ ತತ್ವ ರಕ್ಷಣಾ ವೇದಿಕೆ ಅಧ್ಯಕ್ಷ ಸುಂದರ ಪಾಟಾಜೆ, ರಾಜ್ಯ ದಲಿತ ಸಂಘರ್ಷ ಸಮಿತಿ ಸಂಚಾಲಕ ವಿಶ್ವನಾಥ ಅಲೆಕ್ಕಾಡಿ, ದಕ್ಷಿಣ ಕನ್ನಡ ಮೋಗೇರ ಸಂಘದ ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ್ ಕನ್ಯಾಡಿ, ಖಜಾಂಚಿ ಚಿತ್ತರಂಜನ್ ದಾಸ್ ಮೊದಲಾದವರು ಪಾಲ್ಗೊಂಡಿದ್ದರು.

ನಾಳೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ಮಡಿಕೇರಿ, ಡಿ.30– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 'ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ'ಯು ಜ.1 ರಂದು ಬೆಳಿಗ್ಗೆ 11 ಗಂಟೆಗೆ ನಗರದ ವೆಂಕಟೇಶ್ವರ ದೇವಾಲಯ ಬಳಿಯ ಭಾರತೀಯ ವಿದ್ಯಾಭವನದಲ್ಲಿ ನಡೆಯಲಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಮತ್ತು ಸಕಾಲ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್, ಕೆ.ಜಿ.ಬೋಪಯ್ಯ, ಎಂ.ಪಿ.ಸುಜಾಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಆಯನೂರು ಮಂಜುನಾಥ್, ಸಂಸದ ಪ್ರತಾಪ್ ಸಿಂಹ ಅವರುಗಳು ಭಾಗವಹಿಸುವರು.

ಡಾ.ಎಂ.ಎ.ಕಾರ್ಯಪ್ಪ ಸಾರ್ವಜನಿಕರಿಗೆ ಲಭ್ಯ

ಮಡಿಕೇರಿ, ಡಿ.30– ಅಮೇರಿಕಾದಲ್ಲಿ ವೈದ್ಯಕೀಯ ವೃತ್ತಿಯಲ್ಲಿರುವ ಹೆಸರಾಂತ ತಜ್ಞ ವೈದ್ಯ ಡಾ.ಎಂ.ಎ. ಕಾರ್ಯಪ್ಪ ಅವರು ಜ.2 ರಂದು ಬೆಳಿಗ್ಗೆ 9.30 ಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸೋಮವಾರಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಲಭ್ಯವಿರಲಿದ್ದಾರೆ.

ಜ.4 ರಂದು ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮಡಿಕೇರಿ ನಗರದ ಜಿಲ್ಲಾಸ್ಪತ್ರೆಯಲ್ಲಿ ಲಭ್ಯವಿದ್ದು, ಕಿಡ್ನಿಗೆ ಸಂಬಂಧಿಸಿದಂತೆ ಆರೋಗ್ಯ ತಪಾಸಣೆ ಮಾಡಲಿದ್ದಾರೆ. ತಪಾಸಣೆಗೆ ಒಳಪಡುವವರು ಈ ಹಿಂದೆ ಆರೋಗ್ಯ ತಪಾಸಣೆ ಮಾಡಿಸಿಕೊಂಡಿರುವ ದಾಖಲೆಗಳನ್ನು ತರುವಂತೆ ಪ್ರಕಟಣೆಯಲ್ಲಿ ಕೋರಿದೆ.

ಮನೆ ಮುಂದೆ ನಿಲ್ಲಿಸಿದ್ದ ಆಟೋಗೆ ಬೆಂಕಿ

ಬೆಂಕಿ ಹಚ್ಚುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆ



ಮಡಿಕೇರಿ, ಡಿ.30– ಮನೆಯ ಮುಂಭಾಗ ನಿಲ್ಲಿಸಿದ್ದ ಆಟೋರಿಕ್ಷಾಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ ಘಟನೆ ಗುರುವಾರ ತಡರಾತ್ರಿ ನಗರದ ರಾಣಿಪೇಟೆ ಯಲ್ಲಿ ನಡೆದಿದೆ. ನಿವಾಸಿ ಅಬುತಾಹೀರ್ ಎಂಬವರಿಗೆ ಸೇರಿದ ಆಟೋರಿಕ್ಷಾ ಬೆಂಕಿಯಿಂದ ಸುಟ್ಟು ಕರಕಲಾಗಿದೆ.

ಆಟೋ ರಿಕ್ಷಾ ಒಂದರಲ್ಲಿ ಬಂದ ಕಿಡಿಗೇಡಿಗಳು ಅಬುತಾಹೀರ್ ಅವರ ಆಟೋಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗುತ್ತಿರುವ ದೃಶ್ಯ ಅಲ್ಲಿದ್ದ ಸಿ.ಸಿ. ಕ್ಯಾಮರಾದಲ್ಲಿ ದಾಖಲಾಗಿದೆ. ಕ್ಷುಲ್ಲಕ ವಿಚಾರಕ್ಕೆ ಆಟೋಗೆ ಬೆಂಕಿ ಹಚ್ಚಿರುವ ಬಗ್ಗೆ ಅನುಮಾನ ವ್ಯಕ್ತವಾಗಿದ್ದು, ಈ ಕುರಿತು ಅಬುತಾಹೀರ್ ಅವರು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ನಗರ ಪೊಲೀಸರು, ಸಿ.ಸಿ. ಕ್ಯಾಮರಾ ದೃಶ್ಯಗಳನ್ನು ಪರಿಶೀಲಿಸಿ, ಆರೋಪಿಗಳ ಬಂಧನಕ್ಕಾಗಿ ತನಿಖೆ ಚುರುಕುಗೊಳಿಸಿದ್ದಾರೆ.

ಅಮುಲ್–ನಂದಿನಿ ಒಗ್ಗೂಡಿದರೆ ಅಧಿಕ ಹಾಲು, ಹಾಲಿನ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡಬಹುದು

● ಕೇಂದ್ರ ಸಹಕಾರಿ ಸಚಿವರೂ ಆದ ಗೃಹ ಸಚಿವ ಅಮಿತ್ ಷಾ ಸಲಹೆ ● ಈ ಎರಡೂ ಬೃಹತ್ ಸಂಸ್ಥೆಗಳು ಒಗ್ಗೂಡಿದರೆ 2 ಲಕ್ಷ ಸಣ್ಣ ಡೈರಿಗಳ ಸ್ಥಾಪನೆಯಾಗುತ್ತದೆ ● ಮಂಡ್ಯದ ಗೆಜ್ಜಲಗೆರೆಯಲ್ಲಿ ಮೆಗಾ ಡೈರಿಗೆ ಅಮಿತ್ ಷಾ ಚಾಲನೆ



ಮಂಡ್ಯ, ಡಿ. 30– ಗುಜರಾತ್‌ನ ಅಮುಲ್ ಮತ್ತು ಕರ್ನಾಟಕದ ನಂದಿನಿ ಒಟ್ಟುಗೂಡಿ ಕೆಲಸ ಮಾಡಿದರೆ ವಿದೇಶಗಳಿಗೆ ಹೆಚ್ಚು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ರಫ್ತು ಮಾಡಬಹುದು ಎಂದು ಕೇಂದ್ರ ಸಹಕಾರ ಸಚಿವರೂ ಆದ ಕೇಂದ್ರ ಗೃಹ ಸಚಿವ ಅಮಿತ್ ಷಾ ಅಭಿಪ್ರಾಯಪಟ್ಟರು.

ಜಿಲ್ಲೆಯ ಗೆಜ್ಜಲಗೆರೆ ಮನ್‌ಮುಲ್ ಒಕ್ಕೂಟದ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಮೆಗಾ ಡೈರಿ ಉದ್ಘಾಟಿಸಿ ಮಾತನಾಡಿದ ಅವರು, ಅಮುಲ್ ಮತ್ತು ನಂದಿನಿ ಒಟ್ಟಿಗೆ ಸೇರಿ ಕೆಲಸ ಮಾಡಿದರೆ ಅದಕ್ಕೆ ಅವಶ್ಯವಿರುವ ಎಲ್ಲಾ ರೀತಿಯ ಪ್ರೋತ್ಸಾಹವನ್ನು ಕೇಂದ್ರ ಸಹಕಾರ ಇಲಾಖೆ ನೀಡಲಿದೆ ಎಂದು ಘೋಷಿಸಿದರು. ಈ ಎರಡೂ ಒಕ್ಕೂಟಗಳು ಸೇರಿದಾಗ ಗ್ರಾಮೀಣ ಪ್ರದೇಶದಲ್ಲಿ 2 ಲಕ್ಷ ಸಣ್ಣ ಪ್ರಮಾಣದ ಡೈರಿಗಳನ್ನು ಸ್ಥಾಪನೆ ಮಾಡುವ ಮೂಲಕ ಹೆಚ್ಚು ಹಾಲು ಹಾಗೂ ಹಾಲಿನ ಉತ್ಪನ್ನಗಳ ಉತ್ಪಾದನೆ ಮಾಡಬಹುದು ಎಂದರು.

ಕ್ಷೀರ ಭಾಗ್ಯ ಯೋಜನೆಯಡಿ 52 ಲಕ್ಷ ಲೀಟರ್ ಹಾಲನ್ನು ಅಂಗನವಾಡಿ ಕೇಂದ್ರಗಳಿಗೆ ನೀಡುವ ಜೊತೆಗೆ ರೈತರಿಗೆ ನೇರವಾಗಿ ಹಣ ಸಂದಾಯ ಮಾಡುತ್ತಿರುವ ಬೊಮ್ಮಾಯಿ ಸರ್ಕಾರಕ್ಕೂ, ಮನ್‌ಮುಲ್ ಅಧ್ಯಕ್ಷ ರಾಮಚಂದ್ರು ಅವರಿಗೂ ಅಭಿನಂದನೆ ಸಲ್ಲಿಸುವುದಾಗಿ ಹೇಳಿದ ಅವರು, ಸಹಕಾರಿ ಕ್ಷೇತ್ರದಲ್ಲಿ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ. ಈ ಇಲಾಖೆ ಮೂಲಕ ರೈತರಿಗೆ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತರಲು ಸರ್ಕಾರ ಕಟಿಬದ್ಧವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

260 ಕೋಟಿ ರೂ. ವೆಚ್ಚದ ಮೆಗಾ ಡೈರಿ ಉದ್ಘಾಟನೆಯಿಂದ ಮಿಲ್ಕ್ ಪ್ಲಾಂಟ್ ನಿರ್ಮಾಣಗೊಂಡಿದ್ದು, ಪ್ರತಿದಿನ 10 ಲಕ್ಷ ಲೀಟರ್ ಸಂಸ್ಕರಣೆಯಾಗುತ್ತಿದ್ದು, ಮುಂದಿನ ದಿನಗಳಲ್ಲಿ 14 ಲಕ್ಷ ಲೀಟರ್ ಹಾಲು ಸಂಸ್ಕರಣೆಗೆ ಒತ್ತು ನೀಡಲಾಗುವುದು. ಹೈನುಗಾರಿಕೆ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿ ಸ್ಥಾನದಲ್ಲಿದ್ದು, ಹೆಚ್ಚು ರೈತರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. 26 ಲಕ್ಷ ರೈತರಿಗೆ ಬ್ಯಾಂಕ್ ಮೂಲಕ ನೇರವಾಗಿ 28 ಕೋಟಿ ರೂ. ಜಮೆಯಾಗುತ್ತಿದೆ ಎಂದರು. 1975ರಿಂದ ಇಲ್ಲಿಯವರೆಗೂ ಕರ್ನಾಟಕ ಡೈರಿ ಉತ್ತಮ ಪ್ರಗತಿ ಸಾಧಿಸಿದ್ದು, 4 ಕೋಟಿ ರೂ. ವಹಿವಾಟು ನಡೆಸುತ್ತಿದ್ದ ಹಾಲು ಒಕ್ಕೂಟ ಇದೀಗ 25 ಕೋಟಿ ರೂ. ವಹಿವಾಟು ನಡೆಸುತ್ತಿದೆ ಎಂದು ಅಮಿತ್ ಷಾ ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ರಾಜ್ಯವು ಕ್ಷೀರ ಕ್ರಾಂತಿಗೆ ತನ್ನದೇ ಆದ ಕೊಡುಗೆ ನೀಡಿದ್ದು, ಕೃಷಿಯಲ್ಲಿ ಹೈನುಗಾರಿಕೆ ಉದ್ಯಮವಾಗಿ ಮಾರ್ಪಟ್ಟಿದ್ದರಿಂದ ರೈತರು ಸ್ವಾವಲಂಬಿ ಬದುಕನ್ನು ಕಂಡುಕೊಳ್ಳಲು ಸಹಕಾರಿಯಾಗಿದೆ ಎಂದರು. ಮದ್ದೂರು ತಾಲೂಕು ಹೈನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಾ ಬಂದಿದ್ದು, ಬಿಜೆಪಿ ಸರ್ಕಾರ ಸಹಕಾರ ಕ್ಷೇತ್ರದಲ್ಲಿ ಮೈಲಿಗಲ್ಲು ಸಾಧಿಸಲು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕೊಡುಗೆಯೂ ಬಹಳಷ್ಟಿದೆ ಎಂದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಮಾತನಾಡಿ, ಸಹಕಾರ ಇಲಾಖೆಯಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಅಮಿತ್ ಶಾ ಗಮನಹರಿಸುತ್ತಿದ್ದಾರೆ. ಈ ವಿಷಯದಲ್ಲಿ ಯಾವುದೇ ರಾಜಕೀಯವಿಲ್ಲ ಎಂದರಲ್ಲದೇ, ತಾವು ಪ್ರಧಾನಿಯಾಗಿದ್ದಾಗ 12 ಸೊಸೈಟಿಗಳು ಮಾತ್ರವಿದ್ದು, ಹೆಚ್.ಡಿ. ರೇವಣ್ಣ ಹಲವಾರು ಯೋಜನೆಗಳನ್ನು ಜಾರಿಗೊಳಿಸಿ ಸಹಕಾರ ಸಂಘಗಳ ಅಭಿವೃದ್ಧಿಗೆ ಉತ್ತೇಜನ ನೀಡಿದರು ಎಂದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದ ಶ್ರೀಗಳು ಆಶೀರ್ವಚನ ನೀಡಿ, ದೇಶದಲ್ಲಿ ಶೇ. 65ರಷ್ಟು ಜನರು ವ್ಯವಸಾಯ ಮಾಡುತ್ತಿದ್ದು, ರೈತರ ಬದುಕು ಹಸನಾಗಲು ಸರ್ಕಾರಗಳು ಶ್ರಮಿಸುತ್ತಿವೆ. ನಮ್ಮ ದೇಶದ ಜಿಡಿಪಿಗೆ ಶೇ. 25ರಷ್ಟು ಕೊಡುಗೆ ಕೃಷಿಯಿಂದಲೇ ಸಿಗುತ್ತಿದ್ದು, ಸರ್ಕಾರ ರೈತರಿಗೆ ಅನುಕೂಲವಾಗುವಂತಹ ಮತ್ತಷ್ಟು ಯೋಜನೆಗಳನ್ನು ಜಾರಿಗೆ ತರಬೇಕು ಎಂದು ಹೇಳಿದರು.

ವೇದಿಕೆಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಶಾಸಕರಾದ ಡಿ.ಸಿ. ತಮ್ಮಣ್ಣ, ಸಿ.ಎಸ್. ಪುಟ್ಟರಾಜು, ಸುರೇಶ್‌ಗೌಡ, ಡಾ. ಕೆ. ಅನ್ನದಾನಿ, ಮಧು ಜಿ. ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ಕೆ.ಟಿ. ಶ್ರೀಕಂಠೇಗೌಡ, ಎನ್. ಅಪ್ಪಾಜಿಗೌಡ, ಮನ್‌ಮುಲ್ ಅಧ್ಯಕ್ಷ ರಾಮಚಂದ್ರು, ಉಪಾಧ್ಯಕ್ಷ ರಘುನಂದನ್, ನಿರ್ದೇಶಕರಾದ ಎಸ್.ಪಿ. ಸ್ವಾಮಿ, ರೂಪಾ, ಹೆಚ್.ಟಿ. ಮಂಜು, ಶಿವಕುಮಾರ್, ರವಿ, ನಲಿಗೆರೆ ಬಾಲು, ವ್ಯವಸ್ಥಾಪಕ ನಿರ್ದೇಶಕ ಮಂಜೇಶ್ ಇತರರಿದ್ದರು.

ಟನ್ ಕಬ್ಬಿಗೆ ನೂರು ರೂ. ಬೆಂಬಲ ಬೆಲೆ ಹೆಚ್ಚಳ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ

ಮಂಡ್ಯ, ಡಿ.30– ಕಬ್ಬಿಗೆ ಬೆಂಬಲ ಬೆಲೆ ಹೆಚ್ಚಿಸುವಂತೆ ಮಂಡ್ಯದಲ್ಲಿ ರೈತರು ನಡೆಸುತ್ತಿದ್ದ ಪ್ರತಿಭಟನೆಗೆ ಯಶಸ್ಸು ದೊರಕಿದ್ದು, ಟನ್ ಕಬ್ಬಿಗೆ ನೂರು ರೂ. ಬೆಂಬಲ ಬೆಲೆ ಹೆಚ್ಚಳ ಮಾಡಿರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ನಗರದ ಮಂಡ್ಯ ವಿಶ್ವವಿದ್ಯಾನಿಲಯ (ಬಾಯ್ಸ್ ಕಾಲೇಜು)ದ ಆವರಣದಲ್ಲಿ ಶುಕ್ರವಾರ ಬಿಜೆಪಿ ವತಿಯಿಂದ ಆಯೋಜಿಸಿದ್ದ ಬೃಹತ್ ಜನಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು, ಡಬ್ಬಲ್ ಇಂಜಿನ್ ಸರ್ಕಾರ ರೈತರ ಪರವಿದ್ದು, ಆತಂಕ ಪಡುವ ಅವಶ್ಯಕತೆ ಇಲ್ಲ. ಕಬ್ಬಿಗೆ ನೀವು ಕೇಳಿದ್ದ ಬೆಂಬಲ ಬೆಲೆ ಹೆಚ್ಚಳ ಮಾಡಿದ್ದೇನೆ ಎಂದು ಆದೇಶ ಪ್ರತಿ ಪ್ರದರ್ಶಿಸಿದರು.

ಮಂಡ್ಯ ಭಾಗಕ್ಕೆ ನೀರಾವರಿ ಕಾಯಕಲ್ಪ ನೀಡಲು ಶೀಘ್ರ ಸಭೆ ಆಯೋಜಿಸಲಾಗಿದೆ. ಜೆಡಿಎಸ್ ಹಾಗೂ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನನೆಗುದಿಗೆ ಬಿದ್ದಿದ್ದ ಮೈಷುಗರ್ ಸಕ್ಕರೆ ಕಾರ್ಖಾನೆ ಪುನರಾರಂಭ ಮಾಡಿದ್ದು ಬಿಜೆಪಿ ಸರ್ಕಾರ. ಮುಂದಿನ ವರ್ಷದಿಂದ ಎಥನಾಲ್ ಘಟಕ ತೆರೆಯಲಾಗುವುದು. ಈ ಭಾಗದ ಜನರ ಅನುಕೂಲಕ್ಕಾಗಿ ಮೈಸೂರು–ಬೆಂಗಳೂರು ನಡುವೆ ಹೈಸ್ಪೀಡ್ ರೈಲು, ಡಬ್ಬಲ್ ಹಳಿ ರೈಲ್ವೆ ಟ್ರಾಕ್, ಸುಸಜ್ಜಿತ ಬೆಂಗಳೂರು–ಮೈಸೂರು ರಸ್ತೆ ನಿರ್ಮಿಸಿದ್ದು, ನಮ್ಮ ಡಬ್ಬಲ್ ಇಂಜಿನ್ ಸರ್ಕಾರ ಎಂದರು.

ಸಿದ್ದರಾಮಯ್ಯ ಮತ್ತೊಮ್ಮೆ ಮುಖ್ಯಮಂತ್ರಿಯಾಗಲು ಕಾಂಗ್ರೆಸ್‌ಗೆ ಮತ ಕೊಡಿ ಎನ್ನುತ್ತಾರೆ. ಸಿದ್ದರಾಮಯ್ಯ ಒಮ್ಮೆ ಮುಖ್ಯಮಂತ್ರಿ ಆಗಿಲ್ಲವೇ? ಮತ್ತೆ ಏಕೆ ಅಧಿಕಾರದ ವ್ಯಾಮೋಹ ಎಂದು ಪ್ರಶ್ನಿಸಿದ ಅವರು, ಅನೇಕ ಭಾಗ್ಯಗಳ ಹೆಸರಲ್ಲಿ ರಾಜ್ಯಕ್ಕೆ ದೌರ್ಭಾಗ್ಯ ನೀಡಿದ್ದಾರೆ. ಅನಿಷ್ಟ ಹಾಗೂ ದರಿದ್ರ ಕಾಂಗ್ರೆಸ್ ಪಕ್ಷಕ್ಕೆ ಎಂದೂ ಸಹ ಮತ ಹಾಕಬೇಡಿ ಎಂದು ಮನವಿ ಮಾಡಿದರು.

ಕಾಂಗ್ರೆಸ್ ಹಾಗೂ ಜೆಡಿಎಸ್‌ನದ್ದು ಬ್ಲಾಕ್ ಅಂಡ್ ವೈಟ್ ಸಿನಿಮಾವಾಗಿದ್ದು, ಈ ಭಾಗದ ಜನರಿಂದ ಮತ ಹಾಕಿಸಿ ಕೊಂಡಿವೆ. ಆದರೆ, ಕೊಡುಗೆ ಮಾತ್ರ ಶೂನ್ಯ. ಈ ಭಾಗದಲ್ಲಿ ಬಿಜೆಪಿಗೆ ಜನ ಶಕ್ತಿ ನೀಡದೇ ಇದ್ದರೂ ನನ್ನ ತವರು ಜಿಲ್ಲೆ ಎಂದು ಮಂಡ್ಯ ಜಿಲ್ಲೆಗೆ ಭರಪೂರ ಕೊಡುಗೆ ಕೊಟ್ಟಿದ್ದು, ಈ ಜಿಲ್ಲೆಯ ಮಣ್ಣಿನ ಮಗ ಬಿ.ಎಸ್. ಯಡಿಯೂರಪ್ಪ ಅವರು. ರಾಜ್ಯವನ್ನು ಬಿಜೆಪಿ ಸರ್ಕಾರ ಸುವರ್ಣ ಕರ್ನಾಟಕ ಮಾಡಲು ಮುಂದಾಗಿದ್ದು, ನಿಮ್ಮ ಆಶೋತ್ತರ ಈಡೇರಿಸಲು ಜಾತಿ, ಧರ್ಮ ಮೀರಿ ಅಭಿವೃದ್ಧಿಗೆ ಬಿಜೆಪಿ ಬದ್ಧವಾಗಿದೆ ಎಂದರು.

ಉನ್ನತ ಶಿಕ್ಷಣ ಸಚಿವ ಅಶ್ವತ್ ನಾರಾಯಣ್ ಮಾತನಾಡಿ, ಮಂಡ್ಯ ಎಂದರೆ ಇಂಡಿಯಾ ಎಂದರ್ಥ. ಗಂಡು ಮೆಟ್ಟಿದ ನಾಡು ಮಂಡ್ಯ ಪ್ರಗತಿಗೆ ಹೆಸರುವಾಸಿ ಜಿಲ್ಲೆ. ಸ್ವಾತಂತ್ರ್ಯ ಪೂರ್ವದಿಂದಲೂ ಶಿಕ್ಷಣ, ನೀರಾವರಿ, ಕೈಗಾರಿಕಾ ವ್ಯವಸ್ಥೆಯನ್ನು ಮೈಸೂರು ಒಡೆಯರು ಮಾಡಿದ್ದರು. ಯಡಿಯೂರಪ್ಪರಂತಹ ಮಣ್ಣಿನ ಮಗನನ್ನು ರಾಜ್ಯಕ್ಕೆ ಕೊಟ್ಟ ಕೊಡುಗೆ ಜಿಲ್ಲೆಗೆ ಸಿಗಬೇಕು. ಅನ್ಯರಿಗೆ ಅವಕಾಶ ಕೊಟ್ಟಿದ್ದಕ್ಕೆ ಮಂಡ್ಯದಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಹಿನ್ನಡೆಯಾಗಿದೆ. ಅಭಿವೃದ್ಧಿ ಮಾಡದೇ ಈ ಭಾಗದ ಜನರಿಗೆ ದ್ರೋಹ ಎಸಗಿದ ಜೆಡಿಎಸ್ ಪಕ್ಷವನ್ನು ಇಲ್ಲಿನ ಜನ ಕಿತ್ತೊಗೆಯಬೇಕೆಂದು ಮನವಿ ಮಾಡಿದರು.

ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಮಂಡ್ಯದಲ್ಲಿ ಬಿಜೆಪಿ ಗೆಲ್ಲಲ್ಲ ಎನ್ನುತ್ತಿದ್ದರು. ಆದರೆ ಯಡಿಯೂರಪ್ಪನವರ ಆಶೀರ್ವಾದದಿಂದ ನಾನು ವಿಜಯಶಾಲಿಯಾಗಿದ್ದು, ಮಂಡ್ಯಕ್ಕೆ ಅಮಿತ್ ಶಾ ಬಂದಿರುವುದೇ ದೊಡ್ಡ ಭಾಗ್ಯ. ಈ ಬಾರಿ 4–5 ಸ್ಥಾನ ಗೆದ್ದು, ಜೆಡಿಎಸ್ ಭದ್ರಕೋಟೆಯನ್ನು ನುಚ್ಚುನೂರು ಮಾಡುತ್ತೇವೆ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಮಾತನಾಡಿ, ಜೆಡಿಎಸ್‌ನಿಂದ ರಾಜ್ಯ ಹಾಗೂ ಜಿಲ್ಲೆಗೆ ಒಳ್ಳೆಯದಾಗಿಲ್ಲ. ಜೆಡಿಎಸ್ ನಂಬಿ ಮಂಡ್ಯ ಜಿಲ್ಲೆ ಹಾಳಾಗಿದೆ. ಈ ಬಾರಿ ಬಿಜೆಪಿ ಬೆಂಬಲಿಸಿ ಎಂದು ಮನವಿ ಮಾಡಿದರು.

ಟಿಪ್ಪುಕೊಂದ ಹುರಿಗೌಡ, ದೊಡ್ಡ ನಂಜೇಗೌಡರ ಪ್ರತಿಮೆ ನಿರ್ಮಾಣ

ಮಂಡ್ಯ, ಡಿ.30– ಮಂಡ್ಯ ಜನರಲ್ಲಿ ಟಿಪ್ಪು ಸುಲ್ತಾನ್ ರಕ್ತ ಹರಿಯುತ್ತಿಲ್ಲ. ಇಲ್ಲಿನ ಜನರಲ್ಲಿ ಹರಿಯುತ್ತಿರುವುದು ಟಿಪ್ಪು ಸುಲ್ತಾನ್ ಹತ್ಯೆಗೈದ ಹುರಿಗೌಡ ಹಾಗೂ ದೊಡ್ಡ ನಂಜೇಗೌಡರ ರಕ್ತ. ಹೀಗಾಗಿ ಟಿಪ್ಪು ಕೊಂದ ಹುರಿಗೌಡ ಹಾಗೂ ದೊಡ್ಡ ನಂಜೇಗೌಡರ ಪ್ರತಿಮೆ ಶ್ರೀರಂಗಪಟ್ಟಣದಲ್ಲಿ ನಿರ್ಮಾಣವಾಗಬೇಕೆಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.



ಟಿಪ್ಪು ಕನ್ನಡಿಗನಲ್ಲ. ಆತ ಪರ್ಷಿಯನ್. ಕನ್ನಡಿಗರ ವಿರೋಧಿ. ಮೈಸೂರಿನ ನಜರ್‌ಬಾದ್ ಸೃಷ್ಟಿಕರ್ತ ಟಿಪ್ಪು. ಹಾಸನವನ್ನು ಕೈಮಾಬಾದ್, ಮಡಿಕೇರಿಯನ್ನು ಮಂಡಿಬಾದ್ ಮಾಡಲು ಹೊರಟಿದ್ದ ಟಿಪ್ಪು ನಮಗೆ ಆದರ್ಶವಲ್ಲ ಎಂದರು.

ಈ ಬಾರಿಯ ಚುನಾವಣೆ ಮೂಡಲಬಾಗಿಲು ಹನುಮಪ್ಪ ಹಾಗೂ ಮುಲ್ಲಾ ಸಾಬ್ ನಡುವೆ ನಡೆಯುವ ಚುನಾವಣೆಯಾಗಿದ್ದು, ಮೂಡಲಬಾಗಿಲು ಹನುಮಪ್ಪನಿಗೆ ನ್ಯಾಯ ಸಿಗಬೇಕೆಂದರೆ ಬಿಜೆಪಿ ಗೆಲ್ಲಿಸಿ ಎಂದು ಹೇಳಿದರು.

ಶಾರ್ಟ್ ಸರ್ಕ್ಯೂಟ್‌ನಿಂದ ಕಬ್ಬಿನ ಗದ್ದೆ ಭಸ್ಮ

ಚಾಮರಾಜನಗರ, ಡಿ.30– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಕಟಾವಿಗೆ ಬಂದಿದ್ದ ಕಬ್ಬಿನ ಫಸಲಿಗೆ ಬೆಂಕಿ ತಗುಲಿ ಸುಟ್ಟು ಭಸ್ಮವಾಗಿರುವ ಘಟನೆ ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ರೈತ ಗಣೇಶ್ ಅವರ ಎರಡು ಎಕರೆ ಸೇರಿದಂತೆ ಇತರೆ ರೈತರ ಸುಮಾರು 8–10 ಎಕರೆ ಜಮೀನಿನಲ್ಲಿ ಬೆಳೆದಿದ್ದ ಕಬ್ಬಿನ ಫಸಲು ಬೆಂಕಿಯ ಕೆನ್ನಾಲಿಗೆಗೆ ತುತ್ತಾಗಿದೆ. ಜಮೀನಿನ ಮೇಲೆ ಹಾದು ಹೋಗಿರುವ ವಿದ್ಯುತ್ ತಂತಿ ತುಂಡಾಗಿ ಬಿದ್ದು ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಕಟಾವಿಗೆ ಬಂದಿದ್ದ ಕಬ್ಬು ಸುಟ್ಟು ಹೋಗಿದೆ. ಕೂಡಲೇ ರೈತರು ಬೆಂಕಿಯನ್ನು ನಂದಿಸಲು ಪ್ರಯತ್ನಿಸಿ ದರೂ ಯಾವುದೇ ಪ್ರಯೋಜನವಾಗಿಲ್ಲ. ಜೋತು ಬಿದ್ದ ವಿದ್ಯುತ್ ತಂತಿಗಳಿಂದ ಆಗಾಗ್ಗೆ ಈ ರೀತಿಯ ಘಟನೆಗಳು ಸಂಭವಿಸಿ ಫಸಲು ನಾಶವಾಗುತ್ತಿದ್ದು ವಿದ್ಯುತ್ ತಂತಿಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಸೆಸ್ಕ್ ಇಲಾಖೆಯ ಅಧಿಕಾರಿಗಳು ಮುಂದಾಗದಿರುವುದು ವಿಪರ್ಯಾಸ. ಸುಟ್ಟು ಹೋಗಿರುವ ಕಬ್ಬಿಗೆ ಸೆಸ್ಕ್ ಇಲಾಖೆ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ: ಅಪರಾಧಿಗೆ 20 ವರ್ಷ ಶಿಕ್ಷೆ

ಚಾಮರಾಜನಗರ, ಡಿ.30– ಎಂಟು ವರ್ಷದ ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಅಪರಾಧಿಗೆ ಮಕ್ಕಳ ಸ್ನೇಹಿ ಹಾಗೂ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಪೋಕ್ಸೋ ಕಾಯ್ದೆಯಡಿ 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಿ ಶುಕ್ರವಾರ ತೀರ್ಪು ನೀಡಿದೆ.

ಜಿಲ್ಲೆಯ ಯಳಂದೂರು ಪಟ್ಟಣದ ಮಹೇಶ (28) ಶಿಕ್ಷೆಗೆ ಗುರಿಯಾದ ಅಪರಾಧಿ. ಈತ 2019ರ ಸೆ.30ರಂದು ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಯಳಂದೂರು ಪಟ್ಟಣ ಠಾಣೆಯ ಅಂದಿನ ಸರ್ಕಲ್ ಇನ್‌ಸ್ಪೆಕ್ಟರ್ ಎ.ಕೆ. ರಾಜೇಶ್ ಅವರು ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಪೋಕ್ಸೋ ಕಾಯ್ದೆಯಡಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆದು ಆರೋಪಿ ಮಹೇಶ ಕೃತ್ಯ ಎಸಗಿರುವುದು ಸಾಬೀತಾದ ಹಿನ್ನೆಲೆಯಲ್ಲಿ ನಗರದ ಮಕ್ಕಳ ಸ್ನೇಹಿ ನ್ಯಾಯಾಲಯ ಹಾಗೂ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ನಿಶಾರಾಣಿ ಅವರು ಅಪರಾಧಿಗೆ 20 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದ್ದಾರೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ 4 ಲಕ್ಷ ರೂ.ಗಳನ್ನು ನೊಂದ ಬಾಲಕಿಗೆ ಪರಿಹಾರ ರೂಪದಲ್ಲಿ 30 ದಿನಗಳೊಳಗೆ ನೀಡಬೇಕು ಎಂದು ತೀರ್ಪು ನೀಡಿದ್ದಾರೆ. ವಿಶೇಷ ಸರ್ಕಾರಿ ಅಭಿಯೋಜಕ ಕೆ. ಯೋಗೇಶ್ ಅವರು ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು.

ಚಿರತೆ ದಾಳಿಗೆ ಕರು ಬಲಿ

ಚಾಮರಾಜನಗರ, ಡಿ.30– ಚಿರತೆಯೊಂದು ದಾಳಿ ನಡೆಸಿದ ಪರಿಣಾಮ ಕರುವೊಂದು ಬಲಿಯಾಗಿರುವ ಘಟನೆ ತಾಲೂಕಿನ ಕಿಲಗೆರೆ ಗ್ರಾಮದಲ್ಲಿ ಗುರುವಾರ ತಡರಾತ್ರಿ ನಡೆದಿದೆ.

ಗ್ರಾಮದ ಪ್ರಜ್ವಲ್ ಎಂಬ ರೈತನಿಗೆ ಸೇರಿದ್ದ ಕರು ಇದಾಗಿದೆ. ಕಿಲಗೆರೆ ಗೇಟ್ ಹಾಗೂ ಮಾದಲವಾಡಿ ಮಾರ್ಗದ ಮಧ್ಯೆದಲ್ಲಿರುವ ಜಮೀನಿನಲ್ಲಿ ಕರುವನ್ನು ಕಟ್ಟಿ ಹಾಕಿದ್ದ ವೇಳೆ ಚಿರತೆ ಏಕಾಏಕಿ ದಾಳಿ ನಡೆಸಿ ಕೊಂದು ಹಾಕಿದೆ.

ಇತ್ತೀಚೆಗೆ ಇದೇ ಗ್ರಾಮದಲ್ಲಿ ಚಿರತೆ ದಾಳಿಗೆ ಒಂದು ಕರು ಬಲಿಯಾಗಿತ್ತು. ಇದು ಎರಡನೇ ಕರುವಾಗಿದೆ. ಇನ್ನೂ ಘಟನೆಯಿಂದ ರೈತ ನಷ್ಟದ ಸುಳಿಗೆ ಸಿಲುಕುವಂತಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಈ ಕೂಡಲೇ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ದೊರಕಿಸಿಕೊಡುವುದರ ಜೊತೆಗೆ ಬೋನ್ ಇರಿಸಿ ಚಿರತೆ ಸೆರೆ ಹಿಡಿಯುವಂತೆ ರೈತರು ಒತ್ತಾಯಿಸಿದ್ದಾರೆ.

ಲಾರಿ ಡಿಕ್ಕಿ: ಅಪರಿಚಿತ ಸಾವು

ಗುಂಡ್ಲುಪೇಟೆ, ಡಿ.30– ಪಟ್ಟಣದ ಊಟಿ ರಸ್ತೆಯಲ್ಲಿರುವ ತಿರುಮಲ ಇಂಡಸ್ಟ್ರೀಸ್ ಬಳಿ ಅಪರಿಚಿತ ವ್ಯಕ್ತಿಯೊಬ್ಬರು ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ.

ಅಪರಿಚಿತ ಲಾರಿ ಡಿಕ್ಕಿ ಹೊಡೆದ ಪರಿಣಾಮ ಆ ವ್ಯಕ್ತಿ ಮೃತಪಟ್ಟಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸುಮಾರು 35ವರ್ಷದ ಈತನ ಗುರುತು ಪತ್ತೆಗಾಗಿ ಪಟ್ಟಣ ಪೊಲೀಸ್ ಠಾಣೆ ಅಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಬಲ ತೋಳಿನಲ್ಲಿ ಹಸಿರು ಹಚ್ಚೆ ಮತ್ತು ಸಣ್ಣ ಹುಲ್ಲುಹುರಿ ಇರುತ್ತದೆ. ಎತ್ತರ ಸುಮಾರು 5.5 ಅಡಿಯಷ್ಟಿದೆ. ಈ ಅಪರಿಚಿತ ಗಂಡಸಿನ ಬಗ್ಗೆ ಮಾಹಿತಿ ದೊರೆತಲ್ಲಿ ಪಟ್ಟಣಠಾಣೆ ಸಂಖ್ಯೆ 9480804651 ಅಥವಾ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಮ್ ನಂ 08226–222383ನ್ನು ಸಂಪರ್ಕಿಸಬಹುದೆಂದು ಪೊಲೀಸ್ ಇನ್ಸ್‌ಪೆಕ್ಟರ್ ಮುದ್ದುರಾಜ್ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ರಾತ್ರಿ 1 ಗಂಟೆವರೆಗೆ ಹೊಸ ವರ್ಷ ಆಚರಣೆ

ಜನಸಂದಣಿ ಪ್ರದೇಶದಲ್ಲಿ ಮಾಸ್ಕ್ ಕಡ್ಡಾಯ, ಥರ್ಮಲ್ ಸ್ಕ್ಯಾನಿಂಗ್ ಅಗತ್ಯ



ಫೈಲ್ ಚಿತ್ರ

ಚಾಮರಾಜನಗರ, ಡಿ.30– ಕೋವಿಡ್–19 ರ 4ನೇ ಅಲೆಯನ್ನು ನಿಯಂತ್ರಿಸುವ ಸಂಬಂಧ ಜಿಲ್ಲೆಯಾದ್ಯಂತ ಸಾರ್ವಜನಿಕರು ಹಾಗೂ ಕಾರ್ಯಕ್ರಮಗಳ ಆಯೋಜಕರು ಹೊಸ ವರ್ಷಾಚರಣೆಯ ಮುನ್ನಾ ದಿನ, ಹೊಸ ವರ್ಷದ ಆಚರಣೆ ಹಾಗೂ ಇತರ ಆಚರಣೆಗಳ ಸಂದರ್ಭಗಳಲ್ಲಿ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಸೂಚಿಸಿ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಆದೇಶ ಹೊರಡಿಸಿದ್ದಾರೆ.

ಆರೋಗ್ಯದ ಹಿತದೃಷ್ಟಿಯಿಂದ ಕೋವಿಡ್–19ರ ವೈರಸ್ ಹರಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರ ಈ ಆದೇಶ ಹೊರಡಿಸಲಾಗಿದೆ.

ಹೊಸ ವರ್ಷದ ಮುನ್ನಾ ದಿನ ಹಾಗೂ ಹೊಸ ವರ್ಷಕ್ಕೆ ಸಂಬಂಧಪಟ್ಟಂತೆ ಎಲ್ಲಾ ಆಚರಣೆಗಳನ್ನು ಡಿ.31ರಂದು ಹಾಗೂ ಜ.1ರಂದು ರಾತ್ರಿ 1 ಗಂಟೆಯ ಒಳಗೆ ಪೂರ್ಣಗೊಳಿಸಬೇಕು. ಹೊಸ ವರ್ಷಾಚರಣೆಗಾಗಿ ಹೆಚ್ಚಿನ ಸಂಖ್ಯೆಯ ಸಾರ್ವಜನಿಕರು ಒಂದೆಡೆ ಸೇರುವ ಸಂದರ್ಭದಲ್ಲಿ, ಅಂತಹ ಕಾರ್ಯಕ್ರಮಗಳನ್ನು ಹಗಲು ಹೊತ್ತಿನಲ್ಲಿ ಹೊರಾಂಗಣ ಪ್ರದೇಶಗಳಲ್ಲಿ ಆಯೋಜಿಸಬೇಕು. ಇದರಿಂದ ಆರೋಗ್ಯದ ಮೇಲೆ ಬೆಳಗಿನ ಹಾಗೂ ಸಂಜೆಯ ಚಳಿ ಹಾಗೂ ಶೀತ ಗಾಳಿಯ ಪರಿಣಾಮವನ್ನು ತಡೆಗಟ್ಟಬಹುದು.

ಹೊಟೇಲ್, ಪಬ್, ರೆಸ್ಟೋರೆಂಟ್‌ಗಳು, ಕ್ಲಬ್, ರೆಸಾರ್ಟ್, ಇತ್ಯಾದಿ ಒಳಾಂಗಣಗಳಲ್ಲಿ ವಿಶೇಷವಾಗಿ ಕುಳಿತುಕೊಳ್ಳುವ ವ್ಯವಸ್ಥೆಯಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚಿನ ಸಾರ್ವಜನಿಕರಿಗೆ ಅವಕಾಶ ಕಲ್ಪಿಸುವಂತಿಲ್ಲ. ವೃದ್ಧರು (60 ವರ್ಷ ಮೇಲ್ಪಟ್ಟವರು) ಹಾಗೂ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರು ಇಂತಹ ಆಚರಣೆಗಳಿಂದ ದೂರವಿರುವುದು ಉತ್ತಮ. ಕಾರ್ಯಕ್ರಮಗಳ ಆಯೋಜಕರು, ನಿರ್ವಹಣೆ ಮಾಡುವವರು ಹಾಗೂ ಸೇವಾ ಸಿಬ್ಬಂದಿ ಕೋವಿಡ್–19 ಲಸಿಕೆಯ ಬೂಸ್ಟರ್ ಡೋಸ್ ಲಸಿಕೆಯನ್ನು ಪಡೆದಿರಬೇಕು. ಆದಾಗ್ಯೂ, ಲಸಿಕೆಯ 2 ಡೋಸ್‌ಗಳನ್ನು ಪಡೆದಿರುವುದು ಅಗತ್ಯವಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಜನದಟ್ಟಣೆಯನ್ನು ನಿಯಂತ್ರಿಸಲು ಪ್ರವೇಶ ದ್ವಾರಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಒಳಾಂಗಣ ಪ್ರದೇಶಗಳಲ್ಲಿನ ಆಚರಣೆಯಲ್ಲಿ ಭಾಗವಹಿಸುವ ಎಲ್ಲರೂ ಎಲ್ಲಾ ಸಂದರ್ಭಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಮಾಸ್ಕ್ ಧರಿಸದವರಿಗೆ ಪ್ರವೇಶವಿಲ್ಲ ಎಂಬ ಬೋರ್ಡ್‌ಗಳನ್ನು ಎಲ್ಲಾ ಸ್ಥಳಗಳಲ್ಲಿ ಕಾಣುವಂತೆ ಪ್ರದರ್ಶಿಸಬೇಕು. ಪ್ರತಿಯೊಬ್ಬರೂ ಥರ್ಮಲ್ ಸ್ಕ್ಯಾನಿಂಗ್‌ಗೆ ಒಳಪಡಬೇಕು. ಜ್ವರ ಹಾಗೂ ಉಸಿರಾಟದ ಸಮಸ್ಯೆ, ಕೆಮ್ಮು, ಶೀತ, ಮೂಗು ಸೋರುವಿಕೆ ಇತ್ಯಾದಿ ಲಕ್ಷಣಗಳನ್ನು ಹೊಂದಿದವರನ್ನು ತಕ್ಷಣವೇ ವೈದ್ಯರ ಸಲಹೆಯನ್ನು ಪಡೆಯಲು ಶಿಫಾರಸ್ಸು ಮಾಡುವುದು ಅಗತ್ಯವಾಗಿದೆ. ಒಳಾಂಗಣ ಆಚರಣೆಯ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ಹ್ಯಾಂಡ್ ಸ್ಯಾನಿಟೈಸರ್ ವ್ಯವಸ್ಥೆ ಮಾಡಬೇಕು.


ಹೆಚ್ಚಿನ ಸಂಖ್ಯೆಯ ಸಾರ್ವಜನಿಕರು ಒಂದೆಡೆ ಸೇರುವ ಸಂದರ್ಭಗಳಲ್ಲಿ, ಸೋಂಕಿನ ಲಕ್ಷಣಗಳನ್ನು ಹೊಂದಿರುವವರನ್ನು ಕಾರ್ಯಕ್ರಮದ ಸ್ಥಳದಿಂದ, ತಕ್ಷಣವೇ ಗುರುತಿಸಲಾದ ಹತ್ತಿರದ ಆಸ್ಪತ್ರೆಗೆ ಸಾಗಿಸಲು ಆಂಬ್ಯುಲೆನ್ಸ್ ಸೇವೆಯ ಲಭ್ಯತೆಯನ್ನು ಆಯೋಜಕರು ಖಚಿತಪಡಿಸಿಕೊಳ್ಳಬೇಕು.

ಸಿನಿಮಾ ಹಾಲ್, ಥಿಯೇಟರ್‌ಗಳಿಗೆ ತೆರಳುವವರು ಕಡ್ಡಾಯವಾಗಿ ಎನ್–95 ಮಾಸ್ಕ್ ಧರಿಸಬೇಕು, ಪ್ರವೇಶದ್ವಾರದಲ್ಲಿರುವ ಸಿಬ್ಬಂದಿ ಇದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಯವರು ಆದೇಶದಲ್ಲಿ ತಿಳಿಸಿದ್ದಾರೆ.

ಇಂದು ಹನೂರಿನಲ್ಲಿ ಯುವ ಸೌರಭ ಕಾರ್ಯಕ್ರಮ

ಚಾಮರಾಜನಗರ, ಡಿ.30– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹನೂರಿನ ಸರ್ಕಾರಿ ಜಿ.ವಿ. ಗೌಡ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ಯುವ ಸೌರಭ ಕಾರ್ಯಕ್ರಮವನ್ನು ಡಿ.31ರಂದು ಬೆಳಿಗ್ಗೆ 10.30 ಗಂಟೆಗೆ ಹನೂರಿನ ಸರ್ಕಾರಿ ಜಿವಿ ಗೌಡ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಲಾಗಿದೆ. ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕರಾದ ಆರ್. ನರೇಂದ್ರ ಅವರು ಅಧ್ಯಕ್ಷತೆ ವಹಿಸುವರು.

ಮಂಚೇಗೌಡ ನಿಧನ



ಚಾಮರಾಜನಗರ, ಡಿ.30– ಹಿರಿಯ ರಾಜಕಾರಣಿ, ಉದ್ಯಮಿ ಚಾಮರಾಜನಗರ ತಾಲೂಕಿನ ಕುರುಬರಹುಂಡಿ ಗ್ರಾಮದ ನಿವಾಸಿ ಮಂಚೇಗೌಡರು (82) ಅವರು ಶುಕ್ರವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಇಬ್ಬರು ಪುತ್ರರಾದ ಮಂಜು ಹಾಗೂ ನಾಗೇಶ್ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ 1 ಗಂಟೆಗೆ ಅವರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.


ರಾಜಕೀಯ ಮಹತ್ವಾಕಾಂಕ್ಷೆವುಳ್ಳ ಯುವ ನಾಯಕ

ಆರ್.ಸೋಮಸುಂದರ್

ಎಲೆಮರೆ ಕಾಯಂತೆ ಸೇವಾ ನಿರತ ಸಾಮಾಜಿಕ ಕಳಕಳಿವುಳ್ಳ ನಾಯಕನಿಗೆ ಸೂಕ್ತ ಸ್ಥಾನ ಬೇಕಿದೆ...



ಈ ಹಿಂದೆ ಕೆಪಿಸಿಸಿ ಅಧ್ಯಕ್ಷರಾಗಿದ್ದ ಹಾಲಿ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಕೃಪಾಕಟಾಕ್ಷದಿಂದ ಸೋಮಸುಂದರ್ 2007ರಲ್ಲಿ ಮೈಸೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ 42ನೇ ವಾರ್ಡ್‌ನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆಲ್ಲುವ ಮೂಲಕ ವಾರ್ಡ್‌ನ ಜನತೆಯ ನಿರೀಕ್ಷೆ ಮೀರಿ ಕೆಲಸ ನಿರ್ವಹಿಸಿದ್ದರು. ತಮ್ಮ ವಾರ್ಡ್ ವ್ಯಾಪ್ತಿಯ ಪ್ರತಿ ಮತದಾರರ ಹೆಸರಿಡಿದು ಮಾತನಾಡಿಸುವ ಮಟ್ಟಕ್ಕೆ ಜನರೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದ ಸೋಮಸುಂದರ್ ಪ್ರತಿನಿತ್ಯ ವಾರ್ಡ್‌ನಲ್ಲಿ ಸಂಚರಿಸಿ ಜನರ ಸಮಸ್ಯೆಗಳನ್ನು ಆಲಿಸಿ ಅದಕ್ಕೆ ಸೂಕ್ತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದರು. ಮೈಸೂರು ಮಹಾನಗರ ಪಾಲಿಕೆಯ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರಾಗಿ, ಪಾಲಿಕೆಯ ಆಡಳಿತ ಪಕ್ಷದ ನಾಯಕರಾಗಿಯೂ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದರು.













ಮೈಸೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯರಾದ ಆರ್. ಸೋಮಸುಂದರ್ ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದು, ತಮ್ಮ ಸರಳ ಸಜ್ಜನಿಕೆಯ ವ್ಯಕ್ತಿತ್ವದಿಂದಾಗಿ ಎಲ್ಲಾ ವರ್ಗದವರ ಕಣ್ಮಣಿಯಾಗಿದ್ದಾರೆ. ಬಡವರು, ನಿರ್ಗತಿಕರಿಗೆ ನೆರವಾಗುವ ಸಲುವಾಗಿ ತಮ್ಮ ತಂದೆಯ ಹೆಸರಿನಲ್ಲಿ ದಶಕದ ಹಿಂದೆಯೇ ರಾಮರಾಜ್ ಫೌಂಡೇಷನ್ ಸೇವಾ ಸಂಸ್ಥೆಯನ್ನು ಸ್ಥಾಪಿಸಿ, ಈ ಸಂಸ್ಥೆಯ ಮೂಲಕ ದೀನ ದಲಿತರು ಹಾಗೂ ಬಡವರಿಗೆ ಸಹಾಯಹಸ್ತ ನೀಡುತ್ತಾ ಬಂದಿದ್ದಾರೆ. ಇವರ ತಾತ ಮುದ್ದುರಾಮಯ್ಯ ಅವರು ಅಂದಿನ ಕಾಲದಲ್ಲೇ ಜನಪರ ಕಾರ್ಯ ಹಾಗೂ ಚಿಂತನೆ ಮೂಲಕ ಹೆಸರುವಾಸಿಯಾಗಿದ್ದರು. ಈ ಹಿಂದೆ ಕಂದಾಯ ಸಚಿವರಾಗಿದ್ದ ದಿವಂಗತ ಹೆಚ್.ಸಿ.ಶ್ರೀಕಂಠಯ್ಯನವರ ಒಡನಾಟವನ್ನು ಹೊಂದಿದ್ದರು. ತಮ್ಮ ಮೊಮ್ಮಗ ಆರ್. ಸೋಮಸುಂದರ್ ಅವರಿಗೆ ಸರ್ಕಾರಿ ಕೆಲಸ ಕೊಡಿಸುವಂತೆ ಶ್ರೀಕಂಠಯ್ಯನವರ ಬಳಿ ಸೋಮಸುಂದರ್ ಅವರನ್ನು ತಾತ ಮುದ್ದುರಾಮಯ್ಯ ಕರೆದುಕೊಂಡು ಹೋದಾಗ ಉತ್ಸಾಹಿ ಯುವಕ ಸೋಮಸುಂದರ್ ಅವರನ್ನು ಕಂಡ ಶ್ರೀಕಂಠಯ್ಯನವರು, ಈ ಹುಡುಗ ಸರ್ಕಾರಿ ಅಧಿಕಾರಿಯಾಗುವ ಬದಲು ರಾಜಕಾರಣಕ್ಕೆ ಬಂದರೆ ಉತ್ತಮ ಭವಿಷ್ಯವಿರುತ್ತದೆ ಎಂದು ಹೇಳಿದರಲ್ಲದೆ, ಯುವ ಕಾಂಗ್ರೆಸ್‌ನಲ್ಲಿ ಹುದ್ದೆಯೊಂದನ್ನು ಕಲ್ಪಿಸುವ ಮೂಲಕ ಯುವಕ ಸೋಮಸುಂದರ್ ಅವರನ್ನು ರಾಜಕೀಯ ಅಂಗಳಕ್ಕೆ ಕರೆತಂದರು.



ಪದವೀಧರರಾದ ಸೋಮಸುಂದರ್ ತಮ್ಮ ಕಾಲೇಜು ದಿನಗಳಲ್ಲೇ ಸಾಮಾಜಿಕ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಪ್ರಗತಿಪರ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದರು. ವಿದ್ಯಾರ್ಥಿ ಕಾಂಗ್ರೆಸ್‌ನಲ್ಲಿ ಜವಾಬ್ದಾರಿಯುತ ಕೆಲಸ ನಿರ್ವಹಿಸುವ ಮೂಲಕ ಭವಿಷ್ಯದ ನಾಯಕರಾಗಿ ಗುರುತಿಸಿಕೊಂಡಿದ್ದರು. ಇವರ ಸಂಘಟನಾ ಚತುರತೆಯನ್ನು ಗಮನಿಸಿದ ಪಕ್ಷದ ವರಿಷ್ಠರು ಇವರಿಗೆ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರು. ಅನಿರೀಕ್ಷಿತವಾಗಿ ಲಭ್ಯವಾದ ಹುದ್ದೆಯನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ವರಿಷ್ಠರ ಗಮನ ಸೆಳೆದಿದ್ದರು. ಈ ಹಿಂದೆ ಕೆಪಿಸಿಸಿ ಅಧ್ಯಕ್ಷರಾಗಿದ್ದ ಹಾಲಿ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರ ಕೃಪಾಕಟಾಕ್ಷದಿಂದ ಸೋಮಸುಂದರ್ 2007ರಲ್ಲಿ ಮೈಸೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ 42ನೇ ವಾರ್ಡ್‌ನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಗೆಲ್ಲುವ ಮೂಲಕ ವಾರ್ಡ್‌ನ ಜನತೆಯ ನಿರೀಕ್ಷೆ ಮೀರಿ ಕೆಲಸ ನಿರ್ವಹಿಸಿದ್ದರು.



ತಮ್ಮ ವಾರ್ಡ್ ವ್ಯಾಪ್ತಿಯ ಪ್ರತಿ ಮತದಾರರ ಹೆಸರಿಡಿದು ಮಾತನಾಡಿಸುವ ಮಟ್ಟಕ್ಕೆ ಜನರೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದ ಸೋಮಸುಂದರ್ ಪ್ರತಿನಿತ್ಯ ವಾರ್ಡ್‌ನಲ್ಲಿ ಸಂಚರಿಸಿ ಜನರ ಸಮಸ್ಯೆಗಳನ್ನು ಆಲಿಸಿ ಅದಕ್ಕೆ ಸೂಕ್ತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದರು. ಮೈಸೂರು ಮಹಾನಗರ ಪಾಲಿಕೆಯ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರಾಗಿ, ಪಾಲಿಕೆಯ ಆಡಳಿತ ಪಕ್ಷದ ನಾಯಕರಾಗಿಯೂ ಉತ್ತಮವಾಗಿ ಕಾರ್ಯ ನಿರ್ವಹಿಸಿದ್ದರು.

ವಿಧಾನಪರಿಷತ್ ಮಾಜಿ ಸದಸ್ಯ ದಿವಂಗತ ಎನ್. ಮಂಜುನಾಥ್ ಮತ್ತು ಹಾಲಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ಅವರೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದ ಸೋಮಸುಂದರ್ ಅವರು ಅವರ ಮಾರ್ಗದರ್ಶನದಲ್ಲಿ ಜನಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ತಮ್ಮ ತಂದೆಯ ಹೆಸರಿನ ರಾಮರಾಜ್ ಫೌಂಡೇಷನ್ ಸೇವಾ ಸಂಸ್ಥೆ ಮೂಲಕ ಸಮಾಜದ ದುರ್ಬಲ ವರ್ಗದ ಜನರಿಗೆ ಕೈಲಾದ ಆರ್ಥಿಕ ಸಹಾಯ, ಅನಾರೋಗ್ಯಕ್ಕೆ ತುತ್ತಾದವರಿಗೆ ಉಚಿತ ಚಿಕಿತ್ಸೆ, ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಅಸಂಘಟಿತ ವಲಯದ ಕಾರ್ಮಿಕರಿಗೆ ನೆರವಿನ ಸಹಾಯ ಹಸ್ತ ನೀಡುತ್ತಾ ಬಂದಿದ್ದಾರೆ. ಜಾತಿ, ಮತ, ಧರ್ಮ ಭೇದವಿಲ್ಲದೆ ಮಾನವೀಯ ಮೌಲ್ಯವನ್ನು ಗುರಿಯಾಗಿಸಿಕೊಂಡು ಅವಿರತವಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಮೈಸೂರು ನಗರ ಮಾತ್ರವಲ್ಲದೆ, ನಂಜನಗೂಡಿನಲ್ಲೂ ತಮ್ಮ ಸೇವಾ ಕಾರ್ಯವನ್ನು ವಿಸ್ತರಿಸಿದ ಅವರು, ಅಲ್ಲಿನ ನೂರಾರು ಆಟೋ ಚಾಲಕರಿಗೆ ಚಾಲನಾ ಪರವಾನಗಿ ಕೊಡಿಸುವಲ್ಲಿ ನೆರವಾಗುವುದರ ಜೊತೆಗೆ ಸಮವಸ್ತ್ರ ವಿತರಣೆ ಹಾಗೂ ಆರೋಗ್ಯ ವಿಮಾ ಸೌಲಭ್ಯವನ್ನು ಕಲ್ಪಿಸಿದ್ದಾರೆ. ಕಿಡ್ನಿ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಉಚಿತವಾಗಿ ಡಯಾಲಿಸಿಸ್ ಚಿಕಿತ್ಸೆ ಕೊಡಿಸಿದ್ದಾರೆ. ಪರಿಸರ ಸಂರಕ್ಷಣೆಗೆ ಪೂರಕ ಚಟುವಟಿಕೆಗಳಿಗೆ ಬೆಂಬಲವಾಗಿ ಗಿಡ ನೆಡುವ ಕಾರ್ಯಕ್ರಮಗಳನ್ನು ರಾಮರಾಜ್ ಫೌಂಡೇಷನ್ ಮೂಲಕ ಆಯೋಜಿಸುತ್ತಾ ಬಂದಿದ್ದಾರೆ.

ಕೊರೊನಾ ಸಾಂಕ್ರಾಮಿಕ ಸಂದರ್ಭದಲ್ಲಿ ಮೈಸೂರು ನಗರ ಹಾಗೂ ನಂಜನಗೂಡಿನಲ್ಲಿ ಆಹಾರ ಕಿಟ್ ವಿತರಣೆ ಹಾಗೂ ಅಗತ್ಯವಿರುವವರಿಗೆ ವೈದ್ಯಕೀಯ ನೆರವು ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಅಧಿಕಾರ ಇರಲಿ, ಇಲ್ಲದಿರಲಿ ಜನಸೇವೆಯನ್ನು ಮುಂದುವರೆಸಿಕೊಂಡು ಬರುತ್ತಿರುವ ಇವರು ತಮ್ಮ ರಿಯಲ್ ಎಸ್ಟೇಟ್ ಉದ್ಯಮದಿಂದ ಬರುವ ಲಾಭಾಂಶದಲ್ಲಿ ಒಂದು ಭಾಗವನ್ನು ಸಾಮಾಜಿಕ ಕಾರ್ಯಗಳಿಗೆ ಮೀಸಲಿಡುವ ಮೂಲಕ ಬಡವರ್ಗದವರನ್ನು ಗುರುತಿಸಿ ನೆರವಿನ ಹಸ್ತ ಚಾಚಿದ್ದಾರೆ. ತಮ್ಮ ರಾಜಕೀಯ ಬೆಳವಣಿಗೆಗೆ ಮಾರ್ಗದರ್ಶಕರಾಗಿದ್ದ ದಿವಂಗತ ಹೆಚ್.ಸಿ.ಶ್ರೀಕಂಠಯ್ಯ, ದಿವಂಗತ ಎನ್.ಮಂಜುನಾಥ್ ಈಗಲೂ ಮಾರ್ಗದರ್ಶಕರಾಗಿರುವ ಅಡಗೂರು ಹೆಚ್. ವಿಶ್ವನಾಥ್, ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೃತಜ್ಞತಾ ಭಾವದಿಂದ ಆರ್.ಸೋಮಸುಂದರ್ ಕಾಣುತ್ತಿದ್ದಾರೆ.

ಕೊರೊನಾ ಸಾಂಕ್ರಾಮಿಕ ಸಂದರ್ಭದಲ್ಲಿ ಮೈಸೂರು ನಗರ ಹಾಗೂ ನಂಜನಗೂಡಿನಲ್ಲಿ ಆಹಾರ ಕಿಟ್ ವಿತರಣೆ ಹಾಗೂ ಅಗತ್ಯವಿರುವವರಿಗೆ ವೈದ್ಯಕೀಯ ನೆರವು ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಅಧಿಕಾರ ಇರಲಿ, ಇಲ್ಲದಿರಲಿ ಜನಸೇವೆಯನ್ನು ಮುಂದುವರೆಸಿಕೊಂಡು ಬರುತ್ತಿರುವ ಇವರು ತಮ್ಮ ರಿಯಲ್ ಎಸ್ಟೇಟ್ ಉದ್ಯಮದಿಂದ ಬರುವ ಲಾಭಾಂಶದಲ್ಲಿ ಒಂದು ಭಾಗವನ್ನು ಸಾಮಾಜಿಕ ಕಾರ್ಯಗಳಿಗೆ ಮೀಸಲಿಡುವ ಮೂಲಕ ಬಡವರ್ಗದವರನ್ನು ಗುರುತಿಸಿ ನೆರವಿನ ಹಸ್ತ ಚಾಚಿದ್ದಾರೆ. ತಮ್ಮ ರಾಜಕೀಯ ಬೆಳವಣಿಗೆಗೆ ಮಾರ್ಗದರ್ಶಕರಾಗಿದ್ದ ದಿವಂಗತ ಹೆಚ್.ಸಿ. ಶ್ರೀಕಂಠಯ್ಯ, ದಿವಂಗತ ಎನ್. ಮಂಜುನಾಥ್ ಈಗಲೂ ಮಾರ್ಗದರ್ಶಕರಾಗಿರುವ ಅಡಗೂರು ಹೆಚ್. ವಿಶ್ವನಾಥ್, ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೃತಜ್ಞತಾ ಭಾವದಿಂದ ಆರ್.ಸೋಮಸುಂದರ್ ಕಾಣುತ್ತಿದ್ದಾರೆ.



ನಾಲ್ವಡಿ ನೀಡಿದ ಕೊಡುಗೆಯನ್ನು ಯಾವ ಪಕ್ಷದ ನಾಯಕರೂ ನೀಡಿಲ್ಲ

ಮಾಜಿ ಶಾಸಕ ಮಾರುತಿ ರಾವ್ ಪವಾರ್ ಅಭಿಮತ



ಮೈಸೂರು, ಡಿ.30(ಜಿಎ)–ನಾಲ್ವಡಿ ಕೃಷ್ಣರಾಜ ಒಡೆಯರ್ ರಾಜ್ಯಕ್ಕೆ ನೀಡಿರುವ ಕೊಡುಗೆಗಳನ್ನು ಯಾವ ರಾಜಕೀಯ ಪಕ್ಷದ ನಾಯಕರು ನೀಡಿಲ್ಲ ಎಂದು ಮಾಜಿ ಶಾಸಕ ಮಾರುತಿ ರಾವ್ ಪವಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಪುರಭವನದಲ್ಲಿ 'ಕಾವೇರಿ ಕರ್ನಾಟಕ ಪ್ರಾದೇಶಿಕ ಸಾಂಸ್ಕೃತಿಕ ಮತ್ತು ಸಾಹಿತ್ಯ ಅಕಾಡೆಮಿ'ಯ ಸಂಘದ ಉದ್ಘಾಟನೆ ಮತ್ತು 'ಕಾವೇರಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ಒಂದು ಚಿಂತನೆ' ವಿಚಾರ ಸಂಕಿರಣ, 'ಕಾವೇರಿ ಕರ್ನಾಟಕ ರತ್ನ, ಅಕಾಡೆಮಿ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡುತ್ತಿದ್ದರು.

ಮೈಸೂರು, ಕೊಡಗು, ಚಾಮರಾಜನಗರ ಮತ್ತು ಮಂಡ್ಯದಲ್ಲಿ ಜನಿಸಿದವರು ಪುಣ್ಯವಂತರು. ಅದರಲ್ಲೂ ಮೈಸೂರಿನಲ್ಲಿ ವಾಸಿಸುತ್ತಿದ್ದೇವೆ ಎಂದರೆ ಒಂದು ಗರ್ವ ಮನೋಭಾವ ಮೂಡುತ್ತದೆ. ನಾಗರಹೊಳೆ ಅಭಯಾರಣ್ಯ, ಮಹದೇಶ್ವರ ಬೆಟ್ಟ, ಚಾಮುಂಡಿ ಬೆಟ್ಟ ಸೇರಿದಂತೆ ಎಲ್ಲಾ ಮಾದರಿಯ ಸಸ್ಯಕಾಶಿ ಕಾಣಬಹುದಾಗಿದ್ದು, ಇಲ್ಲಿ ಪ್ರಕೃತಿ ಮತ್ತು ಮಾನವ ಶಕ್ತಿ ಅಡಗಿದೆ. ಚಾಮ ರಾಜನಗರದ ಕಪ್ಪು ಕಲ್ಲು ಶ್ರೇಷ್ಠ ಕಲ್ಲಾಗಿದ್ದು, ಇದನ್ನು ವಿಶ್ವದ ವಿವಿಧ ಭಾಗಕ್ಕೆ ಕೊಂಡೊಯ್ಯುತ್ತಾರೆ. ನಮ್ಮ ಈ ನಾಲ್ಕು ಜಿಲ್ಲೆಗಳಲ್ಲಿರುವ ಸಂಪತನ್ನು ಬಳಸಿಕೊಂಡು ಮತ್ತಷ್ಟು ಸಂವೃದ್ಧಿ ಮಾಡಬಹುದು ಎಂದರು.

'ಕಾವೇರಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ಒಂದು ಚಿಂತನೆ' ಕುರಿತ ವಿಚಾರ ಸಂಕಿರಣದಲ್ಲಿ ಮೈಸೂರು, ಚಾಮರಾಜನಗರ, ಕೊಡಗು ಮತ್ತು ಮಂಡ್ಯ ಜಿಲ್ಲೆಗಳ ಅಭಿವೃದ್ಧಿಗಿಂತ ಪರಿಸರ ಸಂರಕ್ಷಣೆ ಹಾಗೂ ಅಸಮತೋಲನ ಕಾಯ್ದುಕೊಳ್ಳಲು ಏನು ಮಾಡಬೇಕು ಎಂಬುದನ್ನು ಚರ್ಚಿಸಲಾಯಿತು.

ಕೊಡಗು ಜಿಲ್ಲೆಯ ಅಸಮತೋಲನ ಕುರಿತು ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ ಅವರು ಮಾತನಾಡಿ, ಕೊಡಗು ಪ್ರವಾಸಿಗರ ಸ್ವರ್ಗ, ಸ್ವಿಟ್ಜರ್ ಲ್ಯಾಂಡ್ ಎಂದೆಲ್ಲಾ ಕರೆಸಿಕೊಳ್ಳುತ್ತದೆ. ಆದರೆ, ಕೊಡಗನ್ನು ಕೊಡಗಿನಂತೆ ಬಿಟ್ಟರೆ ಸಾಕಾಗಿದೆ. ಕಡಿಮೆ ವಿಸ್ತೀರ್ಣ, ಕಡಿಮೆ ಜನಸಂಖ್ಯೆ ಹೊಂದಿರುವ ಜಿಲ್ಲೆಯಾಗಿದೆ. ಕೊಡಗಿನವರು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ನಗರ ಪ್ರದೇಶದಲ್ಲಿ ಕೇವಲ ಬೇರೆ ಕಡೆಯಿಂದ ಬಂದು ವಾಣಿಜ್ಯ ಚಟುವಟಿಕೆ ನಡೆಸುತ್ತಿದ್ದು, 4000 ಕ್ಕೂ ಹೆಚ್ಚು ಹೋಂ ಸ್ಟೇಗಳು ನಾಯಿಕೊಡೆಯಂತೆ ತಲೆಯತ್ತಿವೆ. ಇವುಗಳಲ್ಲಿ ಬಹುತೇಕ ಹೋಂ ಸ್ಟೇಗಳು ಅನಧಿಕೃತವಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

1952ರಲ್ಲಿ ಕೊಡಗು ಜಿಲ್ಲೆಯಲ್ಲಿ ಸಿ.ಎಂ. ಪೂಣಚ್ಚ ಮುಖ್ಯಮಂತ್ರಿಗಳಾಗಿದ್ದರು. ಅವರೊಟ್ಟಿಗೆ 24 ಮಂದಿ ಎಂಎಲ್ಎಗಳು ಜೊತೆಯಾಗಿ ಕೊಡಗನ್ನು ಅಭಿವೃದ್ಧಿ ಮಾಡುತ್ತಿದ್ದರು. ನಂತರ ಜವಹಾರ ಲಾಲ್ ನೆಹರು ಅವರು ಕೊಡಗು ಜಿಲ್ಲೆಯನ್ನು ವಿಲೀನಗೊಳಿಸಿದರೆ, ವಿಶೇಷ ಅನುದಾನ ಮತ್ತು ಅಭಿವೃದ್ಧಿಗೆ ಒತ್ತು ನೀಡಿ ಲೋಕಸಭಾ ಕ್ಷೇತ್ರವನ್ನಾಗಿ ಮಾಡುತ್ತೇವೆಂದು ಪೂಣಚ್ಚ ಅವರೊಡನೆ ಒಪ್ಪಂದ ಮಾಡಿಕೊಂಡರು. ಆದರೆ, ಜಿಲ್ಲೆಗೆ ಪ್ರತ್ಯೇಕ ಎಂಪಿ ಸ್ಥಾನವನ್ನೂ ನೀಡಿಲ್ಲ. ಅವರು ನೀಡಿದ ಒಂದು ಭರವಸೆಯನ್ನು ಈಡೇರಿಸಲಿಲ್ಲ. ಇತ್ತೀಚೆಗೆ ಮೂಲ ಕೊಡವ ಭಾಷೆಯೂ ಕಣ್ಮರೆಯಾಗುತ್ತಿದ್ದು, ಹೊರ ರಾಜ್ಯದವರ ಉಪಟಳ ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರು ಮೈಸೂರು–ಚಾಮರಾಜನಗರ ಕುರಿತು ಮಾತನಾಡಿ, ಸ್ವಾತಂತ್ರ ಬಂದು 75 ವರ್ಷದ ನಂತರವೂ ಪ್ರಾದೇಶಿಕ ಅಸಮತೋಲನ ಇದೆ. ಈ ಹಿಂದೆ ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಡಿ.ಎಸ್.ನಂಜುಂಡಪ್ಪ ಅವರು ವರದಿಯನ್ನು ಎಸ್.ಎಂ. ಕೃಷ್ಣ ನೇತೃತ್ವದ ಸರಕಾರಕ್ಕೆ ಸಲ್ಲಿಸಿದ್ದರು. ಆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರಕಾರ ಸಾವಿರ ಕೋಟಿ ರೂ.ಗಳನ್ನು ಮೀಸಲಿರಿಸಿತ್ತು. ಆದರೆ, ನಂತರ ಬಂದವರು ಪ್ರಾದೇಶಿಕ ಅಸಮತೋಲನ ತಡೆಗಟ್ಟಲು ಒತ್ತು ನೀಡಲಿಲ್ಲ. ಚಾ.ನಗರದಲ್ಲಿ ಗಣಿಗಾರಿಕೆಗೆ ಸಂಬಂಧಿಸಿದಂತೆ ಕೈಗಾರಿಕೆಗಳು ಬರಬೇಕು. ಮೈಸೂರಿನಲ್ಲಿರುವ ಕಬಿನಿ ಸೇರಿದಂತೆ ಇನ್ನಿತರ ಜಲಮೂಲಗಳ ರಕ್ಷಣೆ ಹಾಗೂ ಸದ್ಬಳಕೆ ಆಗಬೇಕಿದೆ. ಮೈಸೂರು ಪ್ರವಾಸಿಗರ ನೆಚ್ಚಿನ ತಾಣವಾಗಿರುವುದರಿಂದ ಟೂರಿಸಂ ಸರ್ಕ್ಯೂಟ್ ಮಾಡಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ ಎಂದರು.

ಪ್ರಾದೇಶಿಕ ಸಾಂಸ್ಕೃತಿಕ ಮತ್ತು ಸಾಹಿತ್ಯ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ರಮೇಶ್ ಸುರ್ವೆ ಹಾಗೂ ಕಸಾಪ ಮಾಜಿ ಅಧ್ಯಕ್ಷ ಪ್ರೊ.ಜಿ.ಟಿ.ವೀರಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ಆರ್ಕಿಟೆಕ್ಟ್ ಎಂಜಿನಿಯರ್ ಪಾರ್ವತಿ ರಾಮಕೃಷ್ಣ, ಚುಟುಕು ಸಾಹಿತ್ಯ ಪರಿಷತ್ ರಾಜ್ಯ ಸಂಚಾಲಕ ಡಾ.ಎಂ.ಜಿ.ಆರ್.ಅರಸ್, ಚಿತ್ರ ನಟ ಮೈಸೂರು ರಮಾನಂದ ಅವರ ಜೀವಮಾನದ ಸಾಧನೆಗಾಗಿ ಕಾವೇರಿ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಳಗಾವಿಯ ಹಿರೇಮಠದ ಕಲ್ಮೇಶವರ ಸ್ವಾಮೀಜಿ, ಕಲಾವಿದ ಗಣೇಶ್‌ರಾವ್, ಡಾ.ಚಿಕ್ಕಹೆಜ್ಜಾಜಿ, ನಟಿ ಮೀನಾ, ಸಾಹಿತಿ ಎಂ.ಮಹೇಶ್ ಚಿಕ್ಕಲ್ಲೂರು, ಸಂಘದ ಗೌರವಾಧ್ಯಕ್ಷ ಡಾ.ಎಸ್.ವೆಂಕಟೇಶ್ ಉಪಸ್ಥಿತರಿದ್ದರು.

ಹಸಿರು ನಮ್ಮ ಉಸಿರು

ಲಷ್ಕರ್ ಮೊಹಲ್ಲಾದ ಗುಜರಿಯಲ್ಲಿ ಬೆಂಕಿ

2 ಅಂಗಡಿ ಸಂಪೂರ್ಣ ಅಗ್ನಿಗಾಹುತಿ; ಅಪಾರ ಪ್ರಮಾಣದ ಸ್ಕ್ರ್ಯಾಪ್ ನಾಶ



ಮೈಸೂರು, ಡಿ.30(ಆರ್‌ಕೆ)– ಮೈಸೂರಿನ ಹೃದಯ ಭಾಗದಲ್ಲಿರುವ ಲಷ್ಕರ್ ಮೊಹಲ್ಲಾದ ಹಳೇ ಗುಜರಿಯಲ್ಲಿ ಆಕಸ್ಮಿಕ ಬೆಂಕಿಯಿಂದ ಎರಡು ಅಂಗಡಿಗಳು ಸಂಪೂರ್ಣ ಸುಟ್ಟು ಹೋಗಿವೆ. ಈ ಘಟನೆ ಇಂದು ಮಧ್ಯಾಹ್ನ ಸಂಭವಿಸಿದೆ.

ವರ್ತಕರೆಲ್ಲರೂ ಅಂಗಡಿ ಬಂದ್ ಮಾಡಿ ನಮಾಜ್‌ಗೆ ತೆರಳಿದಾಗ ಮಧ್ಯಾಹ್ನ ಸುಮಾರು 1.35 ಗಂಟೆಯಲ್ಲಿ ಗುಜರಿಯ ಪೂರ್ವ ಭಾಗದಲ್ಲಿ ದಟ್ಟ ಹೊಗೆ ಕಾಣಿಸಿಕೊಂಡಿದೆ. ಇದನ್ನು ಕಂಡ ಲಷ್ಕರ್ ಠಾಣೆ ಸಬ್‌ಇನ್‌ಸ್ಪೆಕ್ಟರ್ ಧನಲಕ್ಷ್ಮಿ, ತಕ್ಷಣ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿ, ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ತೆರಳಿದ್ದಾರೆ.


ಅಷ್ಟರಲ್ಲಿ ಬೆಂಕಿ ಜ್ವಾಲೆ ಉಲ್ಬಣಗೊಂಡಿತ್ತು. ಅದೇ ವೇಳೆ ಬನ್ನಿಮಂಟಪ ಹಾಗೂ ಸರಸ್ವತಿಪುರಂ ಅಗ್ನಿಶಾಮಕ ಠಾಣೆಗಳ ನಾಲ್ಕು ವಾಹನಗಳು ಸ್ಥಳಕ್ಕೆ ಬಂದು ಕಾರ್ಯಾಚರಣೆ ಆರಂಭಿಸಿವೆ. ಸುಮಾರು ಒಂದು ಗಂಟೆ ನಿರಂತರ ಪ್ರಯತ್ನದಿಂದಾಗಿ ಬೆಂಕಿ ನಂದಿಸಲು ಸಾಧ್ಯವಾಯಿತು. ಹಳೇ ಸ್ಕ್ರ್ಯಾಪ್, ಕಾರುಗಳ ರಬ್ಬರ್ ಬೀಡಿಂಗ್, ಸೀಟ್ ಕವರ್, ಇನ್ನಿತರೆ ರಬ್ಬರ್ ಪದಾರ್ಥಗಳ ರಾಶಿಗೆ ಆಕಸ್ಮಿಕ ಬೆಂಕಿ ತಗುಲಿದ್ದರಿಂದ ಎರಡು ಅಂಗಡಿಗಳಲ್ಲಿದ್ದ ಕಾರುಗಳ ರಬ್ಬರ್, ಪ್ಲಾಸ್ಟಿಕ್, ಲೆದರ್ ಬಿಡಿ ಭಾಗಗಳು ಸಂಪೂರ್ಣವಾಗಿ ಸುಟ್ಟು ಕರಕಲಾದವು.

ಸ್ಥಳದಲ್ಲಿ ಆಯಿಲ್ ಚೆಲ್ಲಿದ್ದು, ಆಯಿಲ್ ವರಿಸಿದ್ದ ಕಾಟನ್ ವೇಸ್ಟ್, ಕಬ್ಬಿಣ ಕತ್ತರಿಸಲೆಂದು ಇರಿಸಿದ್ದ ಸಿಲಿಂಡರ್‌ಗಳಿದ್ದಿದ್ದರಿಂದ ಬೆಂಕಿ ಜ್ವಾಲೆ ತೀವ್ರಗೊಂಡು, ದಟ್ಟ ಹೊಗೆ ಆವರಿಸಿತ್ತು ಒಂದು ವೇಳೆ ಅಗ್ನಿಶಾಮಕ ದಳದ ಸಿಬ್ಬಂದಿ ಬರುವುದು ತಡವಾಗಿದ್ದಲ್ಲಿ ಬೆಂಕಿ ಗುಜರಿಯಲ್ಲಿರುವ ಇನ್ನಿತರ ಅಂಗಡಿಗಳಿಗೂ ಹರಡಿ ಭಾರೀ ಪ್ರಮಾಣದ ನಷ್ಟ ಉಂಟಾಗುತ್ತಿತ್ತಲ್ಲದೇ, ಪಕ್ಕದಲ್ಲೇ ಇದ್ದ ಹೋಟೆಲ್ ಬಿಲ್ಡಿಂಗ್ ಮತ್ತು ಲಾರ್ಡ್ ವೆಲ್ಲಿಂಗ್‌ಟನ್ ಹೌಸ್ ಸಂಗ್ರಹಾಲಯಗಳಿಗೂ ಅಪಾಯ ಸಂಭವಿಸುತ್ತಿತ್ತು

ಅದೃಷ್ಟವಶಾತ್ ಸ್ಥಳದಲ್ಲಿ ಯಾರೂ ಇರಲಿಲ್ಲವಾದ್ದರಿಂದ ಯಾವುದೇ ಸಾವು–ನೋವುಗಳು ಸಂಭವಿಸಿಲ್ಲ. ವಿಷಯ ತಿಳಿಯುತ್ತಿದ್ದಂತೆಯೇ ಅಂಗಡಿ ಮಾಲೀಕರು, ಗುಜರಿ ವರ್ತಕರ ಸಂಘದ ಪದಾಧಿಕಾರಿಗಳು ಘಟನಾ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದರು. ಒಂದು ಅಂಗಡಿಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಆಗಿ, ಬೆಂಕಿಹೊತ್ತಿಕೊಂಡಿರಬಹುದೆಂದು ಹೇಳಲಾಗಿದ್ದು, ಲಷ್ಕರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ದೇವರಾಜ ಉಪವಿಭಾಗದ ಎಸಿಪಿ ಎಂ.ಎನ್. ಶಶಿಧರ್ ಘಟನಾ ಸ್ಥಳಕ್ಕೆ ದಾವಿಸಿ ಪರಿಶೀಲಿಸಿದರು. ಇನ್ನು ಬಿಸಿಲಿನ ಝಳ ಜಾಸ್ತಿಯಾಗುವುದರಿಂದ ಅಗ್ನಿ ಅನಾಹುತಗಳಾಗದಂತೆ ಮುಂಜಾಗ್ರತೆ ವಹಿಸಬೇಕು. ಅಪಾಯಕಾರಿ ಸ್ಫೋಟಕ ವಸ್ತುಗಳನ್ನು ಅಂಗಡಿಯಲ್ಲಿಟ್ಟುಕೊಳ್ಳಬಾರದು. ಅನುಪಯುಕ್ತ ವಸ್ತುಗಳನ್ನು ರಾಶಿಗಟ್ಟಲೆ ದಾಸ್ತಾನಿರಿಸಬಾರದು ಎಂದು ಅಂಗಡಿ ಮಾಲೀಕರಿಗೆ ಎಸಿಪಿ ಸಲಹೆ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.12.2022 ಶನಿವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ನವಮಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ** :ಧನುರ್ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆಯಿಂದ

■ **ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾ ಕೂಟ** : ಕನ್ನಡ ಪತ್ರಿಕೆ ಕೊಂಡು ಓದಿ ಅಭಿಯಾನ, ಉದ್ಘಾಟನೆ : ಮೇಯರ್ ಶಿವಕುಮಾರ್, ವಿಚಾರ ಮಂಡನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಆಶಯ ನುಡಿ : ಪರಿಷತ್ ಅಧ್ಯಕ್ಷ ಕೆ.ಎಸ್. ಶಿವರಾಮು, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ಮಡ್ಡೀಕೆರೆ ಗೋಪಾಲ್, ಸಾತ್ವಿಕ್ ಸಂದೇಶ್‌ಸ್ವಾಮಿ, ಜಿ.ಎನ್. ಮಂಜುನಾಥ್, ಕೆ. ನರಸಿಂಹಮೂರ್ತಿ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ತ್ರಿವೇಣಿ ವೃತ್ತ, ಡಾ. ರಾಜ್‌ಕುಮಾರ್ ರಸ್ತೆ, ಬೆಳಗ್ಗೆ 9ಕ್ಕೆ.

■ **ಸುಪ್ರಭ ನಾಗೇಶ್‌ರಾವ್ ಸೇವಾ ಪ್ರತಿಷ್ಠಾನ** : ಏಕ ವ್ಯಕ್ತಿಯಿಂದ ವಿಶ್ವಶಾಂತಿಗಾಗಿ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ : 622, 2ನೇ ಮೇನ್, ಶಾರದಾದೇವಿನಗರ, ಬೆಳಗ್ಗೆ

■ **ವಿದ್ಯಾವರ್ಧಕ ಕಾನೂನು ಕಾಲೇಜು** : ರಾಷ್ಟ್ರೀಯ ಗ್ರಾಹಕರ ದಿನಾಚರಣೆ, ಉದ್ಘಾಟನೆ : ಜಿಲ್ಲಾ ಗ್ರಾಹಕ ಪರಿಹಾರ ಆಯೋಗದ ಅಧ್ಯಕ್ಷ ಬಿ. ನಾರಾಯಣಪ್ಪ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಮುಖ್ಯ ಅತಿಥಿಗಳು : ಎಂಜಿಪಿ ಸ್ಥಾಪಕ ಡಾ. ಭಾಮಿ ವಿ. ಶೆಣೈ, ಗೌರವ ಅತಿಥಿಗಳು : ಪಿ. ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಸ್ಥಳ: ಶ್ರೀ ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ** : ವಾಯ್ಸ್ ಆಫ್ ಮೈಸೂರು ಗಾಯನ ಸ್ಪರ್ಧೆ, ಮುಖ್ಯ ಅತಿಥಿಗಳು : ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಸಿಇಓ ರುದ್ರೇಶ್, ಡಾ. ರೇಖಾ, ಸಮಾಜ ಸೇವಕ ಎನ್.ಎಂ. ನವೀನ್ ಕುಮಾರ್, ಡಾ. ಪವಿತ್ರ, ಹೇಮಾ ನಂದೀಶ್, ಸಮಾಜ ಸೇವಕ ಡಾ. ಕೆ. ರಘುರಾಮ್ ವಾಜಪೇಯಿ, ಸ್ಥಳ: ಪಿ. ಕಾಳಿಂಗರಾವ್ ರಂಗ ಮಂಟಪ, ಬೆಳಗ್ಗೆ 9.30ಕ್ಕೆ

■ **ಶ್ರೀ ಭಕ್ತ ಕನಕದಾಸ ಸೇವಾ ಸಮಿತಿ, ಕನಕ ಯುವ ಸೇನಾ ಸಮಿತಿ** : ಕನಕದಾಸರ ಜಯಂತೋತ್ಸವ ಅಂಗವಾಗಿ ಮೆರವಣಿಗೆ, ಅನ್ನದಾನ ಕಾರ್ಯಕ್ರಮ, ಸ್ಥಳ: ಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ** : ನೂತನ ವರ್ಷದ ಡೈರಿ ಹಾಗೂ ಕ್ಯಾಲೆಂಡರ್ ಬಿಡುಗಡೆ, ಮುಖ್ಯ ಅತಿಥಿಗಳು : ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಮೇಯರ್ ಶಿವಕುಮಾರ್, ಸಿದ್ದಾರ್ಥ ಗ್ರೂಪ್ಸ್ ಮಾಲೀಕ ಪಿ.ವಿ. ಗಿರಿ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು** : ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ, ಉದ್ಘಾಟನೆ : ಸಹಕಾರ ಸಂಘಗಳ ಉಪನಿಬಂಧಕ ಜಿ.ಆರ್. ವಿಜಯಕುಮಾರ್, ಅಧ್ಯಕ್ಷತೆ : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಓಂಪ್ರಕಾಶ್, ಹೆಚ್.ಎನ್. ನವೀನ್, ಸ್ಥಳ: ಎಸ್.ಪಿ. ಭಟ್ ಹಾಲ್, ಜೆಎಲ್‌ಬಿ ರಸ್ತೆ, ಮುಡಾ ಹತ್ತಿರ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು** : ಪ್ರತಿಭಾ ಪುರಸ್ಕಾರ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ತನ್ವೀರ್ ಸೇಠ್, ಮೇಯರ್ ಶಿವಕುಮಾರ್, ಮೈಸೂರು ಜಿಲ್ಲೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಸಂಘದ ಅಧ್ಯಕ್ಷ ಕೆ.ಬಿ. ಸೋಮೇಗೌಡ, ಸ್ಥಳ: ಸಂಘದ ಆವರಣ, ಬೆಳಗ್ಗೆ 10.30ಕ್ಕೆ.

■ **ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ** : ಹೊಯ್ಸಳ ಪ್ರಶಸ್ತಿ ಪ್ರದಾನ ಸಮಾರಂಭ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಶ್ರೀ ವಾಸುದೇವಾಚಾರ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜನ ಚೈತನ್ಯ ಫೌಂಡೇಷನ್** : ಕ್ಯಾಲೆಂಡರ್ ಬಿಡುಗಡೆ ಮತ್ತು ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ಅಂಕಣಕಾರ ಡಾ. ಅಮ್ಮಸಂದ್ರ ಸುರೇಶ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕವಯಿತ್ರಿ ಡಾ. ಕೆ.ಎನ್. ಲಾವಣ್ಯ ಪ್ರಭಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಪ್ರಾಸ್ತಾವಿಕ ನುಡಿ : ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸನ್ಮಾನಿತರು : ಕು. ಎಂ. ಸ್ನೇಹ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಬೆಳಗ್ಗೆ 11ಕ್ಕೆ.

■ **ವಿದ್ಯಾವರ್ಧಕ ಪದವಿಪೂರ್ವ ಕಾಲೇಜು** : ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಉಪಸ್ಥಿತರು : ಪಿ. ವಿಶ್ವನಾಥ್, ಶ್ರೀಶೈಲರಾಮಣ್ಣವರ್, ಎಸ್. ಶಿವಲಿಂಗಯ್ಯ, ಪ್ರಿನ್ಸಿಪಾಲ್ ಸಿದ್ದಯ್ಯ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ** : ಕನ್ನಡ ರಾಜ್ಯೋತ್ಸವ ಆಚರಣೆ, ಉದ್ಘಾಟನೆ : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸನ್ಮಾನಿತರು : ಡಾ. ವಸುಂಧರಾ ದೊರೆಸ್ವಾಮಿ, ಉಪಸ್ಥಿತರು : ಕುಲಸಚಿವ ಪ್ರೊ. ಟಿ.ಎಸ್. ದೇವರಾಜ, ಶ್ರೀಮತಿ ಎಂ.ಎಸ್. ಪ್ರತಿಭಾ, ಕೆ.ಜಿ.ಎಸ್. ಅಶ್ವತ್ಥ, ಸಥಳ: ವಿವಿ ಆವರಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು,ಲೇಖನ ದಾ. ಶ್ರೀ ರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ– ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ 10.00 ಮೈಸೂರು ಎಂ. ನಾಗರಾಜ್ – ವಯೋಲಿನ್

ಮಧ್ಯಾಹ್ನ: 12.30 ದೇವರನಾಮ, 12.45 ಜನಪದಸಂಗೀತ–ಪಾರ್ವತಮ್ಮ ಮತ್ತು ತಂಡ, 1.00 ಪ್ರಗತಿಪಥ, 1.20 ಭಾವಗೀತೆ, 3.30 ಮಕ್ಕಳ ಮಂಟಪ –ವಿ.ವಿ.ಎಸ್. ಬಿ.ಎಂ.ಶ್ರೀ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ "ಜಾತಕ ಫಲ", ರಚನೆ– ಬಿ.ಎಸ್ ಕೇಶವರಾವ್, ನಿರ್ಮಾಣ– ಉಮೇಶ್ ಎಸ್.ಎಸ್., 4.30 ನೆನಪಿನಂಗಳ–ರಾಷ್ಟ್ರಕವಿ ಕುವೆಂಪು ಅವರೊಂದಿಗೆ ಸುಜನಾ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ, "ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 9.15 ನಾಳೆ ಎಂದರೆ ಹೊಸ ವರ್ಷ– ಮಾತನಾಡುವವರು– ದೀಪಾ ರವಿಶಂಕರ್, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ಸತೀಶ್ ವ್ಯಾಸ್ –ಸಂತೂರ್ ವಾದನ

■ **ಮಾತೃ ಮಂಡಲಿ ವಿದ್ಯಾಸಂಸ್ಥೆ** : ಸಾಂಪ್ರದಾಯಿಕ ದಿನಾಚರಣೆ, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಮೋದಾಮಣಿ, ಅಧ್ಯಕ್ಷತೆ : ಮಾತೃ ಮಂಡಲಿ ವಿದ್ಯಾಸಂಸ್ಥೆ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಉಪಸ್ಥಿತರು : ಶ್ರೀಮತಿ ವಾಣಿ ಪ್ರಸಾದ್, ಶ್ರೀಮತಿ ಹೇಮ ಬಾಲಚಂದರ್, ಶ್ರೀಮತಿ ವಿಜಯಲಕ್ಷ್ಮಿ ಮುರಳೀಧರ್, ಸನ್ಮಾನಿತರು : ಕೆ.ಪುಟ್ಟಸ್ವಾಮಿ ಪ್ರೌಢಶಾಲೆ ಶಿಕ್ಷಕ ಪ್ರಕಾಶ್, ಸ್ಥಳ : ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಕನ್ನಡ ಚಳವಳಿ ಕೇಂದ್ರ ಸಮಿತಿ** : ನೂತನ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ : ಶ್ರೀ ಹೊಸಮಠದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಅತಿಥಿಗಳು : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಉಪಸ್ಥಿತರು : ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.

■ **ಮೈಸೂರು ಅರಮನೆ ಮಂಡಳಿ** : ಅರಮನೆ ಫಲಪುಷ್ಪ ಪ್ರದರ್ಶನ, ರಾತ್ರಿ 11 ರಿಂದ ಪೊಲೀಸ್ ಇಲಾಖೆ ವತಿಯಿಂದ ಕರ್ನಾಟಕ ಮತ್ತು ಆಂಗ್ಲ ಬ್ಯಾಂಡ್ ಕಾರ್ಯಕ್ರಮ, ಮಧ್ಯರಾತ್ರಿ 12 ರಿಂದ ಮೈಸೂರು ಅರಮನೆ ಮಂಡಳಿ ವತಿಯಿಂದ ಹೊಸ ವರ್ಷಾಚರಣೆ ಪ್ರಯುಕ್ತ ಬಣ್ಣಗಳ ಚಿತ್ತಾರ ಕೂಡಿದ ಶಬ್ಧರಹಿತ ಪಟಾಕಿ ಸಿಡಿಸುವ ಕಾರ್ಯಕ್ರಮ, ಸ್ಥಳ: ಅರಮನೆ ಆವರಣ.

■ **ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ** : ರಾಜ್ಯ ಮಟ್ಟದ ಚಿಣ್ಣರ ಸಂಗೀತೋತ್ಸವ, ಉದ್ಘಾಟನೆ : ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಅಧ್ಯಕ್ಷತೆ : ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಮುಖ್ಯ ಅತಿಥಿಗಳು : ಕರ್ನಾಟಕ ಬಾಲವಿಕಾಸ ಅಕಾಡೆಮಿ ಯೋಜನಾಧಿಕಾರಿ ಶ್ರೀಮತಿ ಭಾರತಿ ಶೆಟ್ಟರ್, ಗ್ರಾಮರಂಗ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ನಾಗಲಿಂಗೇಗೌಡ, ಸ್ಥಳ: ಗಾನಭಾರತೀ (ವೀಣೆ ಶೇಷಣ್ಣ ಭವನ), ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ

■ **ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳು** : ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಮೈಸೂರು ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ದಿವಾಕರ್ ಹೆಗಡೆ, ಅಧ್ಯಕ್ಷತೆ: ಶಿಶುವಿಹಾರ ಅಧ್ಯಕ್ಷ ಡಾ. ಎ.ಎಸ್. ಚಂದ್ರಶೇಖರ್, ಸ್ಥಳ: ಸ್ವಾಮಿ ವಿವೇಕಾನಂದ ರಂಗ ಮಂಟಪ, ಸಂಜೆ 5ಕ್ಕೆ

■ **ಮಾಲಿನಿ ನೃತ್ಯಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರ** : ಡಾ. ವಿ. ಮಾಲಿನಿ ಮತ್ತು ವೃಂದದವರಿಂದ ದಾಸವಾಣಿ ಸಂಗೀತ ಧಾರೆ ಕಾರ್ಯಕ್ರಮ, ಸ್ಥಳ: ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠದ ಸಭಾಂಗಣ, ಲಕ್ಷ್ಮೀ ವಿಲಾಸ ರಸ್ತೆ, ಸಂಜೆ 5.30ಕ್ಕೆ.

■ **ಗಂಧರ್ವ ಗಾನ ಕಲಾವೃಂದ** : ಮೈಸೂರಿನ ರಮೇಶ್ ಕುಮಾರ್ ಮತ್ತು ಡಾ. ಶ್ರೀನಿವಾಸಮೂರ್ತಿ ಅವರಿಂದ ಹಳೆಯ ಚಲನಚಿತ್ರ ಗೀತೆಗಳ ಸಂಭ್ರಮ 'ಅಪೂರ್ವ ಸಂಗಮ' ರಸಸಂಜೆ ಕಾರ್ಯಕ್ರಮ, ಸ್ಥಳ: ರಮಾಗೋವಿಂದ ರಂಗಮಂದಿರ, ಸಂಜೆ 5.30ಕ್ಕೆ.

■ **ಶ್ರೀ ಆಂಡಾಳ್ ಮಂದಿರಂ:** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವ ನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ಆಂಡಾಳ್ ಮಂದಿರಂ ಆವರಣ. ವಿವಿ ಮೊಹಲ್ಲಾ, ಸಂಜೆ 6 ರಿಂದ 7.30ರವರೆಗೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ. ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ದೇವಸ್ಥಾನ ಆವರಣ, ತ್ಯಾಗರಾಜ ರಸ್ತೆ, ಸಂಜೆ 6ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ** : ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಮಹಾಜನಸಭಾ** : ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀ ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ರಂಗಾಯಣ** : ಅಭಿನಯ ರಂಗ ತರಬೇತಿ ಕಲಾವಿದರಿಂದ ಡಾ. ಚಂದ್ರಶೇಖರ ಕಂಬಾರರ ರಚನೆಯ 'ಸಾಂಬಶಿವ ಪ್ರಹಸನ' ನಾಟಕ ಪ್ರದರ್ಶನ, ನಿರ್ದೇಶನ : ಕಾರ್ತಿಕ್ ಉಪಮನ್ಯು, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

ಕಂಚಮಳ್ಳಿಯಲ್ಲಿಂದು, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಪದವಿಪೂರ್ವ ಕಾಲೇಜು** : ಎನ್‌ಎಸ್‌ಎಸ್ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಪ್ರಾಂಶುಪಾಲ ಎಂ.ಪಿ. ರೇವಣ್ಣ, ಸಮಾರೋಪ ಭಾಷಣ : ಸಹಾಯಕ ಸಂಯೋಜನಾಧಿಕಾರಿ ಡಾ. ಟಿ.ಕೆ. ರವಿ, ಮುಖ್ಯ ಅತಿಥಿಗಳು : ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಉದಯಕುಮಾರ್, ಹೆಚ್.ವಿ. ಕೃಷ್ಣಸ್ವಾಮಿ, ಜಯಪ್ರಕಾಶ್ ಚಿಕ್ಕಣ್ಣ, ಪಿ. ನಟರಾಜು, ರಂಗಸ್ವಾಮಿ, ಶೇಖರ್, ಮಲ್ಲಿಗಮ್ಮ, ಸಿ.ಕೆ. ಗಿರೀಶ್, ಸಿದ್ದರಾಜು, ಬೆಳಗ್ಗೆ 11ಕ್ಕೆ

ಸುತ್ತೂರು ಕ್ಷೇತ್ರ, ನಂಜನಗೂಡು ತಾ.

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್** : ಎನ್‌ಎಸ್‌ಎಸ್ ವಾರ್ಷಿಕ ಶಿಬಿರ, ಉಪನ್ಯಾಸ ಕಾರ್ಯಕ್ರಮ, ಹಿರಿಯ ವಿಜ್ಞಾನಿ ಹೆಚ್.ವಿ. ದಿವ್ಯ ಅವರಿಂದ ಮಣ್ಣಿನ ಫಲವತ್ತತೆ ಮತ್ತು ಸಂರಕ್ಷಣೆ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಮಣ್ಣು ವಿಜ್ಞಾನಿ ಜೆ.ಜಿ. ರಾಜಣ್ಣ, ಅಧ್ಯಕ್ಷತೆ : ಎನ್.ಎಂ. ಶಿವಕುಮಾರಸ್ವಾಮಿ, ಸಂಜೆ 4ಕ್ಕೆ.

ಸಿಪೆಟ್‌ನಲ್ಲಿ ಅಕ್ರಮ ಹಣ ವರ್ಗಾವಣೆ: ಆರೋಪಿ ದಂಪತಿಗೆ ಜೈಲು ಶಿಕ್ಷೆ

ಇಡಿ ಕೋರ್ಟ್ ಶಿಕ್ಷೆ ಪ್ರಕಟ

ಮೈಸೂರು, ಡಿ.30– ಮೈಸೂರಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ(ಸಿಐಪಿಇಟಿ–ಸಿಪೆಟ್) ಸಂಸ್ಥೆಗೆ ವಂಚನೆ ಹಾಗೂ ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ಎಚ್.ಎನ್.ಅರವಿಂದ್ ಮತ್ತು ಅವರ ಪತ್ನಿ ಬಿನು ಅರವಿಂದ್ ದಂಪತಿಗೆ ಬೆಂಗಳೂರಿನ ಜಾರಿ ನಿರ್ದೇಶನಾಲಯ(ಇಡಿ)ದ ನ್ಯಾಯಾಲಯ ಕಠಿಣ ಜೈಲು ಶಿಕ್ಷೆ ವಿಧಿಸಿದೆ.

ಸಿಐಪಿಇಟಿಯಲ್ಲಿ ತಂತ್ರಜ್ಞನಾಗಿದ್ದ ಎಚ್.ಎನ್.ಅರವಿಂದ್ ಇತರ ಆರೋಪಿಗಳೊಂದಿಗೆ ಸೇರಿಕೊಂಡು ಗ್ರಾಹಕರು ಸಂಸ್ಥೆಗೆ ನೀಡಿದ್ದ ಡಿಮ್ಯಾಂಡ್ ಡ್ರಾಫ್ಟ್‌ಗಳು(ಡಿಡಿ)/ಚೆಕ್‌ಗಳನ್ನು ಬೋಗಸ್ ಅಕೌಂಟ್ ಮೂಲಕ ಎನ್‌ಕ್ಯಾಶ್ ಮಾಡಿಕೊಂಡು ಸುಮಾರು 1.25 ಕೋಟಿ ರೂ.(ಒಟ್ಟು–1,25,75,209ರೂ.) ಲಪಟಾಯಿಸಿ, ಆ ಹಣದಲ್ಲಿ ಬಿನು ಅರವಿಂದ್ ಹೆಸರಿನಲ್ಲಿ ಭೂಮಿ ಖರೀದಿಸಲಾಗಿತ್ತು. ಈ ಸಂಬಂಧ ಸಂಸ್ಥೆಯವರು ನೀಡಿದ ದೂರಿನನ್ವಯ ಸಿಬಿಐ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿತ್ತು.

ಅಕ್ರಮ ಹಣ ವರ್ಗಾವಣೆ ಆರೋಪದಡಿ ಇಡಿ ಅಧಿಕಾರಿಗಳೂ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದರಲ್ಲದೆ ಪ್ರಕರಣ ಸಂಬಂಧ ಬೆಂಗಳೂರಿನ ಇಡಿ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರು, ದಂಪತಿ ವಿರುದ್ಧದ ಆರೋಪ ಸಾಭೀತಾದ ಹಿನ್ನೆಲೆಯಲ್ಲಿ ಎಚ್.ಎನ್.ಅರವಿಂದ್‌ಗೆ 4 ವರ್ಷ ಕಠಿಣ ಸಜೆ ಹಾಗೂ 1 ಲಕ್ಷ ರೂ. ದಂಡ ಮತ್ತು ಅವರ ಪತ್ನಿ ಬಿನು ಅರವಿಂದ್‌ಗೆ 3 ವರ್ಷ ಕಠಿಣ ಶಿಕ್ಷೆ ಹಾಗೂ 50 ಸಾವಿರ ರೂ. ದಂಡ ವಿಧಿಸಿ, ಡಿ.28ರಂದು ತೀರ್ಪು ಪ್ರಕಟಿಸಿದ್ದಾರೆ.

ಅಲ್ಲದೆ ಅಕ್ರಮ ಹಾಗೂ ವಂಚನೆ ಹಣದಿಂದ ಖರೀದಿಸಿರುವ ಭೂಮಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವಂತೆ ಸೂಚಿಸಿದ್ದಾರೆ ಎಂದು ಸರ್ಕಾರದ ಪರವಾಗಿ ವಾದಿಸಿದ ವಿಶೇಷ ಸರ್ಕಾರಿ ಅಭಿಯೋಜಕ ಸುದೀಪ್ ಬಂಗೇರ ತಿಳಿಸಿದ್ದಾರೆ.

ದೆಹಲಿ ಗಣರಾಜ್ಯೋತ್ಸವ ಪೆರೇಡ್‌ಗೆ ರಾಮಕೃಷ್ಣ ವಿದ್ಯಾಶಾಲಾ ಮಕ್ಕಳು ಆಯ್ಕೆ



ಆಕರ್ಷ



ಆದಿತ್ಯ

ಮೈಸೂರು, ಡಿ.30– ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಭಾಗವಹಿಸಲು ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ ಇಬ್ಬರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಮೈಸೂರಿನ 13 ಕರ್ನಾಟಕ ಬೆಟಾಲಿಯನ್ ಎನ್.ಸಿ.ಸಿ ವಿಭಾಗಕ್ಕೆ ಸೇರಿದ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಜೂನಿಯರ್ ಡಿವಿಷನ್‌ನ ಸಾರ್ಜೆಂಟ್ ಆಕರ್ಷ ಸಂಜಯ ಕುಮಾರ್, ಸಾರ್ಜೆಂಟ್ ಆದಿತ್ಯ ಸುಧೀರ್ ಟಂಕಸಾಲಿ ಕೆಡೆಟ್ ಆಯ್ಕೆಯಾಗಿದ್ದು, ಈ ಇಬ್ಬರು ಕೆಡೆಟ್‌ಗಳನ್ನು ಶಾಲೆಯ ಪ್ರಾಂಶುಪಾಲರಾದ ಎಸ್.ಬಾಲಾಜಿ ಅಭಿನಂದಿಸಿದ್ದಾರೆ.

ಹಿರಿಯ ಐಪಿಎಸ್ ಅಧಿಕಾರಿ ಆರ್.ದಿಲೀಪ್ ನಿಧನ



ಮೈಸೂರು, ಡಿ.30(ಆರ್‌ಕೆ)– ಸಿಐಡಿ ಆರ್ಥಿಕ ಅಪರಾಧ ವಿಭಾಗದಲ್ಲಿ ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್ (ಡಿಐಜಿ) ಆಗಿದ್ದ ಹಿರಿಯ ಐಪಿಎಸ್ ಅಧಿಕಾರಿ ಆರ್. ದಿಲೀಪ್ (52) ಇಂದು ಮಧ್ಯಾಹ್ನ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಅಪೋಲೋ ಬಿಜಿಎಸ್ ಆಸ್ಪತ್ರೆಯಲ್ಲಿ ನಿಧನರಾದರು.

ಕಳೆದ ಹಲವು ತಿಂಗಳಿಂದ ಅನಾರೋಗ್ಯಕ್ಕೆ ತುತ್ತಾಗಿದ್ದ ದಿಲೀಪ್, ಗುಣಮುಖರಾಗಿ ಕರ್ತವ್ಯಕ್ಕೂ ಹಾಜರಾಗಿದ್ದರು. ಕಳೆದ ಐದು ದಿನಗಳ ಹಿಂದೆ ಮತ್ತೆ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ಅಪೋಲೋ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಇಂದು ಮಧ್ಯಾಹ್ನ ಕೊನೆಯುಸಿರೆಳೆದರು.

ಮೃತರು ತಾಯಿ ಕಾವೇರಿ, ಪತ್ನಿ ರಮ್ಯ, ಪುತ್ರಿ ಅದಿತಿ, ಪುತ್ರ ಅನಿರುದ್ಧ್, ಸಹೋದರ ಆರ್. ದೀಪಕ್ ಸೇರಿದಂತೆ ಅಪಾರ ಬಂಧು–ಬಳಗ ಹಾಗೂ ಇಲಾಖೆ ಸಹೋದ್ಯೋಗಿಗಳನ್ನು ಅಗಲಿದ್ದಾರೆ. ಬೆಂಗಳೂರಿನ ಬನಶಂಕರಿ ಚಿತಾಗಾರದಲ್ಲಿ ನಾಳೆ (ಡಿ.31) ಬೆಳಗ್ಗೆ ಬ್ರಾಹ್ಮಣ ಸಂಪ್ರದಾಯದಂತೆ ದಿಲೀಪ್ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, ಹಿರಿಯ ಐಪಿಎಸ್ ಅಧಿಕಾರಿಗಳಾದ ಕಮಲ್ ಪಂತ್, ಶರತ್‌ಚಂದ್ರ, ಹಿತೇಂದ್ರ, ಜಿನೇಂದ್ರ ಕಣಗವಿ, ಬಿ.ಆರ್. ರವಿಕಾಂತೇಗೌಡ, ಕೆ.ಟಿ. ಬಾಲಕೃಷ್ಣ ಸೇರಿದಂತೆ ಅಧಿಕಾರಿಗಳು ಇಂದು ಆಸ್ಪತ್ರೆಗೆ ತೆರಳಿ ಅಗಲಿದ ಸಹೋದ್ಯೋಗಿಯ ಪಾರ್ಥೀವ ಶರೀರಕ್ಕೆ ನಮನ ಸಲ್ಲಿಸಿದರು.

ಭಟ್ಕಳ ಉಪವಿಭಾಗದ ಡಿವೈಎಸ್‌ಪಿಯಾಗಿ ಪೊಲೀಸ್ ಇಲಾಖೆಗೆ ಸೇರಿದ್ದ ಆರ್. ದಿಲೀಪ್ ಮಂಗಳೂರಲ್ಲಿ ಡಿವೈಎಸ್‌ಪಿಯಾಗಿ, ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತರಾಗಿ ಸೇವೆ ಸಲ್ಲಿಸಿದ ನಂತರ ಪ್ರಸ್ತುತ ಬೆಂಗಳೂರಿನಲ್ಲಿ ಸಿಐಡಿ ಆರ್ಥಿಕ ಅಪರಾಧ ವಿಭಾಗದ ಡಿಐಜಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನಾಳೆ (ಡಿ.31) ಐಜಿಪಿಯಾಗಿ ಮುಂಬಡ್ತಿ ಹೊಂದಬೇಕಾಗಿದ್ದ ದಿಲೀಪ್ ಇಂದು ವಿಧಿವಶರಾಗಿದ್ದಾರೆ.

ಅಂತರರಾಷ್ಟ್ರೀಯ ಸಮ್ಮೇಳನ

ಮೈಸೂರು, ಡಿ.30– ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಹಾಗೂ ಐಯುಸಿಇಇ ಫೌಂಡೇಷನ್ ಸಹಯೋಗದಲ್ಲಿ 'ಇಂಜಿನಿಯರಿಂಗ್ ಶಿಕ್ಷಣದಲ್ಲಿ ರೂಪಾಂತರಗಳ ಕುರಿತ ಅಂತರರಾಷ್ಟ್ರೀಯ ಸಮ್ಮೇಳನ–2023' ಜನವರಿ 6ರಂದು ಬೆಳಗ್ಗೆ 11ಕ್ಕೆ ಕಾಲೇಜಿನ ಶ್ರೀ ಹೆಚ್.ಕೆಂಪೇಗೌಡ ಕ್ರೀಡಾ ಒಳಾಂಗಣದಲ್ಲಿ ನಡೆಯಲಿದ್ದು, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಭಾಗವಹಿಸಲಿದ್ದಾರೆ. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ವಿಟಿಯು ಕುಲಸಚಿವ ಡಾ.ವಿದ್ಯಾಶಂಕರ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಐದನೇ ಪುಟದಿಂದ

ಒಂದು ಕುಟುಂಬಕ್ಕೆ ATM

ಮಂಡ್ಯ ಮತ್ತು ಮೈಸೂರು ಭಾಗದಿಂದಲೂ ಬಿಜೆಪಿಗೆ ಹೆಚ್ಚಿನ ಸ್ಥಾನಗಳು ಸಿಗಲಿವೆ ಎಂಬ ವಿಶ್ವಾಸ ನನಗಿದೆ. ಮಂಡ್ಯ ಹಾಗೂ ಮೈಸೂರು ಭಾಗದ ಜನರಿಂದ ಮತ ಹಾಕಿಸಿಕೊಂಡ ಕಾಂಗ್ರೆಸ್ ಹಾಗೂ ಜೆಡಿಎಸ್ ಈ ಭಾಗದ ಜನರಿಗೆ ಏನನ್ನೂ ಮಾಡಿಲ್ಲ ಎಂದ ಅವರು, ರೈತರಿಗೆ ಅನುಕೂಲವಾಗುವುದು ಕಾಂಗ್ರೆಸ್‌ಗೆ ಬೇಕಿಲ್ಲ. ಹೀಗಾಗಿ ಅವರು ಅಧಿಕಾರದಲ್ಲಿದ್ದಾಗ ಮೈಷುಗರ್ ಕಾರ್ಖಾನೆಯನ್ನು ಆರಂಭಿಸಿಲ್ಲ. ಬಸವರಾಜ ಬೊಮ್ಮಾಯಿ ಅವರು ಮೈಷುಗರ್ ಕಾರ್ಖಾನೆ ಆರಂಭಿಸಿ, ರೈತರ ನೆರವಿಗೆ ನಿಂತಿದ್ದಾರೆ ಎಂದು ಶ್ಲಾಘಿಸಿದರು. ಮೈಸೂರು ಮತ್ತು ಮಂಡ್ಯ ಭಾಗದ ಜನರು ಬಿಜೆಪಿಯನ್ನು ಬೆಂಬಲಿಸಿದರೆ ಮೋದಿ ನೇತೃತ್ವದ ಡಬಲ್ ಎಂಜಿನ್ ಸರ್ಕಾರ ಈ ಪ್ರದೇಶಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸುತ್ತದೆ ಎಂದರಲ್ಲದೆ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ತಂದದ್ದು ಹಾಗೂ ಮೈಸೂರು ಮತ್ತು ಬೆಂಗಳೂರು ನಡುವೆ ರೈಲ್ವೇ ಡಬ್ಬಲ್ ಟ್ರ್ಯಾಕ್ ಮಾಡಿದ್ದು ಬಿಜೆಪಿ ಸರ್ಕಾರ ಎಂದು ಹೇಳಿದರು.

ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರ್ಪಡೆಗೊಳಿಸುವ ಮೂಲಕ ಲಕ್ಷಾಂತರ ಜನರಿಗೆ ಅನುಕೂಲ ಕಲ್ಪಿಸಿಕೊಟ್ಟಿದ್ದು ಬಿಜೆಪಿ ಸರ್ಕಾರವೇ. ಹೊರತು ಬೇರ್‍ಯಾರೂ ಅಲ್ಲ ಎಂದು ಹೇಳಿದ ಅವರು, ನರೇಂದ್ರ ಮೋದಿಯವರು ರೈತರ ನೆರವಾಗಿ ನಿಂತಿದ್ದಾರೆ. ಕಿಸಾನ್ ಸಮ್ಮಾನ್ ಯೋಜನೆಯಡಿ ತಲಾ 6 ಸಾವಿರ ರೂ.ಗಳನ್ನು ನೀಡಿದರೆ, ಆಗ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರು ಅದಕ್ಕೆ 4 ಸಾವಿರ ಸೇರಿಸಿ ಕರ್ನಾಟಕದ ರೈತರಿಗೆ 10 ಸಾವಿರ ರೂ. ಸಿಗುವಂತೆ ಮಾಡಿದರು ಎಂದರು.

ಸಿದ್ದರಾಮಯ್ಯನವರ ಸರ್ಕಾರ ಪಿಎಫ್‌ಐ ಅನ್ನು ನಿಷೇಧ ಮಾಡಲಿಲ್ಲ, ಬದಲಾಗಿ ಪಿಎಫ್‌ಐ ಮೇಲಿದ್ದ 156 ಕೇಸ್‌ಗಳನ್ನು ವಾಪಸ್ ಪಡೆಯಿತು. ಆದರೆ ನರೇಂದ್ರ ಮೋದಿ ಸರ್ಕಾರ ಪಿಎಫ್‌ಐ ನಿಷೇಧಿಸಿ ಭಯೋತ್ಪಾದನೆಯನ್ನು ತಡೆದಿದೆ ಎಂದರು. ನರೇಂದ್ರ ಮೋದಿ ನೇತೃತ್ವದ ಸರ್ಕಾರ ಸದಾ ಕಾಲ ರೈತರ ಹಾಗೂ ಬಡವರ ಪರ ಇದ್ದು, ದೇಶದ 80 ಕೋಟಿ ಜನರಿಗೆ ತಲಾ 5 ಕೆ.ಜಿ.ಅಕ್ಕಿಯನ್ನು ಕೊಟ್ಟಿದ್ದೇವೆ. ಬಡವರ ಮನೆಗೆ ಬೆಳಕು ನೀಡುವುದರ ಜೊತೆಗೆ ಶೌಚಾಲಯ ನಿರ್ಮಿಸಿ ಅವರಿಗೆ ಗೌರವ ಬದುಕು ಕಲ್ಪಿಸಿಕೊಟ್ಟಿದ್ದೇವೆ. ಕೋವಿಡ್ ಸಂದರ್ಭದಲ್ಲಿ ಲಸಿಕೆ ನೀಡಿ ಜನರ ಪ್ರಾಣ ಉಳಿಸಿದ್ದೇವೆ ಎಂದು ಅವರು ಹೇಳಿದರು. ವೇದಿಕೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಸಚಿವರಾದ ಗೋಪಾಲಯ್ಯ, ಅಶ್ವತ್ಥನಾರಾಯಣ, ಕೆ.ಸಿ.ನಾರಾಯಣಗೌಡ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ನಿರಂಜನಕುಮಾರ್, ಪ್ರೀತಂಗೌಡ, ಎನ್.ಮಹೇಶ್, ಸಿ.ಪಿ.ಯೋಗೇಶ್ವರ್, ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ, ನಿರ್ಮಲ್ ಕುಮಾರ್ ಸುರಾಣ, ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ, ಪಕ್ಷದ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮಾಜಿ ಸಚಿವ ಬಿ.ಸೋಮಶೇಖರ್, ಸ್ಥಳೀಯ ಮುಖಂಡರಾದ ಚಂದಗಾಲು ಶಿವಣ್ಣ, ಕೆ.ಎಸ್.ನಂಜುಂಡೇಗೌಡ, ಡಾ. ಸಿದ್ದರಾಮಯ್ಯ, ಅಶೋಕ್ ಜಯರಾಂ, ಲಕ್ಷ್ಮಿ ಅಶ್ವಿನ್‌ಗೌಡ, ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಡಾ. ಲಿಂಗರಾಜು, ಮುನಿರಾಜು ಉಪಸ್ಥಿತರಿದ್ದರು. ಬಿಜೆಪಿ ರಾಜ್ಯ ವಕ್ತಾರ ಎಂ.ಜಿ. ಮಹೇಶ್ ಅವರು ಅಮಿತ್ ಷಾ ಭಾಷಣವನ್ನು ಭಾಷಾಂತರ ಮಾಡಿದರು.

ಕೊರೊನಾದಿಂದಾಗಿ ಎಡರು–ತೊಡರು

ವಿದ್ಯುತ್ ದೀಪಾಲಂಕಾರವಿರಲಿದೆ. ರಾತ್ರಿ 11ರಿಂದ 12 ಗಂಟೆವರೆಗೆ ಕರ್ನಾಟಕ ಪೊಲೀಸ್ ವಾದ್ಯಗೋಷ್ಠಿ ಮೂಲಕ ಕರ್ನಾಟಕ ಹಾಗೂ ಇಂಗ್ಲಿಷ್ ವಾದ್ಯ ಸಂಗೀತ ಮೊಳಗಲಿದೆ. ಮಧ್ಯರಾತ್ರಿ 12ರಿಂದ 12.15ರವರೆಗೆ ಶಬ್ದರಹಿತ ಬಾಣ ಬಿರುಸುಗಳ ಚಿತ್ತಾರ ಮೂಡಿಸುವ ಮೂಲಕ ಹೊಸ ವರ್ಷವನ್ನು ಸ್ವಾಗತಿಸಲಾಗುತ್ತದೆ. ರಾತ್ರಿ 11ರಿಂದ 12.15ರವರೆಗೂ ಅರಮನೆ ದೀಪಾಲಂಕಾರವಿರಲಿದೆ ಎಂದು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ ತಿಳಿಸಿದ್ದಾರೆ.

ಮೋಜು–ಮಸ್ತಿಗೆ ಬ್ರೇಕ್: ಮೈಸೂರಿನ ಹತ್ತಾರು ಹೋಟೆಲ್‌ಗಳಲ್ಲಿ ಡಿ.31ರಂದು ಅಬ್ಬರದ ಡಿಜೆ, ಫ್ಯಾಷನ್ ಶೋ, ಸಂಗೀತ–ನೃತ್ಯ ಹೀಗೆ ವೈವಿಧ್ಯಮಯ ಕಾರ್ಯಕ್ರಮ ಆಯೋಜಿಸಿ ಗ್ರಾಹಕರನ್ನು ಸೆಳೆಯಲಾಗುತ್ತಿತ್ತು. ಒಬ್ಬರಿಗೆ, ಜೋಡಿಗೆ, ಮಕ್ಕಳಿಗೆ ಪ್ರತ್ಯೇಕ ದರ ನಿಗದಿಪಡಿಸಿ ಅಮೋಘ ಮನರಂಜನೆ ಉಣಬಡಿಸಲಾಗುತ್ತಿತ್ತು. ಆದರೆ ಈ ಬಾರಿಗೆ ಡಿಜೆಗೆ ಅವಕಾಶವಿಲ್ಲ. ಸರ್ಕಾರ ನಿಗದಿಗೊಳಿಸಿರುವ ಡೆಸಿಬಲ್ ಮೀರದಂತೆ ಬಾಕ್ಸ್ ಮಾದರಿ ಧ್ವನಿವರ್ಧಕವನ್ನು ಮಾತ್ರ ಬಳಸಬಹುದು, 60 ವರ್ಷ ಮೇಲ್ಪಟ್ಟವರು, ಗರ್ಭಿಣಿಯರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು, ಹೀಗೆ ಹತ್ತಾರು ಮಾರ್ಗಸೂಚಿಗಳನ್ನು ಅನುಸರಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ವರ್ಷಾಂತ್ಯ ದಿನದಂದು ಕೆಲವೇ ಹೋಟೆಲ್ ಹಾಗೂ ಕ್ಲಬ್‌ಗಳಲ್ಲಿ ಪಾರ್ಟಿ ಆಯೋಜನೆ ಮಾಡಲಾಗಿದೆ. ಇದ್ದಿದ್ದರಂತೆ ಹೋಟೆಲ್‌ಗಳಲ್ಲಿ ಉಳಿದುಕೊಂಡಿರುವ ಗ್ರಾಹಕರಿಗೆ ಸೀಮಿತವಾಗಿ ಸರಳವಾಗಿ ಪಾರ್ಟಿ ಏರ್ಪಡಿಸಲಾಗುತ್ತಿದೆ.

ಗ್ರಾಹಕರ ನಿರಾಸಕ್ತಿ: ಕೆಲ ಹೋಟೆಲ್ ಹಾಗೂ ಕ್ಲಬ್‌ಗಳಲ್ಲಿ ಹೊಸ ವರ್ಷದ ಪಾರ್ಟಿ ಆಯೋಜನೆ ಮಾಡಲಾಗಿದೆ. ಆದರೆ ಡಿಜೆ ಇಲ್ಲದ ಕಾರಣ ಗ್ರಾಹಕರು ನಿರಾಸಕ್ತಿ ತೋರುತ್ತಿದ್ದಾರೆ. ಕೆಲ ಹೋಟೆಲ್ ಹಾಗೂ ಕ್ಲಬ್‌ಗಳಲ್ಲಿ ಕಾರ್ಯಕ್ರಮ ಆಯೋಜನೆಗೆ ಸಿದ್ಧತೆ ಮಾಡಿಕೊಂಡು ನಂತರದಲ್ಲಿ ರದ್ದು ಮಾಡಲಾಗಿದೆ. ಹೊಸ ವರ್ಷದ ಪಾರ್ಟಿಯಲ್ಲಿ ಮಾಸ್ಕ್ ಧರಿಸುವಂತೆ ಗ್ರಾಹಕರಿಗೆ ಒಪ್ಪಿಸುವುದು ಕಷ್ಟ ಎಂಬ ಕಾರಣಕ್ಕೆ ಹಲವಾರು ಕಾರ್ಯಕ್ರಮ ಆಯೋಜಿಸುವ ಪ್ರಯತ್ನವನ್ನೇ ನಡೆಸಿಲ್ಲ. ಕೆಲವೆಡೆ ಮನರಂಜನೆ ಕಾರ್ಯಕ್ರಮ ಏರ್ಪಡಿಸಿದ್ದರೂ ಕೇವಲ ಶೇ.50ರಷ್ಟು ಬುಕ್ಕಿಂಗ್ ಆಗಿದೆ ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದರು.

ಮನೆ–ತೋಟದಲ್ಲಿ ಪಾರ್ಟಿ: ಹೋಟೆಲ್‌ಗಳಲ್ಲಿ ಡಿಜೆ ಇರುವುದಿಲ್ಲ, ರಾತ್ರಿ 1 ಗಂಟೆವರೆಗೆ ಹೊಸ ವರ್ಷ ಸಂಭ್ರಮಾಚರಣೆಗೆ ಅವಕಾಶವಿದ್ದರೂ ಪೊಲೀಸರು ಎಲ್ಲೆಡೆ ಹದ್ದಿನ ಕಣ್ಣಿಟ್ಟಿರುತ್ತಾರೆ. ಡ್ರಿಂಕ್ ಅಂಡ್ ಡ್ರೈವ್ ಪ್ರಕರಣ ದಾಖಲಿಸಿದರೆ ವಾಹನ ಬಿಡಿಸಿಕೊಳ್ಳಲು ನ್ಯಾಯಾಲಯಕ್ಕೆ ಹೋಗಿ ದಂಡ ಪಾವತಿಸಬೇಕಾಗುತ್ತದೆ. ಸ್ವಲ್ಪ ಯಾಮಾರಿದರೂ ಪೊಲೀಸರ ಲಾಠಿ ರುಚಿ ಗ್ಯಾರಂಟಿ ಎಂದು ಯುವಕರು ತಾವೇ ಒಂದೆಡೆ ಪಾರ್ಟಿ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಮನೆ ಅಥವಾ ಮೈಸೂರು ಹೊರವಲಯದಲ್ಲಿರುವ ತೋಟದ ಮನೆಗಳಲ್ಲಿ ಬಗೆ ಬಗೆಯ ಖಾದ್ಯ ಸಿದ್ಧಪಡಿಸಿಕೊಂಡು ರಾತ್ರಿ 12ಕ್ಕೆ ಕುಣಿದು ಕುಪ್ಪಳಿಸಲು ಯೋಜನೆ ಮಾಡಿಕೊಳ್ಳುತ್ತಿದ್ದಾರೆ. ಮತ್ತಷ್ಟು ಮಂದಿ ಗೌರವದಿಂದ ಮನೆಯಲ್ಲೇ ಕೇಕ್ ಕತ್ತರಿಸಿ ಹೊಸ ವರ್ಷಾಚರಣೆ ಮಾಡುವುದೇ ಸರಿ ಎಂಬ ನಿರ್ಧಾರಕ್ಕೆ ಬಂದಂತಿದೆ.

ಪೊಲೀಸರ ಕಟ್ಟೆಚ್ಚರ: ಶುಭಾಶಯ ಕೋರುವ ನೆಪದಲ್ಲಿ ಕೀಟಲೆ ಮಾಡುವುದು, ಅಸಭ್ಯವಾಗಿ ವರ್ತಿಸುವವರು, ಕರ್ಕಶ ಶಬ್ದ ಕಾರುವ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ಓಡಾಡಿಸುವುದು, ವ್ಹೀಲಿಂಗ್, ರೇಸ್ ಮಾಡುವುದು, ಕಂಡಕಂಡಲ್ಲಿ ಕುಡಿದು, ಕುಣಿದು ಕುಪ್ಪಳಿಸುವುದು, ರಸ್ತೆಯಲ್ಲೆಲ್ಲಾ ಕಿರುಚಾಡಿಕೊಂಡು ಓಡಾಡುವುದು ಹೀಗೆ ಸಾರ್ವಜನಿಕರಿಗೆ ತೊಂದರೆಯಾಗುವಂತೆ ವರ್ತಿಸುವವರಿಗೆ ಬಿಸಿ ಮುಟ್ಟಿಸಲು ಪೊಲೀಸರು ಸಜ್ಜಾಗಿದ್ದಾರೆ. ಈ ನಿಟ್ಟಿನಲ್ಲಿ ಮಹಿಳಾ ಸಿಬ್ಬಂದಿಗಳ ಕಾರ್ಯಪಡೆ ಸೇರಿದಂತೆ 35ಕ್ಕೂ ಹೆಚ್ಚು ವಿಶೇಷ ತಂಡಗಳಲ್ಲಿ ರಚಿಸಲಾಗಿದೆ. ರಿಂಗ್‌ರಸ್ತೆಯಲ್ಲಿ ನಿರಂತರ ಗಸ್ತಿಗೆ ಸಿಬ್ಬಂದಿ ನಿಯೋಜಿಸಲಾಗಿದೆ. ಸಿಸಿಟಿವಿ ಕ್ಯಾಮರಾಗಳನ್ನು ಸುಸ್ಥಿತಿಯಲ್ಲಿಡಲಾಗಿದೆ. ನಗರದ ಹೃದಯ ಭಾಗದಲ್ಲಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಈ ಸಂಬಂಧ ನಗರ ಪೊಲೀಸ್ ಆಯುಕ್ತರ ಸೂಚನೆ ಮೇರೆಗೆ ಇಂದು ಡಿಸಿಪಿಗಳ ನೇತೃತ್ವದಲ್ಲಿ ಎಲ್ಲಾ ಠಾಣೆಗಳ ಅಧಿಕಾರಿಗಳ ಸಭೆ ನಡೆಸಿ, ಬಂದೋಬಸ್ತ್ ಬಗ್ಗೆ ನಿರ್ಧರಿಸಿಕೊಳ್ಳಲಾಗಿದೆ.

ರಿಷಬ್ ಪಂತ್‌ಗೆ ಗಂಭೀರ ಗಾಯ

ಕಾರಿನಲ್ಲಿ ಬೆಂಕಿ ಹೊತ್ತಿಕೊಂಡಿದೆ ಎಂದು ವರದಿಯಾಗಿದೆ. ರಿಷಭ್ ಅವರನ್ನು ದೆಹಲಿಯ ಏಮ್ಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಅಲ್ಲಿ ಅವರಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಲಾಗುತ್ತದೆ. ವೈದ್ಯರ ಪ್ರಕಾರ, ರಿಷಬ್ ಪಂತ್ ಅವರ ಹಣೆ ಮತ್ತು ಕಾಲಿಗೆ ಗಾಯಗಳಾಗಿವೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ರಿಷಬ್ ಅವರ ಕಾರು ರೇಲಿಂಗ್‌ಗೆ ಡಿಕ್ಕಿ ಹೊಡೆದ ನಂತರ ಬೆಂಕಿ ಹೊತ್ತಿಕೊಂಡಿದೆ. ಬಹಳ ಕಷ್ಟಪಟ್ಟು ಬೆಂಕಿಯನ್ನು ಹತೋಟಿಗೆ ತರಲಾಗಿದೆ.

35 ರಿಂದ 37 ಪೈಸೆ ವಿದ್ಯುತ್ ದರ ಕಡಿತ

ಹೊಂದಾಣಿಕೆ ವೆಚ್ಚ ಕಡಿತ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಉನ್ನತ ಮೂಲಗಳ ಪ್ರಕಾರ ರಾಜ್ಯದ ಎಲ್ಲಾ ಗ್ರಾಹಕರಿಗೂ ಪ್ರತಿ ಯುನಿಟ್‌ಗೆ ಒಂದು ರೂ. ದರ ಇಳಿಸುವ ತೀರ್ಮಾನ ಕೈಗೊಂಡಿದ್ದು, ಅದು ಯಾವುದೇ ಸಂದರ್ಭದಲ್ಲಿ ಹೊರ ಬೀಳಲಿದೆಯಂತೆ.

ಬೆಸ್ಕಾಂ, ಮೆಸ್ಕಾಂ ಕಂಪನಿಗಳು ಲಾಭದಾಯಕವಾಗಿ ನಷ್ಟದಿಂದ ದೂರ ಸರಿದಿವೆ. ಉಳಿದ ಮೂರು ಕಂಪನಿಗಳು ನಷ್ಟದಲ್ಲಿ ಮುಂದುವರೆಯುತ್ತಿರುವುದರಿಂದ ವಿದ್ಯುತ್ ಹೊಂದಾಣಿಕೆ ವೆಚ್ಚ ಕಡಿತ ಮಾಡಲಾಗಿಲ್ಲ ಎಂದು ಸಚಿವರು ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ.

ಈಗಾಗಿರುವ ತಾರತಮ್ಯವನ್ನು ಕೆಲವೇ ದಿನಗಳಲ್ಲಿ ಸರಿಪಡಿಸುವುದಾಗಿ ಹೇಳಿಕೊಂಡಿದ್ದರೂ, ಐದು ಕಂಪನಿಗಳು ಮಾತ್ರ ಲಾಭಗಳಿಸುತ್ತಿರುವ ನಷ್ಟವನ್ನು ಭರಿಸಲು ಪ್ರತಿ ಯುನಿಟ್‌ಗೆ 1 ರೂ. 47 ಪೈಸೆ ಹೆಚ್ಚು ಮಾಡುವಂತೆ ಕೆಇಆರ್‌ಸಿಗೆ ಮನವಿ ಮಾಡಿಕೊಂಡಿವೆ.

ಕಳೆದ ಒಂದು ವರ್ಷದಲ್ಲಿ ಪ್ರತಿ ಯುನಿಟ್‌ಗೆ ಎರಡು ರೂ. ದರ ಹೆಚ್ಚಳ ಮಾಡಿರುವ ಕಂಪನಿಗಳು ಮತ್ತೆ ಒಂದು ರೂ. 47 ಪೈಸೆ ಹೆಚ್ಚಳಕ್ಕೆ ಬೇಡಿಕೆ ಇಟ್ಟಿವೆ. ಗ್ರಾಹಕರ ಬೇಡಿಕೆಗಿಂತ ಶೇಕಡ 50ರಷ್ಟು ಹೆಚ್ಚು ವಿದ್ಯುತ್ ಉತ್ಪಾದನೆ ರಾಜ್ಯದಲ್ಲಾಗುತ್ತಿದ್ದರೂ, ಸರ್ಕಾರ ವಿದ್ಯುತ್ ದರವನ್ನು ನಿರಂತರವಾಗಿ ಹೆಚ್ಚಳ ಮಾಡುತ್ತಿದೆ.

ಯಡಿಯೂರಪ್ಪ ಸಿಂಗಾಪೂರ್‌ಗೆ ಹಾರಿದರು

ನಿವೃತ್ತಿ ಘೋಷಣೆ ಮಾಡಿದರು. ಪುತ್ರನಿಗೆ ಮೇಲೆಯೇರಬೇಕಾದ ಅವಕಾಶಗಳನ್ನು ವಂಚಿಸಲಾಗುತ್ತಿದೆ ಎಂಬ ಕೊರಗು ಅವರಿಗಿದೆ. ಇದೇ ಕಾರಣಕ್ಕೆ ಅವರು ಅಮಿತ್ ಷಾ ಕರೆದಿರುವ ಸಭೆಯಿಂದ ದೂರ ಉಳಿದಿದ್ದಾರೆ ಎನ್ನಲಾಗಿದೆ. ಬೆಳಗಾವಿಯಲ್ಲಿ ನಡೆದ ವಿಧಾನಸಭೆಯ ಅಧಿವೇಶನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಯಡಿಯೂರಪ್ಪ ಅವರು, ಕೇಂದ್ರ ಗೃಹ ಸಚಿವರು ರಾಜ್ಯಕ್ಕೆ ಬರುವ ದಿನವೇ ಸಿಂಗಾಪೂರಕ್ಕೆ ತೆರಳಿದ್ದಾರೆ.

ಬೆಂಗಳೂರಿನಿಂದ ಧಾವಿಸಿದ ಬಳಿಕ ಸಿಂಗಾಪೂರಕ್ಕೆ ತೆರಳುವ ದಿನವೇ ತಮ್ಮ ಕುಟುಂಬವರೊಟ್ಟಿಗೆ ಹೊಸ ವರ್ಷಾಚರಣೆ ಮಾಡಲು ವಿದೇಶಿ ಪ್ರವಾಸ ಕೈಗೊಂಡಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಕೆ-ಸೆಟ್

ಮೈಸೂರು ವಿವಿ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಕೆಲವರ ಆಕ್ಷೇಪ

ಆರೋಪ ಕೇಳಿಬಂದ ತಕ್ಷಣ ಸ್ಪಷ್ಟನೆ ನೀಡದ ವಿವಿ ಆಡಳಿತ ವ್ಯವಸ್ಥೆ ಬಗ್ಗೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಸೇರಿದಂತೆ ಹಲವರ ಅಸಮಾಧಾನ



ಮೈಸೂರು, ಡಿ.30(ಆರ್‌ಕೆ)–ಕರ್ನಾಟಕ ಪರೀಕ್ಷಾ ಪ್ರಾಧಿಕಾರ(KEA)ದ ಮೂಲಕ ಕೆ–ಸೆಟ್ ನಡೆಸಲು ಸರ್ಕಾರ ನಿರ್ಧರಿಸಿರುವುದಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಪ್ರೊ. ಹೆಚ್.ರಾಜಶೇಖರ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ–ಸೆಟ್)ಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA)ದ ಮೂಲಕ ನಡೆಸಲು ನಿರ್ಧರಿಸಿರುವುದರಿಂದ ಶತಮಾನದ ಇತಿಹಾಸ ವಿರುವ ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ಉಂಟಾಗಿದೆ ಎಂದು ಸದಸ್ಯರು ಅಭಿಪ್ರಾಯಪಟ್ಟರು.

ಆ ವಿಷಯದ ಸಂಬಂಧ ತಕ್ಷಣ ಪತ್ರಿಕಾ ಪ್ರಕಟಣೆ ಮೂಲಕ ಸ್ಪಷ್ಟನೆ ನೀಡದಿರುವುದರಿಂದ ಈ ಬೆಳವಣಿಗೆ ಯಾಗಿದೆ. ಅದರಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕೆಟ್ಟ ಹೆಸರು ಬಂದಿದೆ ಎಂದ ಸದಸ್ಯ ಶಶಿಕುಮಾರ್, ಸಂಸದ ಪ್ರತಾಪ್ ಸಿಂಹ ಅವರು ಮಾಡಿದ ಆರೋಪಕ್ಕೆ ಕುಲಪತಿಗಳು ತಕ್ಷಣ ಸ್ಪಷ್ಟನೆ ನೀಡಬೇಕಿತ್ತು ಎಂದರು.

ಆರೋಪ ಮಾಡಿದ ಸಂಸದರಿಗೆ ನಾನು ಸ್ಪಷ್ಟನೆ ಕಳುಹಿಸಿದ್ದೆ ಎಂಬ ಪ್ರೊ ರಾಜಶೇಖರ ಉತ್ತರದಿಂದ ತೃಪ್ತರಾಗದ ಶಶಿಕುಮಾರ್, ಪತ್ರಿಕಾ ಹೇಳಿಕೆ ಏಕೆ ಕೊಡಲಿಲ್ಲ ಎಂದು ಪ್ರಶ್ನಿಸಿದರು. ಕೆ–ಸೆಟ್ ಸಂಬಂಧ ವಿಚಾರಣೆ ನಡೆಯುತ್ತಿರುವುದರಿಂದ ಈ ವಿಷಯದ ಬಗ್ಗೆ ಚರ್ಚಿಸುವುದು ಸರಿಯೇ ಎಂದು ಕೆಲ ಸದಸ್ಯರು ಪ್ರಶ್ನಿಸಿದರು. ಈ ಕುರಿತು ಆಕ್ಷೇಪ ಎತ್ತಿದ ವಿಜ್ಞಾನ ನಿಕಾಯದ ಡೀನ್ ಪ್ರೊ. ಬಸವರಾಜು, ಈ ಹಿಂದೆ ಕೆ–ಸೆಟ್ ಸಂಯೋಜಕರಾಗಿದ್ದು, ಅದರಲ್ಲಿ ಅಕ್ರಮ ನಡೆದ ಆರೋಪ ಎದುರಿಸುತ್ತಿರುವ ಪ್ರಭಾರ ಕುಲಪತಿ ಪ್ರೊ. ರಾಜಶೇಖರ್ ಅಧ್ಯಕ್ಷತೆಯಲ್ಲಿ ಸಭೆ ನಡೆಸುವುದು ಸೂಕ್ತವೇ ಎಂದು ಪ್ರಶ್ನಿಸಿದರಾದರೂ, ಅದು ಆರೋಪವಷ್ಟೇ, ಅವರು ಅಪರಾಧಿಯಲ್ಲ. ನ್ಯಾಯಾಲಯದಲ್ಲಿ ಅದು ತೀರ್ಮಾನವಾಗಲಿ ಎಂದು ಎಂಎಲ್‌ಸಿ ಸಿ.ಎನ್.ಮಂಜೇಗೌಡ ತಿಳಿಸಿದರು.

15 ವರ್ಷ ನಿರಂತರ ಸೇವೆ ಸಲ್ಲಿಸಿರುವ ಹಂಗಾಮಿ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಶೈಕ್ಷಣಿಕ ಮಂಡಳಿ ಸಭೆಯು ಒಪ್ಪಿಗೆ ನೀಡಿತು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕೊರತೆ ಎದುರಿಸುತ್ತಿರುವ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ಸದಸ್ಯರು, ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯುವಂತೆ ಸಲಹೆ ನೀಡಿದರು.

ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಸಂಬಂಧ ನಿಯಮಾವಳಿಗೆ ಅನುಮೋದನೆಗಾಗಿ ಮಂಡಿಸಿದಾಗ ಪ್ರತಿಕ್ರಿಯಿಸಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಈ ವಿಷಯಕ್ಕೆ ಒಪ್ಪಿಗೆ ನೀಡಿದರೆ ನನ್ನದೇನೂ ಅಭ್ಯಂತರವಿಲ್ಲ. ನೇಮಕಾತಿ ಯಾರು ಮಾಡುತ್ತಾರೆ, 15 ವರ್ಷಗಳಿಂದ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರ ಖಾಯಂಗೆ ನ್ಯಾಯಾಲಯ ಆದೇಶ ಮಾಡಿದೆಯೇ, ಏನು ಕ್ರಮ ಜರುಗಿಸಲಾಗಿದೆ ಎಂದು ಪ್ರಶ್ನಿಸಿದರು.

ಇದಕ್ಕೆ ಧ್ವನಿಗೂಡಿಸಿದ ಪ್ರೊ. ಹೆಚ್.ಟಿ.ಬಸವರಾಜಪ್ಪ 30 ಮಂದಿಯನ್ನು ಖಾಯಂಗೊಳಿಸುವಂತೆ ನ್ಯಾಯಾಲಯ ಹೇಳಿದೆ. ಈ ಬಗ್ಗೆ ಸರ್ಕಾರ ನಿರ್ಧರಿಸಬೇಕು ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಪ್ರಭಾರ ಕುಲಪತಿಗಳು, ಯುಜಿಸಿ ನಿಯಮಾವಳಿಯಂತೆ ಸರ್ಕಾರ ಸಹಾಯಕ ಪ್ರಾಧ್ಯಾಪಕರನ್ನು ನೇಮಕ ಮಾಡುತ್ತದೆ. ಕೋರ್ಟ್ ಆದೇಶವಿದ್ದರೂ, ಖಾಯಮಾತಿ ಬಗ್ಗೆ ಸರ್ಕಾರ ತೀರ್ಮಾನ ಕೈಗೊಳ್ಳಬೇಕು ಎಂದರು.

ಈ ಸಂಬಂಧ ಮಾತನಾಡಿದ ಸಿ.ಎನ್.ಮಂಜೇಗೌಡ, ನಾವೂ ಸಹ ವಿಧಾನ ಪರಿಷತ್ ಮತ್ತು ವಿಧಾನಸಭೆಯಲ್ಲಿ ನೊಂದವರ ಪರ ಮಾತನಾಡುತ್ತೇವೆ. ಹೊಸಬರ ನೇಮಕದ ಜೊತೆಗೆ ಹಳಬರಿಗೂ ಅವಕಾಶ ನೀಡಬೇಕು ಎಂದು ಸಲಹೆ ನೀಡಿದರು. ಸಭೆಯ ಅಭಿಪ್ರಾಯವನ್ನು ಸರ್ಕಾರದ ಗಮನಕ್ಕೆ ತರುತ್ತೇವೆ ಎಂದು ಪ್ರಭಾರ ಕುಲಪತಿ ಪ್ರೊ. ರಾಜಶೇಖರ್ ನುಡಿದರು. ಕುಲಸಚಿವರಾದ ಡಾ. ವಿ.ಆರ್.ಶೈಲಜಾ, ಪರೀಕ್ಷಾಂಗ ಕುಲಸಚಿವ ಡಾ. ಜ್ಞಾನಪ್ರಕಾಶ್, ಹಣಕಾಸು ಅಧಿಕಾರಿ ಸಂಗೀತ ಗಜಾನನ ಭಟ್ ಹಾಗೂ ಇತರರು ಸಭೆಯಲ್ಲಿ ಹಾಜರಿದ್ದರು.

ಮೈಸೂರಲ್ಲಿ ನಾಳೆ 'ಭೀಮಾ ಕೋರೆಗಾಂವ್' 205ನೇ ವರ್ಷದ ಸಂಭ್ರಮಾಚರಣೆ



ಮೈಸೂರು, ಡಿ.30(ಆರ್‌ಕೆಬಿ)– ಅಶೋಕಪುರಂ ಜೈಭೀಮ್ ಸ್ಪೋರ್ಟ್ಸ್ ಕ್ಲಬ್, ಡ್ರೀಮ್ ಬಾಯ್ಸ್ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ಜ.1ರಂದು ಸಂಜೆ 6 ಗಂಟೆಗೆ ಮೈಸೂರಿನ ಜಯ ನಗರ ರೈಲ್ವೆ ಗೇಟ್ ಬಳಿ ಭೀಮಾ ಕೋರೆಗಾಂವ್ 205ನೇ ವರ್ಷದ ಸಂಭ್ರಮಾಚರಣೆ ಹಾಗೂ ವಾರ್ಷಿಕೋತ್ಸವ, ದಲಿತರ ಸ್ವಾಭಿಮಾನ ಜಾಗೃತಿ ದಿನವಾಗಿ ಆಚರಿಸಲಾಗುವುದು ಎಂದು ಸಮಿತಿ ಅಧ್ಯಕ್ಷ ಜಯರಾಜ್ ಹೆಗ್ಡೆ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ನಳಂದ ಬೌದ್ಧ ವಿಶ್ವ ವಿದ್ಯಾನಿಲಯದ ಭೋದಿದತ್ತ ಬಂತೇಜಿ, ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಸಮ್ಮುಖದಲ್ಲಿ ಚಲನಚಿತ್ರ ನಟ ಪ್ರಕಾಶ್ ರಾಜ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಚಿಂತಕ ಪ್ರೊ.ಕಾಳೇಗೌಡ ನಾಗವಾರ ಅಧ್ಯಕ್ಷತೆ ವಹಿಸುವರು. ವಿಮರ್ಶಕ ಪ್ರೊ.ಓ.ಎಲ್. ನಾಗಭೂಷಣಸ್ವಾಮಿ ಮುಖ್ಯ ಭಾಷಣ ಮಾಡುವರು. ಮಾಜಿ ಮೇಯರ್ ಪುರುಷೋತ್ತಮ್, ರಂಗಕರ್ಮಿ ಹೆಚ್.ಜನಾರ್ಧನ್ (ಜನ್ನಿ), ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ ಇನ್ನಿತರರು ಭಾಗವಹಿಸುವರು ಎಂದರು.

ವಕೀಲರ ಸಂಘದ ಕಾರ್ಯದರ್ಶಿ ಎಸ್.ಉಮೇಶ್ ಮಾತನಾಡಿ, 1818ರಲ್ಲಿ ಸಾಮಾಜಿಕವಾಗಿ ತುಳಿತಕ್ಕೊಳಗಾಗಿ ತಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾದ ಸೇಡಿಗೆ ಪಣತೊಟ್ಟಿದ್ದ ಮಹರರು ಪೇಶ್ವೆಗಳ ವಿರುದ್ಧ ಯುದ್ಧಕ್ಕೆ ಸಜ್ಜಾಗುತ್ತಿದ್ದರು. ಸತತ 47 ಕಿ.ಮೀ. ದೂರವನ್ನು ಬೆಳಗಾಗು ವುದರೊಳಗಾಗಿ ಅನ್ನ, ನೀರಿಲ್ಲದೆ ನಡೆದು, 1–1–1888 ರಂದು ಭೀಮ ನದಿ ತೀರದ ಕೋರೆಗಾಂವ್ ಎಂಬ ಸ್ಥಳದಲ್ಲಿ ಬೀಡು ಬಿಟ್ಟಿದ್ದ ಪೇಶ್ವೆಗಳ ಸುಮಾರು 28 ಸಾವಿರ ದಷ್ಟು ಬೃಹತ್ ಸೈನ್ಯವನ್ನು ಎದುರಿಸಿ 500 ಮಹರ್ ಸೈನಿಕರು, 270 ಕುದುರೆ ಸವಾರರು, 24 ಮಂದಿ ತೋಪು ಹಾರಿಸುವವರ ಚಿಕ್ಕ ಸೈನ್ಯ, ತಮ್ಮ ಪ್ರಾಣವನ್ನು ಲೆಕ್ಕಿಸದೆ ಪೇಶ್ವೆಗಳ ದೊಡ್ಡ ಸೈನ್ಯದ ಮುಂದೆ ಎದೆಗುಂದದೆ ವೀರ ಪರಾಕ್ರಮ ದಿಂದ ಹೋರಾಡಿ 28 ಸಾವಿರದಷ್ಟಿದ್ದ ಪೇಶ್ವೆಯ ಸೈನಿಕರನ್ನು ಕತ್ತಲಾಗುವುದರೊಳಗೆ ವೀರಾವೇಷದಿಂದ ಹೋರಾಡಿ ಮಣಿಸಿ, ಅತ್ಯದ್ಭುತ ವಿಜಯ ಸಾಧಿಸಿದರು. ಅದರ ಫಲವೇ ಮಹಾರಾಷ್ಟ್ರದ ಪುಣೆ ಜಿಲ್ಲೆ ಭೀಮಾ ನದಿ ದಡದ ಕೋರೆಗಾಂವ್ ಎಂಬಲ್ಲಿ ಬೃಹತ್ ವಿಜಯಸ್ತಂಭ ಸ್ಥಾಪನೆಯಾಯಿತು. ಈ ಇತಿಹಾಸವನ್ನು ಹೆಕ್ಕಿ ತೆಗೆದು ತಿಳಿಸಿದವರು ಡಾ.ಬಿ.ಆರ್. ಅಂಬೇಡ್ಕರ್./ ನಂತರ ಅವರೇ ಮುಂದೆ ನಿಂತು ವಿಜಯಸ್ತಂಭಕ್ಕೆ ಗೌರವ ಸೂಚಿಸುವ ವಾಡಿಕೆಯನ್ನು ಆಚರಣೆಗೆ ತಂದರು. ಆ ದಿನವನ್ನು ಭೀಮಾ ಕೋರೆಗಾಂವ್ ದಿನವಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪದಾಧಿಕಾರಿಗಳಾದ ರವಿಕುಮಾರ್, ರವಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ನಿವೇದಿತನಗರದ ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಸಂಘದ ಕಚೇರಿಯಲ್ಲಿ ಶುಕ್ರವಾರ ಬಿಡುಗಡೆಗೊಳಿಸಲಾಯಿತು. ಈ ವೇಳೆ ಮಂದನೆರವಂಡ ನಾಣಯ್ಯ, ಕುಟ್ಟಿಮಡ ಕಾರ್ಯಪ್ಪ, ಪಾಲಂದಿರ ಸೋಮಣ್ಣ, ಮಲ್ಚಿರ ಪೊನ್ನಪ್ಪ, ಕಾಳಿಮಡ ನಾಣಯ್ಯ, ಬೊಳ್ಳೆಪಂಡ ನಂಜಪ್ಪ ತಂಬುಕುತ್ತಿರ ಪಾವನ ಹಾಜರಿದ್ದರು.



ಮೈಸೂರಿನ ಹುಯಿಲಾಳು ಗ್ರಾಮದ ಶ್ರೀ ಮನೆಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರನ್ನು ಟ್ರಸ್ಟ್‌ನ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಮಾಜ ಸೇವಕ ಲೀಲಾಧರ್, ಅಂತಾರಾಷ್ಟ್ರೀಯ ಕ್ರೀಡಾಪಟು ಎಂ. ಯೋಗೇಂದ್ರ, ತೆಲುಗು ರೆಡ್ಡಿ ಸಂಘದ ಕಾರ್ಯದರ್ಶಿ ಹರೀಶ್ ರೆಡ್ಡಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಮೈಸೂರು ತಾಲೂಕು ಸಂಚಾಲಕರಾದ ಚೆಟ್ಟಿಹುಂಡಿ ರಾಚಪ್ಪ, ಪುನೀತ್, ದೀಪು ಇನ್ನಿತರರು ಹಾಜರಿದ್ದರು.

ಮೈಸೂರಲ್ಲಿ ಡಾ. ವಿಷ್ಣುವರ್ಧನ್ ಪುಣ್ಯಸ್ಮರಣೆ

ಹೃದಯವಂತ ವಿಷ್ಣು ಕಿರಿಯ ನಟರಿಗೆ ಮಾದರಿ



ಮೈಸೂರು,ಡಿ.30(ಎಂಟಿವೈ)– ಕನ್ನಡ ಚಲನಚಿತ್ರರಂಗ ಕಂಡ ಅತ್ಯಂತ ಶ್ರೇಷ್ಠ ನಟರಲ್ಲಿ ಒಬ್ಬರಾಗಿರುವ ಡಾ.ವಿಷ್ಣುವರ್ಧನ್, ಕನ್ನಡ ನಾಡು–ನುಡಿ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಹೃದಯವಂತರು ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಬಣ್ಣಿಸಿದ್ದಾರೆ.

ಮೈಸೂರು ಅರಮನೆಯ ಉತ್ತರ ದ್ವಾರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ವಿಷ್ಣುಸೇನಾ ಸಮಿತಿ ವತಿಯಿಂದ ಡಾ.ವಿಷ್ಣುವರ್ಧನ್ ಅವರ 13ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ವಿಷ್ಣುವರ್ಧನ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಯುವಜನರಲ್ಲಿ ಭಾಷಾಭಿಮಾನ ಮತ್ತು ದೇಶಾಭಿಮಾನ ಮೂಡಿಸುವಂತಹ ಸದಭಿರುಚಿ ಚಿತ್ರಗಳಲ್ಲಿ ನಟಿಸಿ ಜನಮನ್ನಣೆ ಗಳಿಸಿದ್ದ ಅವರ ಜೀವನ ಕಿರಿಯ ನಟರಿಗೆ ಮಾದರಿ ಎಂದರು.

ಚಿತ್ರ ನಿರ್ಮಾಪಕರು ಹಾಗೂ ಮಾಜಿ ನಗರ ಪಾಲಿಕೆ ಸದಸ್ಯರಾದ ಎಂ.ಡಿ. ಪಾರ್ಥಸಾರಥಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮೇಲು ಕೋಟೆ ವಂಗೀಪುರದ ಇಳೈ ಆಳ್ವಾರ್ ಸ್ವಾಮೀಜಿ, ಪಾಲಿಕೆ ಸದಸ್ಯ ಸತೀಶ್, ವಿಷ್ಣು ಸೇನಾ ಸಮಿತಿ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ, ಮುಖಂಡರಾದ ವಿಕ್ರಂ ಅಯ್ಯಂಗಾರ್, ಎಸ್.ಎನ್. ರಾಜೇಶ್, ಬ್ರಹ್ಮಚಾರ್, ನವೀನ್, ದೀಪಕ್, ಮಹದೇವ್, ಕುಮಾರ್, ಬಸವರಾಜ್, ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಅಮಿತ್ ಶಾ ಕಾರ್ಯಕ್ರಮದಲ್ಲಿ ಭಾಗಿಯಾಗಲು


ಶಾಸಕ ರಾಮದಾಸ್ ನೇತೃತ್ವದಲ್ಲಿ ಮಂಡ್ಯಕ್ಕೆ ತೆರಳಿದ 2 ಸಾವಿರ ಕಾರ್ಯಕರ್ತರು



ಮೈಸೂರು, ಡಿ.30(ಆರ್‌ಕೆಬಿ)– ಮಂಡ್ಯದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿನಿಂದ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ನೇತೃತ್ವದಲ್ಲಿ 2 ಸಾವಿರ ಮಂದಿ ಬಿಜೆಪಿ ಕಾರ್ಯಕರ್ತರು ಮೈಸೂರಿನಿಂದ ತೆರಳಿದ್ದರು.

ಮೈಸೂರಿನ ಅರಮನೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಿಂದ 35 ಬಸ್‌ಗಳಲ್ಲಿ ಬಿಜೆಪಿ ಕಾರ್ಯಕರ್ತರು ತೆರಳಿದ್ದರು. ಇದಕ್ಕೂ ಮುನ್ನ ಕಾರ್ಯಕರ್ತರು ಪ್ರಧಾನಿ ಮೋದಿ ಅವರ ತಾಯಿ ಹೀರಾಬೆನ್ ಅವರ ನಿಧನಕ್ಕೆ ಒಂದು ನಿಮಿಷ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

ಬಳಿಕ ಶಾಸಕ ರಾಮದಾಸ್, ಕಾರ್ಯಕರ್ತರ ಮಂಡ್ಯ ಭೇಟಿ ರ್‍ಯಾಲಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ರೂಪಾ, ಕೆ.ಆರ್.ಕ್ಷೇತ್ರ ಬಿಜೆಪಿ ಅಧ್ಯಕ್ಷ ಎಂ.ವಡಿವೇಲು, ಕಾರ್ಯದರ್ಶಿ ನಾಗೇಂದ್ರ, ಶ್ರೀನಿವಾಸ್, ಪ್ರಸಾದ್‌ಬಾಬು, ಸಂತೋಷ್, ಪಾಲಿಕೆ ಸದಸ್ಯರಾದ ಸೌಮ್ಯ ಉಮೇಶ್, ಛಾಯಾದೇವಿ, ಬಿ.ವಿ.ಮಂಜುನಾಥ್, ಗೀತಾ ಯೋಗಾನಂದ್, ಮುಖಂಡರಾದ ಮೈ.ಪು.ರಾಜೇಶ್ ಇನ್ನಿತರರು ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಪ್ರಯಾಸ್ ಯೋಜನೆ ಅಡಿಯಲ್ಲಿ ಡಿ.30 ರಂದು ಮೈಸೂರು ವಿಭಾಗದಲ್ಲಿ ಪ್ರಥಮ ಬಾರಿಗೆ ಡಿಸೆಂಬರ್–2022 ರ ಮಾಹೆಯಲ್ಲಿ 58 ವರ್ಷ ತುಂಬಿದ 10 ಜನ ನೌಕರರಿಗೆ ಪಿಂಚಣಿಯನ್ನು ಇತ್ಯರ್ಥ ಪಡಿಸಿ ಪಿಂಚಣಿ ಪ್ರಮಾಣ ಪತ್ರವನ್ನು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರಾದ ಸುಮನ್ ಗೌರವ್ ಅವರಿಂದ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ವಿಭಾಗದ ನಿಯಂತ್ರಣಾಧಿಕಾರಿಗಳ ಆರ್ ಅಶೋಕ್‌ಕುಮಾರ್ ಉಪಸ್ಥಿತರಿದ್ದರು.

ಆಜಾದಿ ಕಾ ಅಮೃತ್ ಮಹೋತ್ಸವ್ ಪ್ರಯುಕ್ತ ಯೋಗಾಥಾನ್

ಮೈಸೂರು, ಡಿ.30– ಮೈಸೂರು ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜನವರಿ 15 ರಂದು ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಯೋಗಾಥಾನ್–2022 ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮೈಸೂರು ಜಿಲ್ಲೆಯ ಸುಮಾರು 50 ಸಾವಿರ ಯೋಗಾಪಟುಗಳನ್ನು ಒಗ್ಗೂಡಿಸುವ ಕಾರ್ಯಕ್ರಮ ಇದಾಗಿದ್ದೂ, ಹೆಚ್ಚಿನ ಸಂಖ್ಯೆಯಲ್ಲಿ ಯೋಗಾಪಟುಗಳು ಸೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮೈಸೂರು ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಕ್ಕುಗಳಿಂದಾಗಿ ಮಾನವನ ಸರ್ವತೋಮುಖ ಬೆಳವಣಿಗೆ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಅಭಿಮತ



ಮೈಸೂರು,ಡಿ.30(ಎಂಟಿವೈ)– ಹಕ್ಕುಗಳಿರುವುದರಿಂದಲೇ ಮಾನವನ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುತ್ತಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಪುರಭವನದಲ್ಲಿ ಮಾನವ ಹಕ್ಕುಗಳ ಸೇವಾ ಸಮಿತಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಮಾನವ ಹಕ್ಕುಗಳ ಆಚರಣೆ ಮತ್ತು ಕಸ್ತೂರಿ ಚಾರಿಟಬಲ್ ಟ್ರಸ್ಟ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಜಗತ್ತಿನಲ್ಲಿ ನಡೆದ ಎರಡು ಮಹಾಯುದ್ಧಗಳ ಪರಿಣಾಮದಿಂದ ಕೋಟ್ಯಾಂತರ ಮಂದಿ ಅಮಾಯಕರ ಸಾವು ನೋವು ಸಂಭವಿಸಿತು. ಇದು ಮಾನವ ಕುಲವನ್ನು ತಲೆ ತಗ್ಗಿಸುವಂತೆ ಮಾಡಿತು. ಇದರಿಂದ ಎಚ್ಚೆತ್ತುಕೊಂಡ ವಿಶ್ವ ಸಂಸ್ಥೆ ಮನುಷ್ಯನಿಗೆ ಘನತೆಯ ಬದುಕನ್ನು ಖಾತ್ರಿಪಡಿಸುವ ಉದ್ದೇಶದಿಂದ, ಅಪಾಯದ ಅಂಚಿನಿಂದ ಕಾಪಾಡಲು 1946ರಲ್ಲಿ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಮಾಡಿತು. ಅಲ್ಲದೆ, ಯಾರೂ ಮಾನವ ಹಕ್ಕುಗಳ ಉಲ್ಲಂಘಿಸದಂತೆ ಎಚ್ಚರಿಕೆ ನೀಡಿತ್ತು ಎಂದರು.

ಮಾನವನಿಗೆ ಮೂಲಭೂತ ಹಕ್ಕುಗಳು ಮುಖ್ಯ. ಭಾರತೀಯರಿಗೆ ಮೂಲಭೂತ ಹಕ್ಕು ಕಲ್ಪಿಸುವುದರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಶ್ರಮ ಹೆಚ್ಚಾಗಿದೆ. ಪ್ರತಿಯೊಬ್ಬರಿಗೂ ಸಮಾನ ಸ್ಥಾನಮಾನ ಸಿಗಲೇಬೇಕು ಎಂಬ ಬಸವಣ್ಣನ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಮಹಿಳೆಯರು, ದುರ್ಬಲ ವರ್ಗದವರನ್ನು ವಿಶೇಷವಾಗಿ ದೃಷ್ಟಿಯಲ್ಲಿಟ್ಟುಕೊಂಡು ಪ್ರತಿಯೊಬ್ಬ ಭಾರತೀಯನಿಗೂ ಸಮಾನ ಮೂಲಭೂತ ಹಕ್ಕುಗಳು ಸಿಗುವಂತೆ ಮಾಡುವಲ್ಲಿ ಅಂಬೇಡ್ಕರ್ ಸಾಕಷ್ಟು ಶ್ರಮಿಸಿದರು ಎಂದು ಹೇಳಿದರು.

ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ ಮಾತನಾಡಿದರು. ಇದೇ ವೇಳೆ ಇತ್ತೀಚೆಗೆ ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಇಬ್ಬರು ಕರ್ನಾಟಕದ ಸೈನಿಕರ ತಾಯಂದಿರನ್ನು ಸನ್ಮಾನಿಸಲಾಯಿತು. ಅದೇ ರೀತಿ ಸಮಾಜದ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಲಯನ್ ಡಾ.ಎಸ್.ವೆಂಕಟೇಶ್, ರುಕ್ಮಿಣಿ ಚಂದ್ರನ್, ಡಾ.ಎಂ.ಪಿ.ವರ್ಷ, ಡಾ.ರಾಘವನ್, ಕೇಶವ ಮೂರ್ತಿ, ಮಲ್ಲಿಕಾರ್ಜುನ ರುದ್ರಪ್ಪ ಹಾಗೂ ಲಯನ್ ಆರ್.ಮಂಜುನಾಥ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಶ್ರೀ ಇಳೈ ಆಳ್ವಾರ್ ಸ್ವಾಮಿ, ಪತ್ರಕರ್ತ ಡಾ.ಎಚ್.ಎಂ ಕೃಷ್ಣಮೂರ್ತಿ, ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ್, ಆರ್.ಅಶ್ವತ್, ಸಂಘಟನೆ ಪದಾಧಿಕಾರಿಗಳಾದ, ರಾಜೇಶ್, ಕುಮಾರ, ಸವಿತಾ ಶಾಸ್ತ್ರಿ, ವಿನೋದ್ ನಾಯಕ್, ಕಾರ್ತಿಕ್, ರವೀಂದ್ರ ಹಾಗೂ ಇತರರು ಹಾಜರಿದ್ದರು.

ಐದನೇ ಪುಟದಿಂದ

ಕಾಡಾನೆಗೆ ರೈತ ಮಹಿಳೆ ಬಲಿ

ಓಡಿಹೋಗಿ ಪಾರಾದರೆ, ಕುಳಿತು ಹುರುಳಿಸತ್ತೆ ಹಾಸುತ್ತಿದ್ದ ಚಿಕ್ಕಮ್ಮ ಅವರಿಗೆ ತಕ್ಷಣಕ್ಕೆ ಮೇಲೇಳಲು ಸಾಧ್ಯವಾಗಿಲ್ಲ. ಆಗ ಅವರ ಮೇಲೆ ದಾಳಿ ನಡೆಸಿದ ಸಲಗ ಅವರನ್ನು ಸೊಂಡಲಿನಿಂದ ಎತ್ತಿ ಬಿಸಾಕಿ ಕೊಂದಿದೆ. ನಂತರ ದೊಡ್ಡಬೀಚನಹಳ್ಳಿ–ಬಿಳಿಕೆರೆ ರಸ್ತೆಯಲ್ಲಿ ಸಾಗಿದ ಸಲಗ, ಬಿಳಿಕೆರೆಯಿಂದ ಎಲಚವಾಡಿಗೆ ಹೋಗುತ್ತಿದ್ದ ರವಿ ಎಂಬ ಯುವಕನ ಮೇಲೆ ದಾಳಿ ನಡೆಸಿದೆ. ಕೆಲ ದೂರ ಹೋದ ನಂತರ ರಸ್ತೆಯಲ್ಲಿ ಫೋಟೋ ತೆಗೆಯುತ್ತಿದ್ದ ದೊಡ್ಡಬೀಚನಹಳ್ಳಿ ಗ್ರಾಮದ ರಂಜನ್ ಅಲಿಯಾಸ್ ರಂಜು ಎಂಬ ಯುವಕನನ್ನು ಸೊಂಡಿಲಿನಿಂದ ಸೆಳೆದು ಎಸೆದಿದೆ. ರಂಜನ್‌ಗೆ ಕೈ ಮೂಳೆ ಮುರಿದಿದ್ದು, ರವಿ ಸ್ಥಿತಿ ಗಂಭೀರವಾಗಿದೆ. ಇಬ್ಬರೂ ಯುವಕರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಗ್ರಾಮಕ್ಕೆ ಆಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ತಂಡ ರಸ್ತೆಗೆ ಬಾರದಂತೆ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಒಂಟಿಸಲಗವನ್ನು ಕಾಡಿಗೆ ಅಟ್ಟಿ, ಅದರ ಚಲನವಲನಗಳ ಬಗ್ಗೆ ನಿಗಾ ವಹಿಸುತ್ತಾ ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸಿದೆ. ಹುಣಸೂರು ಉಪವಿಭಾಗ ಹಾಗೂ ಮೈಸೂರು ವಿಭಾಗದ ನುರಿತ ಸಿಬ್ಬಂದಿ, ಪಶುವೈದ್ಯರುಗಳಾದ ಡಾ. ರಮೇಶ್, ಡಾ. ಮುಜೀಬ್, ಡಾ. ವಾಸೀಂ ಮಿರ್ಜಾ, ಗುರಿಕಾರ ಅಕ್ರಂ ಸೇರಿದಂತೆ 100ಕ್ಕೂ ಹೆಚ್ಚು ಸಿಬ್ಬಂದಿಯನ್ನು ಈ ಭಾಗದಲ್ಲಿ ನಿಯೋಜಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಸಾಕಾನೆಗಳಾದ ಅಭಿಮನ್ಯು, ಭೀಮಾ, ಮಹೇಂದ್ರ, ಪ್ರಶಾಂತ್ ಹಾಗೂ ಗಣೇಶನನ್ನು ಕರೆಸಿಕೊಂಡು ಪುಂಡಾನೆಯನ್ನು ಸೆರೆಹಿಡಿಯಲು ಕಾರ್ಯಾಚರಣೆ ಆರಂಭಿಸಿದರು.

ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ಅಭಿಮನ್ಯು ಮೇಲೆ ಕುಳಿತಿದ್ದ ಗುರಿಕಾರ ಅಕ್ರಂ ಪುಂಡಾನೆಗೆ ಅರವಳಿಕೆ ಮದ್ದನ್ನು ಡಾಟ್ ಮಾಡಿದರಾದರೂ ಸುಮಾರು ಒಂದು ಗಂಟೆ ಕಾಲ ಈ ಸಲಗ ಕಾಡಿನಲ್ಲಿ ಓಡಾಡುತ್ತಲೇ ಇತ್ತು. 1.30ರ ಸುಮಾರಿಗೆ ಮಂಪರಿನಿಂದ ನೆಲಕ್ಕೆ ಒರಗಿದ ಒಂಟಿ ಸಲಗವನ್ನು ಸಾಕಾನೆ ಸಹಕಾರದಿಂದ ಲಾರಿಗೆ ಹತ್ತಿಸಿ ದುಬಾರೆ ಶಿಬಿರಕ್ಕೆ ಕೊಂಡೊಯ್ಯಲಾಯಿತು. ಕಾಡಾನೆ ದಾಳಿಯಿಂದ ಮೃತಪಟ್ಟ ಚಿಕ್ಕಮ್ಮ ದೇಹವನ್ನು ಬಿಳಿಕೆರೆ ಆಸ್ಪತ್ರೆಗೆ ಕೊಂಡೊಯ್ದು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ನೀಡಲಾಯಿತು. ಮೈಸೂರು ವೃತ್ತದ ಸಿಎಫ್ ಡಾ. ಮಾಲತಿ ಪ್ರಿಯಾ ಅವರು ಚಿಕ್ಕಮ್ಮ ವಾರಸುದಾರರಿಗೆ 2.50 ಲಕ್ಷ ರೂ. ತಾತ್ಕಾಲಿಕ ಪರಿಹಾರದ ಚೆಕ್ ಅನ್ನು ನೀಡಿ, ಇನ್ನುಳಿದ ಮೊತ್ತವನ್ನು ಶೀಘ್ರವೇ ನೀಡುವುದಾಗಿ ಭರವಸೆ ನೀಡಿದ್ದಲ್ಲದೇ, ಕುಟುಂಬ ಸದಸ್ಯರಿಗೆ ಸಾಂತ್ವಾನ ಹೇಳಿದರು. ಸಂಜೆ ವೇಳೆಗೆ ಚಿಕ್ಕಮ್ಮ ಅಂತ್ಯಕ್ರಿಯೆಯನ್ನು ಅವರ ಜಮೀನಿನಲ್ಲಿ ನೆರವೇರಿಸಲಾಯಿತು.

ಜಿಟಿಡಿ ಸಾಂತ್ವನ: ವಿಷಯ ತಿಳಿಯುತ್ತಿದ್ದಂತೆಯೇ ಮೈಸೂರಿನ ಖಾಸಗಿ ಆಸ್ಪತ್ರೆಗೆ ಧಾವಿಸಿದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ತುರ್ತುನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳು ರವಿ ಆರೋಗ್ಯದ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದರು. ನಂತರ ಬಿಳಿಕೆರೆ ಆಸ್ಪತ್ರೆಗೆ ತೆರಳಿದ ಅವರು, ಆನೆ ದಾಳಿಯಿಂದ ಮೃತಪಟ್ಟ ಚಿಕ್ಕಮ್ಮ ಅವರ ಅಂತಿಮ ದರ್ಶನ ಪಡೆದು, ಪತಿ ಸಿದ್ದೇಗೌಡರಿಗೆ ಸಾಂತ್ವನ ಹೇಳಿದರು. ಜೊತೆಗೆ ಜಿ.ಟಿ. ದೇವೇಗೌಡರು ಚಿಕ್ಕಬೀಚನಹಳ್ಳಿ ಗ್ರಾಮಕ್ಕೆ ತೆರಳಿ ಕಾಡಾನೆ ಸೆರೆ ಕಾರ್ಯಾಚರಣೆ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಇಂದು ನಡೆದ ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಸಿಎಫ್ ಡಾ. ಮಾಲತಿ ಪ್ರಿಯಾ, ಹುಣಸೂರು ವಿಭಾಗದ ಡಿಸಿಎಫ್ ಹಾಗೂ ಎಲಿಫೆಂಟ್ ಟಾಸ್ಕ್‌ಫೋರ್ಸ್ ಇನ್‌ಚಾರ್ಜ್ ಪಿ.ಎ. ಸೀಮಾ ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು.

ವಿಧಿವಿಧಾನ ನೆರವೇರಿಸಿದ ಪ್ರಧಾನಿ ಮೋದಿ

ಸಾಮಾನ್ಯರಂತೆ ಸರಳ ಹಾಗೂ ಸಾಂಪ್ರದಾಯಿಕವಾಗಿ ಅಂತಿಮ ಸಂಸ್ಕಾರ ನೆರವೇರಿತು. ತಮ್ಮ ತಾಯಿಯ ನಿಧನದ ಕಾರಣದಿಂದ ಸರ್ಕಾರದ ಯಾವುದೇ ಕಾರ್ಯಕ್ರಮ ನಿಲ್ಲಬಾರದು. ಎಲ್ಲವೂ ಯಥಾಸ್ಥಿತಿಯಲ್ಲಿ ನಡೆಯಬೇಕು ಎಂದು ಮೋದಿ ತಿಳಿಸಿದ್ದರೆಂದು ರಾಜಾನಾಥ್ ಸಿಂಗ್ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಹೀರಾಬೆನ್ ಅವರು ಪ್ರಧಾನಿ ಮೋದಿ ಸೇರಿದಂತೆ ಐವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದು, ದೇಶ–ವಿದೇಶದ ಗಣ್ಯರು ಸಂತಾಪ ಸೂಚಿಸುತ್ತಿದ್ದಾರೆ.

ಹೀರಾಬೆನ್ ಓರ್ವ ಆದರ್ಶ ತಾಯಿಯಾಗಿದ್ದು, ಕಾಲಿಗೆ ಚಕ್ರ ಕಟ್ಟಿಕೊಂಡಂತೆ ಮೋದಿ ಮಾಡುತ್ತಿದ್ದ ಕೆಲಸದ ಹಿಂದೆ ತಾಯಿಯ ಮಾರ್ಗದರ್ಶನ ಇದ್ದೇ ಇತ್ತು. ಪರಿಶ್ರಮವೇ ಜೀವನದ ಮಂತ್ರ ಎಂದು ಮಗನಿಗೆ ಕಿವಿಮಾತು ಹೇಳುತ್ತಿದ್ದರು. ಪ್ರಾಮಾಣಿಕತೆ ಮತ್ತು ಸ್ವಾಭಿಮಾನದ ಜೊತೆಗೆ ನಿರಂತರ ಪರಿಶ್ರಮ ಇರಬೇಕೆಂದು ಸಲಹೆ ನೀಡುತ್ತಿದ್ದರು. ಪ್ರಭಾವಿ ನಾಯಕನಾಗಿದ್ದರೂ ತಾಯಿಯ ಬಳಿ ಮಗುವಾಗಿಬಿಡುತ್ತಿದ್ದರು. ನನ್ನ ಯಶಸ್ಸಿನ ಹಿಂದೆ ತಾಯಿ ಇದ್ದಾರೆ ಎಂದು ಮೋದಿ ಆಗಿಂದಾಗ್ಗೆ ಹೇಳುತ್ತಿದ್ದರು.

ಪ್ರಧಾನಿ ತಾಯಿ ನಿಧನಕ್ಕೆ ದೇಶ–ವಿದೇಶದ ಗಣ್ಯರ ಸಂತಾಪ



> ತಾಯಿಯನ್ನು ಕಳೆದುಕೊಳ್ಳುವ ನಷ್ಟಕ್ಕಿಂತ ದೊಡ್ಡ ನಷ್ಟ ಮತ್ತೊಂದಿಲ್ಲ. ಭಾರತದ ಪ್ರಧಾನಿ ನರೇಂದ್ರ ಮೋದಿಯವರ ತಾಯಿಯ ನಿಧನಕ್ಕೆ ನನ್ನ ಸಂತಾಪ.
>
> – **ಶಹಭಾಜ್ ಷರೀಫ್,** ಪಾಕಿಸ್ತಾನ ಪ್ರಧಾನಿ

ಅಹಮದಾಬಾದ್, ಡಿ.30– ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ತಾಯಿ, ಶತಾಯುಷಿ ಹೀರಾಬೆನ್ ಅಗಲಿಕೆಗೆ ಕೇಂದ್ರ ಸಚಿವ ರಾಜನಾಥ್ ಸಿಂಗ್, ಗುಜರಾತ್ ಸಿಎಂ ಭೂಪೇಂದ್ರ ಪಟೇಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ ಪೂಜ್ಯ ತಾಯಿ ಹೀರಾಬೆನ್ ಅವರು ಇಹಲೋಕ ತ್ಯಜಿಸಿದ ಸುದ್ದಿ ತಿಳಿದು ಅತ್ಯಂತ ಬೇಸರವಾಯಿತು. ದೇಶಕ್ಕೆ ಹೆಮ್ಮೆ ತಂದ ಪುತ್ರನಿಗೆ ಜನ್ಮ ನೀಡಿದ ಮಹಾತಾಯಿಗೆ ಸದ್ಗತಿ ಕೋರುತ್ತೇನೆ. ಪ್ರಧಾನಿಯವರಿಗೆ, ಅವರ ಕುಟುಂಬದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.

ಕುಟುಂಬ ಪೋಷಣೆಗಾಗಿ ಹೀರಾಬೆನ್ ಅವರು ನಡೆಸಿದ ಹೋರಾಟ ಎಲ್ಲರಿಗೂ ಮಾದರಿಯಾಗಿದೆ. ಅವರ ತ್ಯಾಗದ ತಪಸ್ವಿ ಜೀವನ ಸದಾ ನಮ್ಮ ನೆನಪಿನಲ್ಲಿ ಉಳಿಯುತ್ತದೆ. ಈ ದುಃಖದ ಸಮಯದಲ್ಲಿ ಇಡೀ ರಾಷ್ಟ್ರವು ಪ್ರಧಾನಿ ಮೋದಿ ಮತ್ತು ಅವರ ಕುಟುಂಬದೊಂದಿಗೆ ನಿಂತಿದೆ. ಕೋಟಿ ಕೋಟಿ ಜನರ ಪ್ರಾರ್ಥನೆ ನಿಮ್ಮೊಂದಿಗಿದೆ. ಓಂ ಶಾಂತಿ ಎಂದು ಗೃಹ ಸಚಿವ ಅಮಿತ್ ಶಾ ಸಂತಾಪ ಸೂಚಿಸಿದ್ದಾರೆ.

ನರೇಂದ್ರ ಮೋದಿಯವರ ತಾಯಿಯ ನಿಧನದ ಸುದ್ದಿ ಅತ್ಯಂತ ದುಃಖ ತರಿಸಿದೆ, ತಾಯಿಯ ಮರಣವು ಜೀವನದಲ್ಲಿ ಎಂದೂ ಮರೆಯಲಾಗದ ನೋವನ್ನು ಉಂಟು ಮಾಡುತ್ತದೆ. ಈ ಸಮಯದಲ್ಲಿ ಈ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬಕ್ಕೆ ದೇವರು ಕರುಣಿಸಲಿ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಟ್ವೀಟ್ ಮಾಡಿದ್ದಾರೆ. ಮಗನಿಗೆ ತಾಯಿಯೇ ಇಡೀ ಜಗತ್ತು. ತಾಯಿಯ ಸಾವು ಮಗನಿಗೆ ಭರಿಸಲಾಗದ ಮತ್ತು ತುಂಬ ಲಾರದ ನಷ್ಟವಾಗಿದೆ. ಗೌರವಾನ್ವಿತ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ತಾಯಿಯ ನಿಧನವು ತುಂಬಾ ದುಃಖಕರ ವಾಗಿದೆ. ತಾಯಿಗೆ ಶ್ರೀರಾಮ ಅವರ ಪುಣ್ಯ ಪಾದದಲ್ಲಿ ಸ್ಥಾನ ನೀಡಲಿ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯ ನಾಥ್ ಅವರು ಟ್ವೀಟ್ ಮಾಡಿದ್ದಾರೆ.

ಅತ್ಯಂತ ಸರಳ ಮತ್ತು ಪ್ರೀತಿಯ ನಗು ಮುಖ ಯಾವಾಗಲೂ ನೆನಪಿನಲ್ಲಿ ಉಳಿಯುತ್ತದೆ. ದೇವರು ಅಗಲಿದ ಆತ್ಮಕ್ಕೆ ಶಾಂತಿ ನೀಡಲಿ ಮತ್ತು ಈ ದುಃಖದ ಸಮಯದಲ್ಲಿ ನರೇಂದ್ರ ಮೋದಿ ಮತ್ತು ಕುಟುಂಬಕ್ಕೆ ಶಕ್ತಿ ನೀಡಲಿ. ಓಂ ಶಾಂತಿ ಎಂದು ನಿತಿನ್ ಗಡ್ಕರಿ ಸಂತಾಪ ಸೂಚಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ತಾಯಿ ಹೀರಾಬೆನ್ ಅವರ ನಿಧನದಿಂದ ತೀವ್ರ ನೋವಾಗಿದೆ. ತಾಯಿಯ ಸಾವು ಒಬ್ಬರ ಜೀವನದಲ್ಲಿ ತುಂಬಲು ಅಸಾಧ್ಯವಾದ ಶೂನ್ಯ ಭಾವನೆಯನ್ನು ಉಂಟುಮಾಡುತ್ತದೆ. ಈ ದುಃಖದ ಸಮಯದಲ್ಲಿ ನಾನು ಪ್ರಧಾನಿ ಮತ್ತು ಅವರ ಇಡೀ ಕುಟುಂಬಕ್ಕೆ ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಪ್ರಧಾನಿ ಮೋದಿಯವರ ತಾಯಿಗೆ ಸುತ್ತೂರು ಶ್ರೀಗಳ ಅಂತಿಮ ಗೌರವ ಸಲ್ಲಿಕೆ

ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ ಶ್ರೀಗಳು

ಮೈಸೂರು, ಡಿ.30– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಾತೃಶ್ರೀ ಅವರಿಗೆ ಸುತ್ತೂರು ಶ್ರೀಗಳು ಅಂತಿಮ ಗೌರವ ಸಲ್ಲಿಸಿದ್ದಾರೆ.

ವಯೋಸಹಜ ಅನಾರೋಗ್ಯದಿಂದ ಅಹಮದಾಬಾದಿನ ಆಸ್ಪತ್ರೆಗೆ ದಾಖಲಾಗಿದ್ದ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಮಾತೃಶ್ರೀ ಶತಾಯುಷಿ ಹೀರಾಬೆನ್‌ರವರು ಇಂದು (ಶುಕ್ರವಾರ) ಮುಂಜಾನೆ ನಿಧನರಾದರು. ಗಾಂಧಿ ನಗರದ ಸ್ಮೃತಿ ಘಾಟ್‌ನಲ್ಲಿ ನಡೆದ ಅಂತ್ಯಸಂಸ್ಕಾರದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಭಾಗವಹಿಸಿ, ಅಂತಿಮ ಗೌರವ ಸಲ್ಲಿಸಿದರು.

ನಂತರ ನರೇಂದ್ರ ಮೋದಿ ಅವರಿಗೆ ಸಾಂತ್ವನ ಹೇಳಿದ ಅವರು, ಇಂದು ಸಂಜೆ ಅವರ ಮನೆಗೆ ಭೇಟಿ ನೀಡಿ ತಾಯಿ ಅವರ ಆತ್ಮಕ್ಕೆ ಶಾಂತಿಯನ್ನು ಹಾಗೂ ಕುಟುಂಬದ ಸದಸ್ಯರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ನರೇಂದ್ರ ಮೋದಿಯವರ ಸಹೋದರರಾದ ಪ್ರಹ್ಲಾದ್ ಮೋದಿ, ಅಮಿತ್ ಮೋದಿ ಹಾಗೂ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
29/1:– ಗುಜರಾತ್, ಎಂ.ಪಿ.4, ಜ್ಯೋತಿರ್ಲಿಂಗ, ನಾಗನಾಥ, ಸೋಮನಾಥ, ಮಹಾಕಾಳೇಶ್ವರ, ಓಂಕಾರೇಶ್ವರ.
8/2:– ಕಾಶಿ, ಗಯಾ, ಪ್ರಯಾಗರಾಜ್, ಅಯೋಧ್ಯೆ.
11/2:– ಪುರಿ ಜಗನ್ನಾಥ್, ಕೋನಾರ್ಕ್, ಭುವನೇಶ್ವರ್, ಚಂದ್ರಭಾಗ್ ಬೀಚ್.
21/2:– ದೆಹಲಿ, ವೈಷ್ಣೋದೇವಿ, ಶಕ್ತಿ ಪೀಠ ಇತ್ಯಾದಿ.
9591017782 / 9964527782

ಬೇಕಾಗಿದ್ದಾರೆ
ಆಯುರ್ವೇದಿಕ್ ಬಾಡಿ ಸ್ಪಾ ಅಂಡ್ ಬ್ಯೂಟಿ ಪಾರ್ಲರ್‌ನಲ್ಲಿ ಕೆಲಸ ಮಾಡಲು ಆಸಕ್ತಿ ಇರುವ ಹುಡುಗಿಯರು ಮತ್ತು ಮಹಿಳೆಯರಿಗೆ ಉಚಿತ ತರಬೇತಿ ಕೊಟ್ಟು ನಮ್ಮಲ್ಲಿ ಕೆಲಸಕ್ಕೆ ತೆಗೆದು ಕೊಳ್ಳುತ್ತೇವೆ. (ಮೈಸೂರು ಸಿಟಿ) ಇಟ್ಟಿಗೆಗೂಡು) ಮೊದಲ ಆದ್ಯತೆ ಕೊಡಲಾಗುವುದು. ಸಂಪರ್ಕಿಸಿ:
8150997636
6361808662


ಮದ್ದೂರಿನಲ್ಲಿ ಮನೆ ಮಾರಾಟಕ್ಕಿದೆ
3500 Sq.Ft. 3 ಮನೆಯುಳ್ಳ, ಬಾಡಿಗೆ ಬರುತ್ತಿರುವ, ಜಾಗ ಕೋಟೆ ಬೀದಿ ಮದ್ದೂರಿನಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ:
9019597699

ಬಯೋಟೆಕ್ ಕೆಮಿಕಲ್ಸ್‌ರವರಿಂದ
ನಿಮ್ಮ ಮನೆಯ ಆರ್.ಸಿ.ಸಿ ಬಿರುಕು ಬಿಟ್ಟಿದೆಯೇ?, ಗೋಡೆಗಳು ಬಿರುಕು ಬಿಟ್ಟಿದೆಯೇ?, ಬಾತ್ ರೂಂ, ಟಾಯಲೆಟ್‌ಗಳಿಂದ ನೀರು ಬರುತ್ತಿದ್ದರೆ. ಟ್ಯಾಂಕ್ & ಸಂಪುಗಳಲ್ಲಿ ನೀರು ನಿಲ್ಲದಿದ್ದರೆ. ಗ್ಯಾರಂಟಿಯೊಂದಿಗೆ ಸರಿಪಡಿಸಿಕೊಡುತ್ತೇವೆ. ಕೂಡಲೇ ಸಂಪರ್ಕಿಸಿ:
9739333346

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

ACCOUNTANT REQUIRED
with Tally, B.Com for a Factory Located at Kadakola. Male or Female. Call:
9880739934
9916829455


ನೇರ ಸಂದರ್ಶನ
1) Office Assistant / Accounts (B.Com / Tally, ERP / DTP)
2) Security Guard
3) House Keeping
4) Loading / Unloading
9036745292
(Call : 10am to 6 pm)

ವಾಟರ್ ಲೆವೆಲ್ ಕಂಟ್ರೋಲ್‌ಗಾಗಿ

ಸಂಪರ್ಕಿಸಿ:
Mob: 8880558064

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86,000.
9740733021 / 9535028750

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಲಲಿತಾದ್ರಿಪುರ, ಆಲನಹಳ್ಳಿ, ಚಿಕ್ಕಹಳ್ಳಿ, ಉತ್ತನಹಳ್ಳಿ, ರಾಜ್‌ಕುಮಾರ್ ರಸ್ತೆ ಸುತ್ತ ಮುತ್ತ ಇರುವ ಪ್ರದೇಶಗಳಿಗೆ ಎಸ್.ಎಸ್.ಎಲ್.ಸಿ ಪಾಸ್ ಅಥವಾ ಫೇಲ್.
8197821408, 9035269781, 0821-4852002

ಹೋಲ್‌ಸೇಲ್ ದರದಲ್ಲಿ

ಜೀವಂತ ನಾಟಿ ಕೋಳಿ ಕೆಜಿ. ರೂ.230/–, ರೂ.300/– ಕ್ಲೀನಿಂಗ್ 1 ಕೋಳಿಗೆ ರೂ. 20/– ಗೌಡ್ರು ನಾಟಿಕೋಳಿ ಅಂಗಡಿ ನಂ.198/1, ಪಿ & ಟಿ ಕ್ವಾಟ್ರಸ್ ಮೈನ್ ರೋಡ್, ದೊಡ್ಡಮ್ಮ ತಾಯಿ ಕಲ್ಯಾಣ ಮಂಟಪ ಪಕ್ಕ ಎನ್.ಆರ್.ಮೊಹಲ್ಲಾ, ಮೈಸೂರು – 570007
9448048576
9632378020

SITE FOR SALE
30x40 Sites, Bank Loan upto 80%, Near Gurur Bus Stop, Ramabainagar, Mysore. DTCP approved (Corporation Limits) 1.5 kms from J P Nagar Ring Road.
8660105902

JOB VACANCY
(Company appointment) Not security Agency Security Guards, Supervisors, Secutity Officers. Place:- Mysore, Nanjangud, Gundalpet, HD Kote, Hunsur, K R Nagar, Periyapatna, Madikari. Salary: 16k to 25 k, 26 days, PF ESI, Date: 29-12-2022, Place of Interview - Siddappa Square, Vani Vilas Double Road, N R Mohalla, Lakshmipuram, Mysuru, Karnataka - 570004
8618291971 / 9739327747

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ: ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ : 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502
9108100117

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

S.B GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5300 ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ.
9964522225

S.K.CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸ ಮನೆ ಕಟ್ಟಬೇಕೆ, Engineering Plan, 3D Elevation ಸಹಿತ ಮಾಡಿ ಕೊಡುತ್ತೇವೆ.
9620528490

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

OWN HOUSE
2BHK/10SQ/30X40 In 4 Months
30x40 – East – Bogadi/Datgly 92Lakh
30x40 – East – Vijay Ngr 4th – 72Lakh
40x60 – North – Univercity – 125Lakh
Site + No crack. No Leak Bldg Packages 60-150Lakhs
Plan/2D/3D. Architect Services
9886697052

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಕೇರಳ ಕೊಳ್ಳೇಗಾಲ ಶ್ರೀ ಜ್ಯೋತಿಷ್ಯರು
ಪಂII ಮೋಹನ್ ಪೊದುವಾಳ್ (ಕೇರಳ) ಮೋಡಿ ಯಲ್ಲಪ್ಪನವರ ಮಗ ವಿದ್ವಾನ್ ಜ್ಯೋತಿಷಿ ವಿಶಾರದ ಮೋಡಿ ಮಾಂತ್ರಿಕ
ಪಂII ಕುಮಾರ್
ಮೊ.: 9036984793
ಇವರು ಕೇರಳದ ಕುಟ್ಟಿಚೇತನ್ ಕೊಳ್ಳೇಗಾಲದ ಕುಳ್ಳಚೌಡಿ ಅಘೋರ ಮೋಡಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ. ಖಾಯಂ ವಿಳಾಸ: ರಾಜ್ ಗೋಪಾಲ್ ಆಸ್ಪತ್ರೆ ಬಿಲ್ಡಿಂಗ್, ಚೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ವಿಹಾರ ಮಾರ್ಗ, ಸಿದ್ಧಾರ್ಥ ಲೇಔಟ್, ಮೈಸೂರು.

ಸಾಲ ಬೇಕಾಗಿದೆ
Against Property 5 Cr. 1.5% rate of interest.
Contact:
Mob: 8310345191

PART TIME WORK WORK FROM HOME
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ / JOB. ತಿಂಗಳಿಗೆ ಸಂಬಳ 12,000 ದಿಂದ 18,000 ದವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
ಸಂಪರ್ಕಿಸಿ:
9148733213

Marks Card Lost
I, Meghana R, D/o Ramchandru D, residing at #770, 1st Stage, Hebbal Surya Bakery, Mysore-570 017, lost my ICSC 10th Std. Marks Card, Unique ID: 6184487, Name: Meghana R. School Name: Acharya Vidya Kula, Mysuru, Passing year: 2016. Finders please contact:
Mob: 6366510493

ಹೊಸ ಮನೆ
ಮಾರಾಟಕ್ಕಿದೆ ಹಾಗೂ ಸೈಟುಗಳು ಮಾರಾಟಕ್ಕಿವೆ. ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
Mob: 8050345574

ಶ್ರೀ ರಾಘವೇಂದ್ರ ಕೊಳ್ಳೇಗಾಲ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ
ಪಂ। ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ.: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಭಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾII ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ), ಮೈಸೂರು.

FOR SALE
Full established school LKG to 5th Std. (English medium) is for sale.
Contact immediately.
Mob: 7406299802

ಸೈಟು ಮಾರಾಟಕ್ಕಿದೆ
30x30 - S/F, 30x40 E/F
40x60 - N/F, 40x60 W/F
ಯೂನಿವರ್ಸಿಟಿ ಬಡಾವಣೆ ಎದುರು
30x40 - S/F ವರಕೋಡ್ ಹತ್ತಿರ
30x50 - E/F ವರಕೋಡ್ ಹತ್ತಿರ
Mob: 9900372792

FOR SALE
1) 30x40, 30x50 sites in Defence Apartment, near Kote Road. (2) 1 acre land Hullahalli and Harohalli, H.D. Kote Road. (3) Semi commercial 40x45 S/W C, R.K. Nagar 'I' Block. (4) 40x60 K.C. Layout. (5) 30x40, 12 Near Elwala. 6) 40x60 Commercial Elwala to Srirangapatna Road.
PRAKRUTHI PROPERTIES
90359 90359, 95386 90359

ಮಂಡಿ ನೋವು
ಮಂಡಿ ನೋವು, ಸೊಂಟ ನೋವು, ಬೆನ್ನು ನೋವು ಎಷ್ಟೇ ಹಳೆಯದಾದರೂ ಹಾಗೂ ಎಷ್ಟೇ ಜಾಸ್ತಿ ಇರಲಿ 100% ಆಯುರ್ವೇದ ಚಿಕಿತ್ಸೆಗಾಗಿ ಸಂಪರ್ಕಿಸಿ ಯಾವುದೇ ಅಡ್ಡ ಪರಿಣಾಮ ಇರುವುದಿಲ್ಲ.
6361740552

SITES FOR SALE IN BOGADI ROAD
20x30, 30x40, 30x50, 40x60
MUDA & DTCP Bank ಸಾಲದೊಂದಿಗೆ ತಕ್ಷಣ ನೊಂದಣಿ
9620439490

ಮದುವೆಯ ಆಶ್ರಮ
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ:
ಡಾ.ಗುರೂಜಿ
9448229184
7899625268

ಹೋಂ ನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ 18 ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ ಊಟ, ವಸತಿ ಉಚಿತದೊಂದಿಗೆ, ಸಂಬಳ: 12,000 – 23,000 ರವರೆಗೆ, ಆಧಾರ್ ಕಾರ್ಡ್ & ಫೋಟೋ ಕಡ್ಡಾಯ, ಯಾವುದೇ ಶುಲ್ಕ ಇರುವುದಿಲ್ಲ (ಸರ್ಕಾರಿ ನೋಂದಾಯಿತ ಸಂಸ್ಥೆ)
9743135666
7483960098

ಬೇಕಾಗಿದ್ದಾರೆ
ಮನೆಯಲ್ಲಿ ಇದ್ದು ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ, ಹುಡುಗಿಯರು, ಮಹಿಳೆಯರು 8th, 9th, SSLC, PUC ಪಾಸ್ ಫೇಲ್ ಆದ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಹೋಮ್ ನರ್ಸಿಂಗ್ ಟ್ರೈನಿಂಗ್ ನಾವೆ ಕೊಡುತ್ತೇವೆ. ಸಂಬಳ: 22,000/–. ಸಂಪರ್ಕಿಸಿ:
8951717070

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್‌ಗಳು – 10 ಮಂದಿ ಮೈಸೂರು ಸುತ್ತಮುತ್ತ.
2) ಹೌಸ್ ಕೀಪಿಂಗ್ (ಮಹಿಳೆಯರು ಮಾತ್ರ) ಮೇಟಗಳ್ಳಿ ಸುತ್ತಮುತ್ತ.
ಸಂಪರ್ಕಿಸಿ: ಸುರಕ್ಷವೆಲ್ ಡ್ಯೂಟಿ ಫೋರ್ಸ್
9242406261
9686422400

ಬೇಕಾಗಿದ್ದಾರೆ
ಸರಸ್ವತಿಪುರಂನ ರಿಯಲ್ ಎಸ್ಟೇಟ್ ಕಛೇರಿಯಲ್ಲಿ Part Time ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ : PUC, ಸಮಯ ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆ, ಸಂಬಳ: 7,000/– ರೂಪಾಯಿಗಳು. ಸಂಪರ್ಕಿಸಿ:
8861042449

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೋರೆ ನಾಲ್ವರ ದೈವ ಚೌಡ್ತಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾಹ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಜಮೀನು ಬೇಕಾಗಿದೆ
ಮೈಸೂರಿನಿಂದ 15 ಕಿ.ಮೀ ಒಳಗೆ 1–2 ಎಕರೆ ಜಮೀನು ಬೇಕಾಗಿದೆ. ಮಧ್ಯವರ್ತಿಗಳು ಕ್ಷಮಿಸಿ. ಸಂಪರ್ಕಿಸಿ:
8618580120

MUDA Approved SITE
40x60 E/F ಸೈಟು @ Rs. 48 ಲಕ್ಷ
30x40 E/F ಸೈಟು @ Rs. 22 ಲಕ್ಷ
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್ ಬಹುದ್ದೂರ್ ಶಾಸ್ತ್ರಿ ನಗರದ ನಂತರ.
9538583377

IMMEDIATELY HIRING
We have 12 Brand Home appliances product. (Washing Machine, Diswasher, Fridge, Hob, Chiminey, Oven, T.V., Core cutting) we looking Technicians for installation & com plaint, Repair in Mysore, Mandya, Chamarajanagar, Madikeri & others. We need Freelancer call Basis. We provide good Call Charges. Contact No.:
6366638189 / 9880151303

CHANGE OF NAME
I, Nikshep R Aithal, residing at #933, 4/8th Main, E & F Block, Ramakrishnanagara, Mysuru-570022, have changed my name from R Nikshep to Nikshep R Aithal on my own free will, sworn in before Notary S.Kamala, Mysuru, vide affidavit dated 29th Dec, 2022.
Sd/- Nikshep R Aithal

ತಕ್ಷಣ ಬೇಕಾಗಿದ್ದಾರೆ
ಕಡಕೊಳ ಮತ್ತು ತಾಂಡ್ಯ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ, ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: S/Sup: 24,000, S/Guard : 22,000, ವಯೋಮಿತಿ: 40 ವರ್ಷದ ಒಳಗೆ. ESI ಮತ್ತು PF ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9538567819
9620667819

ಡ್ರೈವರ್ ಬೇಕಾಗಿದ್ದಾರೆ
30 to 45 years Experience in Jeep & Car
ಚೇತನ್ ಬುಕ್ ಹೌಸ್
ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು

ಹೋಟೆಲ್ ಬಾಡಿಗೆಗೆ ಇದೆ
ಕಾಳಿಕಾಂಬ ದೇವಸ್ಥಾನದ ಹತ್ತಿರ, ಕೆ.ಟಿ.ಸ್ಟ್ರೀಟ್, ಮೈಸೂರು.
9980225032

ಬೇಕಾಗಿದ್ದಾರೆ
ಕನ್ನಡ ದಿಂದ ತೆಲುಗುಗೆ ಅನುವಾದಕರು ಹಾಗೂ ತೆಲುಗು DTP ಬೇಕಾಗಿದ್ದಾರೆ
ಚೇತನ್ ಬುಕ್ ಹೌಸ್
ಲಕ್ಷ್ಮೀ ಟಾಕೀಸ್ ಹಿಂಭಾಗ, ಮೈಸೂರು

ಬೇಕಾಗಿದ್ದಾರೆ
ಕಂಪ್ಯೂಟರ್ ಜ್ಞಾನವಿರುವವರು ಹುಡುಗಿಯರು ಬೇಕಾಗಿದ್ದಾರೆ.
ಚೇತನ್ ಬುಕ್ ಹೌಸ್
ಲಕ್ಷ್ಮೀ ಟಾಕೀಸ್ ಹಿಂಭಾಗ, ಮೈಸೂರು

ಗನ್‌ಮ್ಯಾನ್ ಬೇಕಾಗಿದ್ದಾರೆ
ಸಕಲೇಶಪುರ ಹತ್ತಿರವಿರುವ ಕಾಫಿ ಎಸ್ಟೇಟ್ ಒಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕರ್ತವ್ಯ ನಿರ್ವಹಿಸಲು ಲೈಸೆನ್ಸ್ ಹೊಂದಿರುವ ಗನ್‌ಮ್ಯಾನ್ ಹಾಗೂ ದೃಢಕಾಯರಾದ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ:
9035050653
9035050652

WANTED
ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡನಗರ ಹಾಗೂ ಲಲಿತಾದ್ರಿನಗರಗಳಲ್ಲಿ ಸೈಟುಗಳು ಬೇಕಾಗಿದೆ.
20x30, 30x40
9731204530

SNS ENTERPRISES
ಉಚಿತ ತರಬೇತಿ, ಬೇಸಿಕ್ ಕಂಪ್ಯೂಟರ್, C, C+ ಮತ್ತು ಜಾವ 3 ತಿಂಗಳ ಕಾಲ ಉಚಿತವಾಗಿ ಹೇಳಿ ಕೊಡಲಾಗುತ್ತದೆ. ಸ್ಥಳ: ಒಂಟಿಕೊಪ್ಪಲ್, ಜಯನಗರ.
9880604416 / 9008604416

ನಾಗನಹಳ್ಳಿಯಲ್ಲಿ ಯೇಸು ದೇವಾಲಯ ಲೋಕಾರ್ಪಣೆ

ಜಗತ್ತಿನ ಶ್ರೇಷ್ಠ ಧರ್ಮಗಳಲ್ಲಿ ಕ್ರಿಶ್ಚಿಯನ್ ಧರ್ಮವೂ ಒಂದು

ಶಾಸಕ ಜಿ.ಟಿ. ದೇವೇಗೌಡ ಅಭಿಮತ



ಹೆಚ್.ಡಿ.ಕೋಟೆ, ಡಿ.30– ಜಗತ್ತಿನ ಶ್ರೇಷ್ಠ ಧರ್ಮಗಳಲ್ಲಿ ಕ್ರಿಶ್ಚಿಯನ್ ಧರ್ಮವೂ ಒಂದು. ಕ್ರಿಶ್ಚಿಯನ್ ಸಂಸ್ಥೆಗಳು ಶಿಕ್ಷಣ ಹಾಗೂ ಆರೋಗ್ಯಕ್ಕೆ ಮೊದಲ ಆದ್ಯತೆ ಕೊಟ್ಟಿವೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ತಾಲೂಕಿನ ನಾಗನಹಳ್ಳಿಯಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಯೇಸು ದೇವಾಲಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ರಿಶ್ಚಿಯನ್ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ನೀಡುವ ಮೂಲಕ ಜೀವನದಲ್ಲಿ ಶಿಸ್ತು ಕಲಿಸಿ, ಸಮಾಜದಲ್ಲಿ ಉತ್ತಮ ಕಾಯಕವನ್ನು ಮಾಡುವುದನ್ನು ಕಲಿಸುತ್ತಿವೆ ಎಂದರು.

ಕ್ರಿಶ್ಚಿಯನ್ ಧರ್ಮ ಶಾಂತಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದು, ಮನುಷ್ಯ ಸಮಾಜದಲ್ಲಿ ಹೇಗೆ ಬದುಕಬೇಕು ಎಂದು ತಿಳಿಸಿಕೊಟ್ಟಿದೆ. ಜಗತ್ತಿನಲ್ಲಿ ಎಲ್ಲಾ ಧರ್ಮಗಳು ಶ್ರೇಷ್ಠವಾಗಿದ್ದು, ನಮ್ಮ ತಪ್ಪಿನಿಂದ ಅವುಗಳ ಘನತೆಗೆ ಧಕ್ಕೆಯಾಗುತ್ತಿದೆ. ಹೀಗಾಗಿ ನಾವು ಸರಿ ದಾರಿಯಲ್ಲಿ ನಡೆಯಬೇಕಿದೆ. ಜಗತ್ತಿನಲ್ಲಿ ಕ್ರಿಶ್ಚಿಯನ್ ಧರ್ಮದವರನ್ನು ಯಾರು ಬೆಟ್ಟು ಮಾಡಿ ತೋರಿಸುವುದಿಲ್ಲ. ಏಕೆಂದರೆ ಆ ಧರ್ಮದವರಲ್ಲಿ ಎಲ್ಲರನ್ನು ಪ್ರೀತಿಯಿಂದ ಅಪ್ಪಿಕೊಳ್ಳುವ ವಿಶಾಲ ಮನಸ್ಸಿದೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಮೈಸೂರು ಹೊರತುಪಡಿಸಿ ಜಿಲ್ಲೆಯಲ್ಲೇ ಇದು ಅತ್ಯಂತ ದೊಡ್ಡ ಚರ್ಚ್ ಆಗಿದೆ. ಪ್ರತಿಯೊಂದು ಧರ್ಮಕ್ಕೂ ಅದರದ್ದೇ ಆದ ಧ್ಯೇಯೋದ್ದೇಶವಿರುತ್ತದೆ. ಹಾಗೆಯೇ ಕ್ರೈಸ್ತ ಧರ್ಮದ ಪ್ರವಿತ್ರ ಗ್ರಂಥ ಬೈಬಲ್‌ನ ಮೂಲ ಉದ್ದೇಶ ಕ್ಷಮಾ ಗುಣವಾಗಿದೆ. ಈ ಧರ್ಮದ ಅನುಯಾಯಿಗಳಲ್ಲಿ ಹೆಚ್ಚಾಗಿ ಶಾಂತಿ, ಸಹಬಾಳ್ವೆ ಕಾಣಬಹುದು ಎಂದರು.

ಚರ್ಚ್ ನಿರ್ಮಾಣಕ್ಕೆ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಶಾಸಕರಾಗಿದ್ದ ವೇಳೆ 10 ಲಕ್ಷ, ನಮ್ಮ ತಂದೆ ಚಿಕ್ಕಮಾದು 5 ಲಕ್ಷ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ 5 ಲಕ್ಷ ನೀಡಿದ್ದು, ನಾನೂ ಕೂಡ 5 ಲಕ್ಷ ಅನುದಾನ ನೀಡಿದ್ದೇನೆ ಎಂದರು. ನಾಗನಹಳ್ಳಿ ಗ್ರಾಮಕ್ಕೆ ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಿ ಅಭಿವೃದ್ಧಿ ಪಡಿಸಲಾಗಿದೆ. 10.5 ಕೋಟಿ ರೂ. ವೆಚ್ಚದಲ್ಲಿ ಹೆಚ್.ಡಿ.ಕೋಟೆ– ತಾರಕ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ನಾನು ಕೂಡ ಕ್ರಿಶ್ಚಿಯನ್ ಸಂಸ್ಥೆಯ ಹುಣಸೂರಿನ ಸೇಂಟ್ ಜೋಸೆಫ್ ಶಾಲೆಯಲ್ಲಿ ಶಿಕ್ಷಣ ಪಡೆದ ಪರಿಣಾಮ ಇಂದು ಉನ್ನತ ಸ್ಥಾನಕ್ಕೇರಲು ಸಾಧ್ಯವಾಯಿತು ಎಂದ ಅವರು ಈ ಭಾಗದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳಿಗೆ ಬೆಂಬಲ ನೀಡುವುದಾಗಿ ತಿಳಿಸಿದರು.

ಪಾಪುವ ನ್ಯೂಗಿನಿಯ ದೇಶದ ಮಹಾ ಧರ್ಮಧ್ಯಕ್ಷ ಡಾ.ಸರ್ ಜಾನ್ ಕಾರ್ಡಿನಲ್ ರಿಬಾಟ್ ಯೇಸು ದೇವಾಲಯ ಉದ್ಘಾಟಿಸಿ ಧಾರ್ಮಿಕ ಕಾರ್ಯ ನಡೆಸಿಕೊಟ್ಟರು. ಇದೇ ವೇಳೆ ಯೇಸುವಿನ ಧ್ವನಿ ಸುರುಳಿ ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಧರ್ಮ ಗುರುಗಳಾದ ಅಂಟನಿ ವಿಲಿಯಂ, ಥಾಮಸ್ ಅಂಥೋಣಿ, ರೋಸಲಿಯೋ, ಸುಪ್ರಿಯನ್, ಅಲೆಕ್ಸ್, ಡೋಮಾನಿಕ್, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಗ್ರಾಪಂ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಮುಖಂಡರಾದ ಪ್ರದೀಪ್, ಶಾಂತರಾಜು, ಜಯಪ್ರಕಾಶ್ ಚಿಕ್ಕಣ್ಣ, ಸತೀಶ್‌ಗೌಡ, ಸೋಮಾಚಾರಿ, ಉಪಕಾರಿ, ಆಂಥೋಣಿ ಸ್ವಾಮಿ, ಯೇಸುವಿನ ಭಕ್ತರು ಭಾಗವಹಿಸಿದ್ದರು.

ನಿಮ್ಮ ಭವಿಷ್ಯಕ್ಕೆ ನೀವೇ ಶಿಲ್ಪಿ



ಮಲ್ಲುಂಡಿ, ಡಿ.30– ನಿಮ್ಮ ಭವಿಷ್ಯಕ್ಕೆ ನೀವೇ ಶಿಲ್ಪಿಗಳಾಗಬೇಕು ಎಂದು ಮಹಿಳೆಯರಿಗೆ ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ.ಎನ್. ಸದಾನಂದ ಸಲಹೆ ನೀಡಿದರು.

ಇಲ್ಲಿಗೆ ಸಮೀಪದ ಕುರಿಹುಂಡಿ ಪಿಎಸಿಎಸ್ ಆವರಣದಲ್ಲಿ ನಡೆದ ನಬಾರ್ಡ್ ಆರ್ಥಿಕ ನೆರವಿನೊಂದಿಗೆ ಡಿಜಿಟಲ್ ಹಣಕಾಸಿನ ಸಾಕ್ಷರತೆ ಹಾಗೂ ಸಹಕಾರ ಸಂಘಗಳಿಗೆ ಚೆಕ್ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳಾ ಸಬಲೀಕರಣ ಸಹಕಾರ ಸಂಘದ ಉದ್ದೇಶವಾಗಿದ್ದು, ಸಹಕಾರ ಸಂಘದೊಂದಿಗೆ ಕೈ ಜೋಡಿಸಬೇಕು. ಸಂಘದಿಂದ ಪಡೆದ ಸಾಲವನ್ನು ರೈತರು ಸಕಾಲಕ್ಕೆ ಮರು ಪಾವತಿಸಬೇಕು. ರೈತರು ಕೃಷಿ ಜೊತೆಗೆ ಹೈನುಗಾರಿಕೆಗೂ ಹೆಚ್ಚಿನ ಒತ್ತು ನೀಡಿದರೆ ಆರ್ಥಿಕವಾಗಿ ಸಬಲರಾಗಬಹುದು. ದೇಶದಲ್ಲಿ ಹೈನುಗಾರಿಕೆಯು ಒಂದು ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ನಮ್ಮ ಸಹಕಾರ ಸಂಘದಿಂದ ರೈತರ ಅನುಕೂಲಕ್ಕಾಗಿ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು. ಪ್ರತಿಯೊಬ್ಬ ರೈತರು ಸಹಕಾರ ಸಂಘದಿಂದ ಬರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಈ ವೇಳೆ ಟಿಎಪಿಸಿಎಂಎಸ್ ತಾಲೂಕು ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಎಸ್.ಎಂ.ಕೆಂಪಣ್ಣ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಂಜುನಾಥ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಹೆಚ್.ಕೆಂಡಗಣ್ಣಪ್ಪ, ಸಂಘದ ಉಪಾಧ್ಯಕ್ಷ ಮಹದೇವಯ್ಯ, ನಿರ್ದೇಶಕರಾದ ಮರಕಂಡಯ್ಯ, ಶ್ರೀನಿವಾಸ, ರಾಜೇಂದ್ರ, ದೊಡ್ಡ ಸೋಮಣ್ಣ, ರಂಗನಾಥ್, ಬ್ಯಾಂಕ್ ಪ್ರತಿನಿಧಿ ಕೃಷ್ಣ, ಸಿಇಓ ಹರೀಶ್ ಸೇರಿದಂತೆ ಇತರರಿದ್ದರು.

ಹುಣಸೂರು ತಾಲೂಕು ಪಂಚಾಯತ್ ಸಾಮಾನ್ಯ ಸಭೆ

ವಿವಿಧ ಇಲಾಖೆ ಅಧಿಕಾರಿಗಳಿಂದ ಪ್ರಗತಿ ಮಾಹಿತಿ



ಹುಣಸೂರು, ಡಿ.30– ನಗರದ ತಾಪಂ ಸಭಾಂಗಣದಲ್ಲಿ ಆಡಳಿತಾಧಿಕಾರಿ ನಂದ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಆರೋಗ್ಯ ಇಲಾಖೆ ಕೋವಿಡ್ ಸಂಬಂಧ ಕೈಗೊಂಡಿರುವ ಮುಂಜಾಗ್ರತಾ ಕ್ರಮ, ಕೃಷಿ ಇಲಾಖೆ, ಮಕ್ಕಳು ಮತ್ತು ಮಹಿಳಾ ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.

ಕೋವಿಡ್–19ರ ಮುಂಜಾಗ್ರತೆ ಕ್ರಮವಾಗಿ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ 25 ಹಾಸಿಗೆಗಳ ವಾರ್ಡ್, ತುರ್ತು ನಿರ್ವಹಣೆಗಾಗಿ 2 ಆಕ್ಸಿಜನ್ ಪ್ಲಾಂಟ್‌ಗಳನ್ನು ಸಿದ್ಧಪಡಿಸಿಕೊಳ್ಳಲಾಗಿದೆ ಎಂದು ತಾಲೂಕು ಆರೋಗ್ಯ ಅಧಿಕಾರಿ ಕೀರ್ತಿಕುಮಾರ್ ಹೇಳಿದರು.

ಕೃಷಿ ಇಲಾಖೆ: ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್‌ನಲ್ಲಿ ಹೆಚ್ಚು ಮಳೆಯಾಗಿದ್ದು 232 ಹೆಕ್ಟರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಎಂದು ಸಭೆಗೆ ತಿಳಿಸಿದ ಕೃಷಿ ಇಲಾಖೆ ಇಲಾಖೆಯ ಸಹಾಯಕ ನಿರ್ದೇಶಕ ವೆಂಕಟೇಶ್, ಈ ಬಾರಿ 9800 ಹೆಕ್ಟೇರ್ ಪ್ರದೇಶದಲ್ಲಿ ರಾಗಿ, ಜೋಳ, ಉದ್ದು ಬೆಳೆಯಲಾಗಿದೆ. ಈಗಾಗಲೇ ರೈತರಿಗಾಗಿ ತೆರೆದಿರುವ ಖರೀದಿ ಕೇಂದ್ರಗಳಲ್ಲಿ 414 ರೈತರು 13,115 ಕ್ವಿಂಟಲ್ ಭತ್ತ ಹಾಗೂ 69,212 ಕ್ವಿಂಟಲ್ ರಾಗಿ ಮಾರಾಟಕ್ಕೆ ನೋಂದಣಿ ಮಾಡಿಸಿದ್ದಾರೆ ಎಂದರು.

ಮಹಿಳಾ ಮತ್ತು ಮಕ್ಕಳ ಇಲಾಖೆ: ತಾಲೂಕಿನಲ್ಲಿ ಸಾಕಷ್ಟು ಬಾಲ್ಯ ವಿವಾಹ ಪ್ರಕರಣಗಳು ಬೆಳಕಿಗೆ ಬಂದಿದ್ದು, ಅವುಗಳ ವಿರುದ್ಧ ಕ್ರಮ ಕೈಗೊಳ್ಳಲು ಎಲ್ಲ ಇಲಾಖೆಗಳ ಸಹಕಾರ ಅಗತ್ಯ ಎಂದು ಸಿಡಿಪಿಒ ರಶ್ಮಿ ಮನವಿ ಮಾಡಿದರು.

ಕೆಆರ್‌ಐಡಿಎಲ್: ತಾಲೂಕಿನ 32 ಗ್ರಾಮಗಲಲ್ಲಿ ಅಂಬೇಡ್ಕರ್ ಭವನ ಮತ್ತು 4 ಕಡೆ ಜಗಜೀವನ್‌ರಾಂ ಭವನ ಸೇರಿದಂತೆ 50ಕ್ಕೂ ಹೆಚ್ಚು ಕಾಮಗಾರಿಗಳು ಅಪೂರ್ಣಗೊಂಡಿರುವ ಬಗ್ಗೆ ಕೆಆರ್‌ಐಡಿಎಲ್ ಸಂಸ್ಥೆ ವಿರುದ್ಧ ತಾಪಂ ಆಡಳಿತಧಿಕಾರಿ ನಂದ ಕಿಡಿಕಾರಿದರು

ಗ್ರಾಮೀಣ ಕುಡಿಯುವ ನೀರು: ತಾಲೂಕಿನ ಎಲ್ಲಾ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರು ಒದಗಿಸುವ ಯೋಜನೆ ಪ್ರಗತಿಯಲ್ಲಿದೆ ಎಂದು ಎಇಇ ಸಿದ್ದಪ್ಪ ಸಭೆಗೆ ತಿಳಿಸಿದರು. ಸಭೆಯಲ್ಲಿ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ನೇತ್ರಾವತಿ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್, ಹಿಂದುಳಿದ ವರ್ಗಗಳ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜು, ಬಿಇಓ ರೇವಣ್ಣ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್ ಸೇರಿದಂತೆ ಇತರ ಅಧಿಕಾರಿಗಳು ಹಾಜರಿದ್ದರು.

ಗ್ರಾಮಾಭಿವೃದ್ಧಿ ಯೋಜನೆ ಸದುಪಯೋಗಪಡಿಸಿಕೊಳ್ಳಿ

ತಾಲೂಕು ಯೋಜನಾಧಿಕಾರಿ ಸುರೇಶ್‌ಶೆಟ್ಟಿ



ಕಂಪಲಾಪುರ, ಡಿ.30– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಮಹಿಳಾ ಸ್ವಸಹಾಯ ಸಂಘಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಾಲೂಕು ಯೋಜನಾಧಿಕಾರಿ ಸುರೇಶ್ ಶೆಟ್ಟಿ ತಿಳಿಸಿದರು.

ಕಂಪಲಾಪುರ ವಲಯದ ಹೊಸ ಕೊಪ್ಪಲು ಗ್ರಾಮದಲ್ಲಿ ಶುಕ್ರವಾರ ಸ್ಫೂರ್ತಿ ಜ್ಞಾನವಿಕಾಸ ಕೇಂದ್ರದ 8ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಸ್ವಸಹಾಯ ಸಂಘಗಳು ಕೇವಲ ಸಾಲ ಸೌಲಭ್ಯಕ್ಕೆ ಸೀಮಿತವಾಗಿರಬಾರದು .ಮೊದಲು ಮಕ್ಕಳನ್ನು ವಿದ್ಯಾವಂತರಾಗಿ ಮಾಡಬೇಕು. ಧಾರಾವಾಹಿಗಳ ವೀಕ್ಷಣೆಗೆ ಮಾರಿಹೋಗಿ ಮಕ್ಕಳ ಭವಿಷ್ಯಕ್ಕೆ ಮಾರಕವಾಗಬೇಡಿ. ಸಾಮಾಜಿಕ ಕಳಕಳಿ ಬಗ್ಗೆ ತಿಳಿದುಕೊಳ್ಳಿ ಎಂದರು.

ಪತ್ರಕರ್ತ ಸದಾಶಿವ ಮಾತನಾಡಿದರು. ಜ್ಞಾನವಿಕಾಸ ಕೇಂದ್ರದ ಸಮನ್ವಯಾಧಿಕಾರಿ ಶಾರದ, ಮೇಲ್ವಿಚಾರಕಿ ರವಿಕಲಾ ಶೆಟ್ಟಿ, ಯ.ಪಾಪೇಗೌಡ, ಜಯಮ್ಮ, ಒಕ್ಕೂಟದ ಅಧ್ಯಕ್ಷೆ ಮಮತ, ಸೇವಾಪ್ರತಿನಿಧಿ ರೂಪ ಸೇರಿದಂತೆ ಸ್ವಸಹಾಯ ಸಂಘದ ಸದಸ್ಯರು ಹಾಜರಿದ್ದರು. ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿತು.



ತಿ.ನರಸೀಪುರ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನೂತನ ಕ್ಯಾಲೆಂಡರ್ ಅನ್ನು ಸಂಘದ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ ಬಿಡುಗಡೆಗೊಳಿಸಿದರು. ಈ ವೇಳೆ ಉಪಾಧ್ಯಕ್ಷ ಮಲ್ಲಣ್ಣ, ನಿರ್ದೇಶಕರಾದ ಬಿ.ಶಿವಸ್ವಾಮಿ, ಎಸ್.ರಾಜಮ್ಮ, ಎಂ.ಎಂ.ಜಯಣ್ಣ, ಎಂ.ಎಸ್.ಬಸವರಾಜು, ಬಿ.ಎಸ್.ಮಹೇಶ್, ಡಿ.ಕೋಮಲ, ಎನ್.ಮೋಹನ್, ಚೈತ್ರ, ಎನ್.ಬಿ.ಶಾರದ, ಸೋಮಶೇಖರಪ್ಪ, ಮಾಜಿ ನಿರ್ದೇಶಕ ಫಣೀಶ್ ಕುಮಾರ್ ಇತರರಿದ್ದರು.

ಬಿಲ್ ಕಲೆಕ್ಟರ್‌ಗಳಿಂದ ಗ್ರಾಪಂ ಸದೃಢ



ನಂಜನಗೂಡು, ಡಿ.30– ಗ್ರಾಪಂಗಳು ಸದೃಢವಾಗಲು ಬಿಲ್ ಕಲೆಕ್ಟರ್‌ಗಳ ಪಾತ್ರ ಮುಖ್ಯವಾಗಿದ್ದು, ನೀವು ಜನರ ಕಷ್ಟ ಸುಖಗಳಿಗೆ ಸ್ಪಂದಿಸಿ ಕೆಲಸ ನಿರ್ವಹಿಸುವ ಮೂಲಕ ಗ್ರಾಪಂಗಳ ಆಶಯಗಳ ಈಡೇರಿಕೆಗೆ ಮುಂದಾಗಬೇಕು ಎಂದು ಜಿಪಂ ಕಾರ್ಯದರ್ಶಿ ಮತ್ತು ನಂಜನಗೂಡು ತಾಪಂ ಆಡಳಿತಾಧಿಕಾರಿ ಕೃಷ್ಣಂರಾಜು ತಿಳಿಸಿದರು.

ನಗರದ ತಾಪಂ ಕಚೇರಿ ಆವರಣದಲ್ಲಿ ಕರ್ನಾಟಕ ರಾಜ್ಯ ಗ್ರಾಪಂ ಬಿಲ್ ಕಲೆಕ್ಟರ್ ನೌಕರರ ಸಂಘದ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ 29 ಬಿಲ್ ಕಲೆಕ್ಟರ್ ಹುದ್ದೆಗಳು ಖಾಲಿಯಿದ್ದು, ಸರ್ಕಾರದ ನಿರ್ದೇಶನ ಬಂದ ನಂತರ ಶೀಘ್ರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು. ಎಂದರು.

ಸಂಘಟನೆ ಬಲಗೊಳ್ಳುವುದರಿಂದ ನೌಕರರ ಬೇಡಿಕೆ, ಕಷ್ಟ ಸುಖ, ನೌಕರರ ಆಶೋತ್ತರಗಳನ್ನು ಸರ್ಕಾರಕ್ಕೆ ಮುಟ್ಟಿಸಲು ಸುಲಭವಾಗಲಿದೆ. ಇತ್ತೀಚಿನ ದಿನಗಳಲ್ಲಿ ಎಲ್ಲಾ ಹಂತದ ನೌಕರರ ಸಂಘಟನೆಗಳು ರಚನೆಯಾಗುತ್ತಿರುವುದು ಸಂತಸದಾಯಕ ಬೆಳವಣಿಗೆ ಎಂದರು. ತಾಪಂ ಇಓ ಹೆಚ್.ಜಿ.ಶ್ರೀನಿವಾಸ್ ಮಾತನಾಡಿದರು.

ಸಮಾರಂಭದಲ್ಲಿ ಬಿಲ್ ಕಲೆಕ್ಟರ್ ನೌಕರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ್, ರಾಜ್ಯ ಪ್ರಧಾನ ಕಾರ್ಯದರ್ಶಿ ಲಿಂಗೇಶ್, ತಾಲೂಕು ಅಧ್ಯಕ್ಷ ಎನ್.ನಾಗೇಂದ್ರ, ಉಪಾಧ್ಯಕ್ಷ ಕಾಳಯ್ಯ, ಗೌರವಾಧ್ಯಕ್ಷ ಜನಾರ್ಧನ್, ಮಂಜುನಾಥ್, ಕೆ.ನಾಗೇಶ್, ತಾಪಂ ವ್ಯವಸ್ಥಾಪಕ ಜನಾರ್ಧನ್, ಲೆಕ್ಕಾಧಿಕಾರಿ ಶ್ರೀಕಂಠನಾಯಕ ಸೇರಿದಂತೆ ನೌಕರರಿದ್ದರು.

ನಂಜನಗೂಡಲ್ಲಿ ನಟ ಡಾ.ವಿಷ್ಣುವರ್ಧನ್ ಪುಣ್ಯಸ್ಮರಣೆ



ನಂಜನಗೂಡು, ಡಿ.30– ಕಲಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸುವ ಮೂಲಕ ನಾಡಿನ ಕಲೆ, ಸಂಸ್ಕೃತಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದ ಮೇರುನಟ ನಟ ಡಾ.ವಿಷ್ಣುವರ್ಧನ್ ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ತಿಳಿಸಿದರು.

ನಗರದ ನೆಹರು ವೃತ್ತದಲ್ಲಿ ಡಾ.ವಿಷ್ಣುವರ್ಧನ್ ಅಭಿಮಾನಿ ಬಳಗ ಏರ್ಪಡಿಸಿದ್ದ 13ನೇ ಪುಣ್ಯಸ್ಮರಣೆಯಲ್ಲಿ ಡಾ.ವಿಷ್ಣುವರ್ಧನ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ವಿಷ್ಣುವರ್ಧನ್ ಅವರ ಅನೇಕ ಚಿತ್ರಗಳು ಸಾಮಾಜಿಕ ಸಂದೇಶ ನೀಡುವ ಚಿತ್ರಗಳಾಗಿದ್ದವು ಎಂದರು. ಕಾರ್ಯಕ್ರಮದಲ್ಲಿ ಅನ್ನ ಸಂತರ್ಪಣೆ ನೆರವೇರಿಸಲಾಯಿತು. ಸಮಾರಂಭದಲ್ಲಿ ಗಜೇಂದ್ರ, ಕೃಷ್ಣ, ಪ್ರಸಾದ್, ಸೇರಿದಂತೆ ಅಭಿಮಾನಿ ಬಳಗದವರಿದ್ದರು.



ಸಾಲಿಗ್ರಾಮ ಹೊರವಲಯದ ಶ್ರೀ ಯೋಗಾ ನರಸಿಂಹಸ್ವಾಮಿ ವಿದ್ಯಾ ಸಂಸ್ಥೆ ವಿದ್ಯಾರ್ಥಿನಿ ಪ್ರೀತಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಸ್ಯ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾಳೆ. ಜ.7ರಂದು ಶಿವಮೊಗ್ಗದಲ್ಲಿ ನಡೆಯುವ ರಾಜ್ಯ ಮಟ್ಟದ 'ಪ್ರತಿಭಾ ಕಾರಂಜಿ'ಗೆ ಆಯ್ಕೆಯಾಗಿರುವ ವಿದ್ಯಾರ್ಥಿನಿಯನ್ನು ಶಾಲೆ ಅಧ್ಯಾಪಕ ವೃಂದ ಹಾಗೂ ಆಡಳಿತ ಮಂಡಳಿ ಸದಸ್ಯರು ಅಭಿನಂದಿಸಿದ್ದಾರೆ.

ಗ್ರೀನ್ ಕಿಡ್ಸ್ ಡ್ಯಾನ್ಸ್ ವಿದ್ಯಾರ್ಥಿಗಳು ಆಯ್ಕೆ



ಪಿರಿಯಾಪಟ್ಟಣ, ಡಿ.30– ಮೈಸೂರಿನಲ್ಲಿ ಕರ್ನಾಟಕ ಸ್ಪೋರ್ಟ್ಸ್ ಡ್ಯಾನ್ಸ್ ಅಸೋಸಿಯೇಷನ್‌ನಿಂದ ನಡೆದ ರಾಜ್ಯಮಟ್ಟದ ನೃತ್ಯ ಸ್ಪರ್ಧೆಯಲ್ಲಿ 9 ಚಿನ್ನ, 11 ಕಂಚಿನ ಪದಕ ಪಡೆದು ಸತತ 5ನೇ ಬಾರಿ ಪಿರಿಯಾಪಟ್ಟಣದ ಗ್ರೀನ್ ಕಿಡ್ಸ್ ನೃತ್ಯ ಶಾಲೆ ವಿದ್ಯಾರ್ಥಿಗಳು ಚೆನ್ನೈನಲ್ಲಿ ನಡೆಯುವ ರಾಷ್ಟ್ರ ಮಟ್ಟದ ನೃತ್ಯ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಸ್ಪರ್ಧೆಯಲ್ಲಿ ಕೊಡುಗು, ಹಾಸನ, ಮಂಡ್ಯ ಬೆಂಗಳೂರು, ಮೈಸೂರು ಸೇರಿದಂತೆ 250ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು.

ಸಾಲಬಾಧೆ: ರೈತ ಆತ್ಮಹತ್ಯೆ



ಹನಗೋಡು, ಡಿ.30– ಸಾಲಬಾಧೆ ತಾಳಲಾರದೇ ರೈತನೋರ್ವ ವಿಷದ ಮಾತ್ರೆ ನುಂಗಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲ್ಲಿಗೆ ಸಮೀಪದ ನೇರಳಕುಪ್ಪೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಹೇಶ್(46) ಆತ್ಮಹತ್ಯೆ ಮಾಡಿಕೊಂಡವರು. ಮೃತರು ಕಾಮಗೌಡನಹಳ್ಳಿ ಗ್ರಾಮದಲ್ಲಿ ತಮ್ಮ ಹೆಸರಿನಲ್ಲಿದ್ದ 30 ಗುಂಟೆ ಜಮೀನು ಹಾಗೂ ಹೈರಿಗೆ ಗ್ರಾಮದಲ್ಲಿ ತಂದೆ ಸ್ವಾಮಿಗೌಡರ ಹೆಸರಿನಲ್ಲಿದ್ದ 2.17 ಎಕರೆ ಜಮೀನನಲ್ಲಿ ವ್ಯವಸಾಯ ಮಾಡಲು ಹಾಗೂ ಟ್ರಾಕ್ಟರ್ ಖರೀದಿಸಲು ಕಳೆದ 4 ವರ್ಷಗಳ ಹಿಂದೆ ಕೋಟಕ್ ಮಹೇಂದ್ರ ಫೈನಾನ್ಸ್‌ನಲ್ಲಿ 10 ಲಕ್ಷ ರೂ. ಸಾಲ, ಹೆಗ್ಗಂದೂರು ಪಿಎಸಿಎಸ್‌ನಲ್ಲಿ 1.30 ಲಕ್ಷ ರೂ. ಹಾಗೂ ಶ್ರೀನಿವಾಸ್ ಎಂಬುವರ ಬಳಿ ಜಮೀನನ್ನು ಅಡವಿಟ್ಟು 5 ಲಕ್ಷ ರೂ. ಕೈಸಾಲ ಮಾಡಿ, ತಮ್ಮ ಜಮೀನು ಸೇರಿದಂತೆ ಬೇರೆಯವರ ಜಮೀನನ್ನು ಗುತ್ತಿಗೆ ಪಡೆದು ಶುಂಠಿ ಬೆಳೆದಿದ್ದರು. ಆದರೆ ಭಾರೀ ಮಳೆ ಬಿದ್ದ ಕಾರಣ ಶುಂಠಿ ಬೆಳೆ ಕೈ ಸೇರದೆ ಸಾಕಷ್ಟು ನಷ್ಟ ಅನುಭವಿಸಿದ್ದರು. ಅಲ್ಲದೇ ಮಾಡಿದ ಸಾಲ ತೀರಿಸಲಾಗದೇ ಬಡ್ಡಿ ಹೆಚ್ಚಾಗಿದ್ದರಿಂದ ಮನನೊಂದ ಮಹೇಶ್ ಗುರುವಾರ ರಾತ್ರಿ ತಮ್ಮ ಮನೆಯಲ್ಲಿ ವಿಷದ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ ಒದ್ದಾಡುತ್ತಿದ್ದರು. ಇದನ್ನು ಕಂಡ ಮನೆಯವರು ತಕ್ಷಣ ಅವರನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ ಎಂದು ಮೃತರ ಪುತ್ರ ಅಶ್ವಥ್ ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಈ ಸಂಬಂಧ ಪ್ರಕರಣ ದಾಖಲಾಗಿದೆ.

ಶರಣ ಸಾಹಿತ್ಯ ಸಾರ್ವಕಾಲಿಕ: ಪ್ರೊ.ಮಲೆಯೂರು ಗುರುಸ್ವಾಮಿ



> ಬಸವಣ್ಣ ಮಾನವ ಧರ್ಮ ಸಂರಕ್ಷಣೆ ಮಾಡಿದ ಮಹಾಪುರುಷ. 12ನೇ ಶತಮಾನದಲ್ಲಿ ವಚನ ಕ್ರಾಂತಿಯಿಂದ ಸಾಮಾಜಿಕ ಪರಿವರ್ತನೆಯಾಗಿದ್ದು, ಈಗ ಮತ್ತೆ 21ನೇ ಶತಮಾನದಲ್ಲಿ ಪರಿವರ್ತನೆ ಯಾಗಬೇಕಿದೆ. ಈ ನಿಟ್ಟಿನಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಸ್ಥಾಪಿಸಲಾಗಿದೆ.
> –ಎಂ.ಚಂದ್ರಶೇಖರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷ.

ತಿ.ನರಸೀಪುರ, ಡಿ.30– ಶರಣ ಸಾಹಿತ್ಯ ಸಾರ್ವಕಾಲಿಕವಾಗಿದ್ದು, ಇಂದಿನ ಅನೇಕ ಸಮಸ್ಯೆಗಳಿಗೆ ಪರಿಹಾರ ಮತ್ತು ಬದುಕು ಕಟ್ಟಿಕೊಳ್ಳಲು ಅವಶ್ಯಕವಾದ ವಿಚಾರಧಾರೆ ಇದರಲ್ಲಿದೆ. ಈ ಸಾಹಿತ್ಯವನ್ನು ಜನತೆಗೆ ತಲುಪಿಸುವ ಕೆಲಸವಾಗಬೇಕಾಗಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ.ಮಲೆಯೂರು ಗುರುಸ್ವಾಮಿ ತಿಳಿಸಿದರು.

ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಮಹದೇವಪ್ಪ ಸ್ಮಾರಕ ಭವನದಲ್ಲಿ ನಡೆದ 2023ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮತ್ತು ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ವಚನ ಮತ್ತು ಇತರ ಶರಣ ಸಾಹಿತ್ಯದ ಸಂರಕ್ಷಣೆ, ಸಂವರ್ಧನೆ, ಸಂಶೋಧನೆ ಮತ್ತು ಪ್ರಸಾರ ಧ್ಯೇಯವಾಗಿಟ್ಟುಕೊಂಡು ಸ್ಥಾಪಿತವಾಗಿರುವ ಪರಿಷತ್ ಶರಣರ ಪ್ರಗತಿಪರ ಮತ್ತು ಜನಪರ ವಿಚಾರಧಾರೆಯನ್ನು ಜನತೆಗೆ ಮುಟ್ಟಿಸಲು ಶ್ರಮಿಸುತ್ತಿದೆ. ಈ ದಿಸೆಯಲ್ಲಿ ತಾಲೂಕು ಘಟಕ ಮುಂಚೂಣಿಯಲ್ಲಿದೆ ಎಂದರು.

ವಚನಗಳ ಸಾರದಲ್ಲಿಯೇ ನಮ್ಮ ಬದುಕನ್ನು ಉಜ್ವಲಗೊಳಿಸಿಕೊಳ್ಳಲು ಸಾಧ್ಯವಿದೆ. ವಚನ ಮತದಲ್ಲಿಯೇ ಬದುಕಿನ ಸಾರ ಅಡಗಿದ್ದು, ಅದನ್ನು ಅರಿತು ನಡೆಯುವ ಮೂಲಕ ಮುಂದಿನ ಪೀಳಿಗೆಗೆ ಶರಣರ ವಚನಗಳನ್ನು ತಲುಪಿಸುವ ಜವಾಬ್ದಾರಿ ನಮ್ಮದಾಗಿದೆ. ಶರಣ ಸಾಹಿತ್ಯ ಪರಿಷತ್ ಅನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ವಾಟಾಳು ಶ್ರೀಗಳು ಲಕ್ಷ ರೂ.ಗಳ ದತ್ತಿ ನೀಡಿದ್ದು, ಇತರರು ಹೆಚ್ಚಿನ ದತ್ತಿ ನೀಡಲು ಮುಂದಾಗುವಂತೆ ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ನರ್ಸಿಂಗ್ ಹೋಂ ಹಿರಿಯ ವೈದ್ಯ ಡಾ.ಎನ್.ಬಸವಣ್ಣ, ಚಾಮರಾಜನಗರ ಮತ್ತು ಮೈಸೂರು ನೀರು ಬಳಕೆದಾರರ ಮಹಾಮಂಡಳಿ ಅಧ್ಯಕ್ಷ ಚೌಹಳ್ಳಿ ಮಹದೇವಪ್ಪ, ವೀರಶೈವ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪುಟ್ಟಬುದ್ಧಿ ಅವರನ್ನು ಸನ್ಮಾನಿಸಲಾಯಿತು.

ಸಮಾರಂಭದ ಸಾನ್ನಿಧ್ಯವನ್ನು ವಾಟಾಳು ಸೂರ್ಯ ಸಿಂಹಾಸನ ಮಠದ ಡಾ.ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ವಹಿಸಿದ್ದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಡಾ.ಸಿದ್ದಪ್ಪ, ಮಂಡ್ಯ ಸರ್ಕಾರಿ ಮಹಿಳಾ ಪದವಿ ಕಾಲೇಜು ಪ್ರಾಧ್ಯಾಪಕ ಡಾ.ಕುಮಾರ್, ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ತೊಂಟೇಶ್, ಕಾರ್ಯಕಾರಿ ಸಮಿತಿ ಸದಸ್ಯ ಎಂ.ಸಿದ್ದಲಿಂಗಸ್ವಾಮಿ, ವೀರಶೈವ ಸೇವಾ ಸಮಾಜದ ತಾಲೂಕು ಅಧ್ಯಕ್ಷ ಎಸ್.ಶಾಂತರಾಜು, ನೆರಗ್ಯಾತನಹಳ್ಳಿ ವಿರಕ್ತ ಮಠದ ಶಿವಕುಮಾರ ಸ್ವಾಮೀಜಿ, ಹೆಳವರಹುಂಡಿ ಮೂರ್ತಿ ಕುರುಬೂರು ಶಿವು, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಅಂಗಡಿ ನಾಗೇಶ್, ಸಾಲೂರು ಸ್ವಾಮಿ, ಮಾಧ್ಯಮ ಸಂಚಾಲಕ ದಯಾನಂದ ಪಟೇಲ್, ಕಾನೂನು ಸಲಹೆಗಾರ ಜ್ಞಾನೇಂದ್ರ ಮೂರ್ತಿ, ಕೆಬ್ಬೇಹುಂಡಿ ಶಿವಕುಮಾರ್, ಕುರುಬೂರು ಶಿವು, ಫ್ರಾನ್ಸಿ ಮೋಹನ್, ನಾಗೇಶ್, ರಾಜಶೇಖರ್ ಸೇರಿದಂತೆ ತಾಲೂಕು ಘಟಕದ ಪದಾಧಿಕಾರಿಗಳು ಭಾಗವಹಿಸಿದ್ದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಎಂ.ಸಿ.ಕೆಂಪಯ್ಯ

ಗೌರವ ಅಧ್ಯಕ್ಷರು ಶ್ರೀ ರಾಕಾಸಮ್ಮ ದೇವಸ್ಥಾನ ಟ್ರಸ್ಟ್, ಮೂಗೂರು, ಗಾಣಿಗ ಜನಾಂಗದ ಮುಖಂಡರು ಇವರು ದಿ: 21.12.2022 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿ: 01.01.2023 ಭಾನುವಾರ ಬೆಳಿಗ್ಗೆ 8 ಗಂಟೆಗೆ ಹಾಲುತುಪ್ಪ ಮತ್ತು ಮಧ್ಯಾಹ್ನ 12.00 ಗಂಟೆಗೆ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ನಮ್ಮ ಸ್ವಗೃಹ ಮೂಗೂರು ಗ್ರಾಮ, ತಿ.ನರಸೀಪುರ ತಾ॥ ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ದುಃಖತಪ್ತರು: ಶ್ರೀಮತಿ ಸುಂದ್ರಮ್ಮ, ಶ್ರೀಮತಿ ಸುಮಿತ್ರ ಮತ್ತು ಶ್ರೀ ಬಾಲಶಂಕರ್.ಎಂ.ಕೆ (ಬಾಲು ಮೆಡಿಕಲ್ಸ್) ಮೂಗೂರು ಹಾಗೂ ಬಂಧು–ಮಿತ್ರರು. ಭೋಜನ: ಮಧ್ಯಾಹ್ನ 1 ಗಂಟೆಗೆ

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ